ಮೈಸೂರು ಕೈಪಿಡಿ

೧೯೫೪

ಯಾವಾಗಲೂ

ಹೆಚ್ಚು ಬೆಳಕನ್ನು ಕೊಡುವ

ಮೈಸೂರು ಲ್ಯಾಂಪುಗಳನ್ನೇ

ಉಪಯೋಗಿಸಿ



ತಯಾರಕರು:

ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್

ಮಲ್ಲೇಶ್ವರಂ :: ಬೆಂಗಳೂರು-3


SOMETHING NEW ALL THE TIME
KRISHNA FABRICS are much in demand wherever men want to look smart and well-dressed. Soft, Smooth-texture, Cool, Subdued Colours and Shades, and Dignified Patterns combine to make KRISHNA FABRICS the right wear
FOR ALL OCCASIONS.
SRI KRISHNA SPG & WVG. MILLS LTD
BANGALORE
Krishna Fabrics
SUITINGS – SHIRTINGS
SRI KRISHNA
SPG & WVG MILLS LTD
BANGALORE, 2
H.S.I.

ವಾಹಿನಿ
ಕೈಹೊತ್ತಿಗೆ

ಉತ್ತಮ ಪುಸ್ತಕಗಳ ಸಂಕೇತ

★

ವಾಹಿನಿ ಪ್ರಕಾಶನ

ಜಯಚಾಮರಾಜ ರಸ್ತೆ ★ ಬೆಂಗಳೂರು-೨

ಮೈಸೂರು ಕೈಪಿಡಿ ೧೯೫೪

ಸಂಪಾದಕರು :

ಆರ್. ಎಸ್. ನಾರಾಯಣ್

ಪ್ರಕಾಶಕರು :

ಕೇಸರಿ ಪ್ರಕಟನಾಲಯ

ಬಸವನಗುಡಿ : : ಬೆಂಗಳೂರು ೪

ಬೆಲೆ ರೂ. ೧

ಮುದ್ರಕರು :
ಎಂ. ಎಸ್. ಚಿಂತಾಮಣಿ, ಬಿ. ಎಸ್‌ಸಿ.
ಈಸ್ಟರ್ನ್ ಪ್ರೆಸ್
೧೧-ಎ, ಜಯಚಾಮರಾಜ ರಸ್ತೆ, ಬೆಂಗಳೂರು ೨.

ಪ್ರಕಾಶಕರ ಮಾತು

ಕನ್ನಡದಲ್ಲಿ ಮೈಸೂರು ಕೈಪಿಡಿಯಂತಹ ಪ್ರಕಟನೆ ಇದೇ ಮೊದಲು. ಇಂಗ್ಲೀಷಿನಲ್ಲಿ ನಾವು ೧೯೫೧ ರಿಂದ ವರ್ಷೇವರ್ಷೇ ಪ್ರಕಟಿಸುತ್ತಿರುವ ಕೈಪಿಡಿಗೆ ಜನ ಕೊಡುತ್ತಿರುವ ಉತ್ತೇಜನದಿಂದ ಹುರುಪುಗೊಂಡು ಈ ಕನ್ನಡ ಪ್ರಕಟನೆಯನ್ನು ಈ ವರ್ಷ ಕೈಗೊಂಡಿದ್ದೇವೆ.

ಈ ಕನ್ನಡ ಗ್ರಂಥ ಇಂಗ್ಲೀಷ್ ಗ್ರಂಥದಂತೆಯೇ ಮೈಸೂರನ್ನು ಕುರಿತ ವಿಶ್ವಕೋಶ. ಕನ್ನಡಿಗರು ಈ ಪ್ರಕಟನೆಯನ್ನು ಸ್ವಾಗತಿಸಿ, ಉದ್ಯಮವನ್ನು ಯಶಸ್ವಿಯಾಗಿ ಮುಂದುವರಿಸಲು ನಮ್ಮನ್ನು ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ಈ ಕೈಪಿಡಿಯಲ್ಲಿರುವ ವಿಷಯಗಳು ನಿಷ್ಕೃಷ್ಟವಾಗಿಯೇ ಇರಬೇಕೆಂದು ಸರ್ವ ಪ್ರಯತ್ನವನ್ನೂ ಸಂಪಾದಕರು ಮಾಡಿದ್ದಾರೆ. ಆದರೂ ಅಲ್ಲಲ್ಲಿ ಪ್ರಮಾದವಶದಿಂದ ಲೋಪದೋಷಗಳು ನುಸುಳಿರಬಹುದು; ಅವನ್ನು ಪತ್ತೆ ಮಾಡಿಕೊಟ್ಟು, ಮುಂದಿನ ಪ್ರಕಟನೆ ಇನ್ನೂ ಸಪ್ರಮಾಣವಾಗಿರಲು ವಾಚಕರು ನೆರವಾಗಬೇಕೆಂದು ಆಶಿಸುತ್ತೇವೆ.

ವಿಷಯಗಳು

ಭಾಗ I

ಸಾಮಾನ್ಯ ವಿಚಾರಗಳು

ವಿಷಯಗಳು ಪುಟ 1-16

ಸಾಮಾನ್ಯ ವಿಚಾರಗಳು

ಪ್ರಪಂಚ			ಚದರ ಮೈಲಿಗಳು
ಪ್ರಪಂಚದ ವಿಸ್ತಾರ	....	....	196,950,284
ಜಲಪ್ರದೇಶದ ವಿಸ್ತಾರ	....	....	139,950,284
ಭೂಪ್ರದೇಶದ ವಿಸ್ತಾರ	....	....	57,000,000

ಖಂಡಗಳು			ವಿಸ್ತೀರ್ಣ – ಚದರ ಮೈಲಿಗಳು
ಏಷ್ಯಾ	....	....	17,200,000
ಆಫ್ರಿಕಾ	....	....	11,600,000
ಉತ್ತರ ಅಮೆರಿಕಾ	....	....	9,400,000
ದಕ್ಷಿಣ ಅಮೆರಿಕಾ	....	....	7,200,000
ಅಂಟಾರ್ಕ್ಟಿಕಾ	....	....	5,000,000
ಯೂರೋಪು	....	....	3,900,000
ಆಸ್ಟ್ರೇಲಿಯ	....	....	3,000,000

ಸಾಗರಗಳು			
ಪೆಸಿಫಿಕ್	....	....	63,986,000
ಅಟ್ಲಾಂಟಿಕ್	....	....	30,000,000
ಹಿಂದೂ ಸಾಗರ	....	....	28,350,000
ಉತ್ತರ ಸಾಗರ	....	....	5,541,600

ಸಮುದ್ರಗಳು			
ಮಲಯಾ ಸಮುದ್ರ	....	....	3,107,000
ಮೆಡಿಟರೇನಿಯನ್	....	....	1,145,000
ಕ್ಯಾರಿಬಿಯನ್	....	....	1,049,000
ಬೆಹರಿಂಗ್ ಸಮುದ್ರ	....	....	878,000
ಓಖೋಟ್ಸ್ಕ	....	....	580,000
ಪೂರ್ವ ಚೀನಾ ಸಮುದ್ರ	....	....	482,000
ಪೀತ ಸಮುದ್ರ	....	....	480,000

	ವಿಸ್ತೀರ್ಣ—ಚದರ ಮೈಲಿಗಳು
ಹಡ್ಸನ್ ಕೊಲ್ಲಿ	475,800
ಜಪಾನ್ ಸಮುದ್ರ	472,000
ಅಂಡಮಾನ್ ಸಮುದ್ರ	300,000

ಮುಖ್ಯ ಸರೋವರಗಳು

ಸುಪೀರಿಯರ್	31,820
ವಿಕ್ಟೋರಿಯಾ	26,640
ಆರಲ್	24,600
ಹೂರಾನ್	23,010
ಮಿಚಿಗನ್	22,400
ಚಾಡ್	20,000
ನ್ಯಾಸ	14,200
ಟಾಂಗನೀಕ	12,700

ಮುಖ್ಯ ದ್ವೀಪಗಳು

ಗ್ರೀನ್‌ಲ್ಯಾಂಡ್	839,782
ನ್ಯೂಗಿನಿ	330,000
ಬೋರ್ನಿಯೋ	290,285
ಬ್ಯಾಫಿನ್‌ಲ್ಯಾಂಡ್	237,000
ಮೆಡಗಾಸ್ಕರ್	228,589

ಪರ್ವತ ಶಿಖರಗಳು

	ಸಮುದ್ರಮಟ್ಟದ ಮೇಲೆ ಅಡಿಗಳು
ಮೌಂಟ್ ಎವರೆಸ್ಟ್	29,141
ಗುಡ್‌ವಿನ್–ಆಸ್ಟೆನ್	28,278
ಕಾಂಚನಗಂಗ	28,148
ಧವಳಗಿರಿ	26,796
ಇಲ್ಲಂಪು	25,248
ಅಕೋಂಕಾಗ್ವಾ	22,834
ಚಿಂಬೊರಾಸೋ	20,702
ಮೆಕಿನ್ಲಿ	20,464

ಜನಸಂಖ್ಯೆ

ಪ್ರಪಂಚದ ಜನಸಂಖ್ಯೆ 2,354,128,000. ಅವರಲ್ಲಿ 692,400,000 ಮಂದಿ ಕ್ರೈಸ್ತರು, 350,600,000 ಮಂದಿ ಕನ್‌ಫ್ಯೂಷಿಯನರು ಮತ್ತು ಟಾವೋಯಿಸ್ಟರು, 230,150,000 ಹಿಂದೂಗಳು, 209,020,000 ಮುಸ್ಲಿಮರು, 150,180,000 ಬೌದ್ಧರು, 135,650,000 ಅನೀಮಿಸ್ಟರು, 25,000,000 ಷಿಂಟೋಗಳು ಮತ್ತು 16,838,000 ಯೆಹೂದ್ಯರು.

ಭಾರತ ರಿಪಬ್ಲಿಕ್ಕಿನ ಜನಸಂಖ್ಯೆ 356,829,000. ಅವರಲ್ಲಿ 274,632,000 ಮಂದಿ ಗ್ರಾಮಾಂತರ ಪ್ರದೇಶಗಳಲ್ಲೂ, 44,144,000 ಮಂದಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲೂ ಇದ್ದಾರೆ.

ಹೊರದೇಶಗಳಲ್ಲಿರುವ ಭಾರತೀಯರ ಸಂಖ್ಯೆ 4,133,518. ಅವರಲ್ಲಿ 3,686,061 ಜನ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿಯೇ ಇದ್ದಾರೆ.

ಪ್ರಪಂಚದ ಜನಸಂಖ್ಯೆ

	ಸಾವಿರಗಟ್ಟಲೆ
ಪ್ರಪಂಚ	2,399,900
ಏಷ್ಯಾ	1,272,000
ಯೂರೋಪ್	396,300
ಉತ್ತರ ಮತ್ತು ಮಧ್ಯ ಅಮೆರಿಕಾ	216,300
ರಷ್ಯಾ	197,000
ಆಫ್ರಿಕಾ	198,359
ದಕ್ಷಿಣ ಅಮೆರಿಕಾ	111,400
ಓಷೀನಿಯಾ	12,900

ಭಾರತದ ಜನಸಂಖ್ಯೆ

ಪ್ರಾಂತ	ಜನಸಂಖ್ಯೆ (ಸಾವಿರಗಟ್ಟಲೆ)	ಗಂಡಸರು	ಹೆಂಗಸರು
ಭಾರತ	356,829	183,305	173,524
'ಎ'			
ಅಸ್ಸಾಂ	9,043	4,812	4,231
ಬಿಹಾರ್	40,226	20,224	20,002

ಪ್ರಾಂತ	ಜನಸಂಖ್ಯೆ(ಸಾವಿರಗಟ್ಟಲೆ)	ಗಂಡಸರು	ಹೆಂಗಸರು
ಬೊಂಬಾಯಿ	35,956	18,615	17,341
ಮಧ್ಯ ಪ್ರದೇಶ	21,247	10,663	10,584
ಮದ್ರಾಸ್ (ಆಂಧ್ರ ಸೇರಿ)	56,242	23,140	23,102
ಒರಿಸ್ಸಾ	14,645	7,242	7,403
ಪಂಜಾಬ್	12,641	6,787	5,854
ಉತ್ತರ ಪ್ರದೇಶ	63,215	33,098	30,1175
ಪಶ್ಚಿಮ ಬಂಗಾಳ	24,810	13,345	1,146
'ಬಿ'			
ಹೈದರಾಬಾದ್	18,655	9,431	9,224
ಜಮ್ಮು ಮತ್ತು ಕಾಶ್ಮೀರ	4,410	—	—
ಮಧ್ಯ ಭಾರತ	7,954	4,133	3,821
ಮೈಸೂರು	9,848	4,657	4,417
ಪೆಪ್ಸು	3,494	1,895	1,599
ರಾಜಸ್ಥಾನ	15,290	7,961	7,329
ಸೌರಾಷ್ಟ್ರ	4,137	2,094	2,043
ತಿರುವಾಂಕೂರು-ಕೊಚ್ಚಿ	9,280	4,621	4,659
'ಸಿ'			
ವಿಂಧ್ಯ ಪ್ರದೇಶ	3,575	1,833	1,742
ಅಜ್ಮೀರ್	693	360	333
ಭೋಪಾಲ್	836	438	398
ಬಿಲಾಸಪುರ	126	65	61
ಕೊಡಗು	229	125	104
ದೆಹಲಿ	1,744	987	757
ಹಿಮಾಚಲ ಪ್ರದೇಶ	983	515	468
ಕಚ್	567	273	294
ಮಣಿಪುರ	578	284	294
ತ್ರಿಪುರ	639	336	303
'ಡಿ'			
ಅಂಡಮಾನ್ ಮತ್ತು ನಿಕೋಬಾರ್	31	19	12
ಸಿಕ್ಕಿಂ	138	72	66

ಭಾರತದ ಪ್ರಕೃತಿ ಲಕ್ಷಣಗಳು

ಏಷ್ಯಾಖಂಡದ ಮುಖ್ಯ ಭೂಭಾಗದಿಂದ ಸಮುದ್ರದ ಕಡೆಗೆ ಪ್ರಸರಿಸಿರುವ ಮೂರು ಪರ್ಯಾಯದ್ವೀಪಗಳಲ್ಲಿ ಭಾರತವೂ ಒಂದು. ಉತ್ತರದಲ್ಲಿ ಹಿಮಾಲಯಪರ್ವತದಿಂದಲೂ, ಉಳಿದ ಮೂರು ಕಡೆಗಳಲ್ಲಿ ಸಮುದ್ರದಿಂದಲೂ ಆವೃತವಾಗಿರುವ ಈ ಮಹಾನಾಡು ಬಂಗಾಳಕೊಲ್ಲಿ ಮತ್ತು ಅರಬ್ಬೀಸಮುದ್ರಗಳ ಮಧ್ಯೆ ದಕ್ಷಿಣಕ್ಕೆ ಹಿಂದೂಮಹಾಸಾಗರದ ಕಡೆಗೆ ಕಿರಿದಾಗುತ್ತಾ ಹೋಗಿ ಕನ್ಯಾಕುಮಾರಿಯಲ್ಲಿ ಕೊನೆ ಮುಟ್ಟುವುದು.

12,69,640 ಚದರ ಮೈಲಿ ವಿಸ್ತೀರ್ಣದ ಈ ವಿಶಾಲ ದೇಶವು 30 ಸಂಸ್ಥಾನಗಳನ್ನೊಳಗೊಂಡಿದೆ. 3,500 ಮೈಲಿಯ ಸಮುದ್ರ ಕರಾವಳಿಯಿಂದ ಕೂಡಿದ ಈ ದೇಶದ ಭೂಭಾಗದ ಗಡಿ ಪ್ರದೇಶವು 8,200 ಮೈಲಿಯಷ್ಟಿದೆ.

ವಿಸ್ತೀರ್ಣದ ದೃಷ್ಟಿಯಿಂದ ಭಾರತವು ಪ್ರಪಂಚದಲ್ಲೆಲ್ಲ ಏಳನೆಯ ದೊಡ್ಡ ದೇಶ. ಇದು ಉತ್ತರದಿಂದ ದಕ್ಷಿಣಕ್ಕೆ 2,000 ಮೈಲಿ ಉದ್ದವೂ, ಪೂರ್ವದಿಂದ ಪಶ್ಚಿಮಕ್ಕೆ 1,700 ಮೈಲಿ ಅಗಲವೂ ಇದೆ.

ದೇಶದ ವಿಸ್ತೀರ್ಣವನ್ನು ನೋಡಿದರೆ ಇಲ್ಲಿಯ ಸಮುದ್ರ ಕರಾವಳಿ ಅತ್ಯಲ್ಪ. ಒಳ್ಳೆಯ ಬಂದರುಗಳೂ ಇಲ್ಲ. ಬೊಂಬಾಯಿ, ಗೋವಾಗಳನ್ನು ಬಿಟ್ಟರೆ ಮತ್ತಾವ ನೈಸರ್ಗಿಕ ಬಂದರೂ ಇಲ್ಲಿಲ್ಲ. ಉಳಿದ ಬಂದರೆಲ್ಲ ಕೇವಲ ಕೃತಕವಾದವು.

ಉತ್ತರದಲ್ಲಿರುವ ಹಿಮಾಲಯಾ ಪರ್ವತವು ಪ್ರಪಂಚದಲ್ಲೆಲ್ಲ ಅತ್ಯಂತ ಎತ್ತರವಾದುದು. ಅನೇಕ ಉನ್ನತ ಶಿಖರಗಳು ಗೋಪುರಗಳಂತೆ ಅಲ್ಲಲ್ಲಿ ನಿಂತಿವೆ. ಈಶಾನ್ಯ ಗಡಿ ಭಾಗದಲ್ಲಿ ಪರ್ವತಗಳು ಅಷ್ಟು ಎತ್ತರವಿಲ್ಲ. ಅದೇ ಪ್ರದೇಶದಲ್ಲಿ ಅಸ್ಸಾಮಿನಲ್ಲಿರುವ ಚಿರಾಪುಂಜಿಯು ಪ್ರಪಂಚದಲ್ಲೆಲ್ಲ ಅತ್ಯಂತ ಅಧಿಕವಾಗಿ ಮಳೆ ಬೀಳುವ ಸ್ಥಳ.

ಹಿಮಾಲಯ ಪರ್ವತ ಗೋಡೆಯು ದೇಶದ ಹವಾಗುಣವನ್ನು ಹದಗೊಳಿಸುವುದಕ್ಕೆ ಬಹಳ ಸಹಾಯ ಮಾಡುತ್ತಿದೆ. ಚಳಿಗಾಲದಲ್ಲಿ ಉತ್ತರದಿಂದ ಬೀಸುವ ಹಿಮದ ಗಾಳಿಯನ್ನು ತಡೆದು ಭಾರತ ದೇಶಕ್ಕೆ ಅದು ಬರೆದಂತೆ ಮಾಡುವುದು. ನೈರುತ್ಯ ಆಗ್ನೇಯಗಳಿಂದ ಬರುವ ಮಳೆಯ ಮೋಡಗಳನ್ನು ತಡೆದು ದೇಶದೊಳಗೇ ಮಳೆ ಸುರಿಯುವಂತೆ ಮಾಡುವುದು. ಹಿಮಾಲಯದ ಮೇಲೆ ಸಂಗ್ರಹವಾಗುವ ಮಂಜಿನಗಡ್ಡೆಗಳು ಬೇಸಿಗೆಯಲ್ಲಿ ಕರಗಿ, ಅಲ್ಲಿಂದ ಹರಿಯುವ ನದಿಗಳಿಗೆಲ್ಲ

ಯಥೇಚ್ಛವಾಗಿ ನೀರು ಒದಗುವಂತೆ ಮಾಡುವುವು. ಇದರಿಂದ ಗಂಗಾ, ಯಮುನಾ, ಬ್ರಹ್ಮಪುತ್ರಾ ಮುಂತಾದ ನದಿಗಳಿಗೆ ಬೇಸಿಗೆಯಲ್ಲೂ ನೀರು ಒದಗುವುದು. ಈ ನದಿಗಳು ಮಳೆಗಾಲದಲ್ಲಿಯೇ ಅಲ್ಲದೆ ಬೇಸಿಗೆಯಲ್ಲಿಯೂ ತುಂಬಿ ಹರಿಯುತ್ತಿರುವುವು.

ಗಂಗಾ ನದಿಯ ತಪ್ಪಲು ಪ್ರದೇಶವು ಭಾರತ ದೇಶದ ಮುಖ್ಯ ಸಂಪದ್ಯುಕ್ತ ಭಾಗ. ಅದು ಪಶ್ಚಿಮಕ್ಕೆ ಪಂಜಾಬಿನ ಗಡಿಯಿಂದ ಹಿಡಿದು ಪೂರ್ವಕ್ಕೆ ಬಂಗಾಳಾ ಕೊಲ್ಲಿಯವರೆಗೂ ಹರಡಿರುವುದು.

ದಕ್ಷಿಣಕ್ಕೆ ಬಂದರೆ ವಿಶಾಲವಾದ ಪ್ರಸ್ಥಭೂಮಿಯಿದ್ದಿರುವುದು. ವಿಂಧ್ಯ, ಸಾತ್ಪುರಾ, ಅಜಂತಾ ಪರ್ವತಗಳಿಂದ ಈ ದಕ್ಷಿಣ ಭಾಗವು ಉತ್ತರ ಭಾರತದಿಂದ ಪ್ರತ್ಯೇಕವಾಗಿದೆ. ದಖನ್ ಎಂದು ಕರೆಯಲ್ಪಡುವ ಈ ಪ್ರಸ್ಥಭೂಮಿಯು ಪಶ್ಚಿಮಕ್ಕೆ ಎತ್ತರವಾಗಿಯೂ ಪೂರ್ವಕ್ಕೆ ಹೋಗಹೋಗುತ್ತಾ ತಗ್ಗಾಗಿಯೂ ಇರುವುದು. ದಕ್ಷಿಣಭಾರತದಲ್ಲಿರುವ ನದಿಗಳಲ್ಲಿ ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ಮುಖ್ಯವಾದವು. ಇವೆಲ್ಲ ಸಾಮಾನ್ಯವಾಗಿ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಪೂರ್ವ ಸಮುದ್ರಕ್ಕೆ ಹೋಗಿ ಸೇರುವುವು. ಮಳೆಯೇ ಈ ನದಿಗಳಿಗೆ ಮುಖ್ಯ ಆಧಾರ.

ಜನಸಾಂದ್ರತೆ ಅಧಿಕವಾಗಿರುವುದರಿಂದ ಭಾರತದಲ್ಲಿ ನೈಸರ್ಗಿಕ ಗಿಡವೃಕ್ಷಗಳ ಸಂಪತ್ತು ಕಡಿಮೆಯಾಗಿದೆ. ಆದರೂ ವರ್ಷಕ್ಕೆ 80 ಅಂಗುಲಕ್ಕಿಂತಲೂ ಜಾಸ್ತಿ ಮಳೆ ಬೀಳುವ ಹಲವು ಪ್ರದೇಶಗಳಲ್ಲಿ ವಿಧವಿಧವಾದ ಗಿಡಮರಬಳ್ಳಿಗಳನ್ನೊಳಗೊಂಡ ಅರಣ್ಯಗಳಿವೆ. ಇಲ್ಲಿನ ಆಹಾರ ಬೆಳೆ ಮುಖ್ಯವಾಗಿ ಭತ್ತ, ಗೋಧಿ, ದ್ವಿದಳ ಮತ್ತು ಏಕದಳ ಧಾನ್ಯಗಳು. ಎಣ್ಣೆಯಬೀಜಗಳಲ್ಲಿ ಹರಳು, ಎಳ್ಳು ಮತ್ತು ಕಡಲೆಕಾಯಿ ಮುಖ್ಯ. ಮಾವು, ನಿಂಬೆ, ಕಿತ್ತಲೆ, ಅಡಿಕೆ ಇವು ಇಲ್ಲಿ ಬೆಳೆಯುವ ಪ್ರಮುಖ ಫಲಗಳು. ಕೆಲವು ಕಡೆಗಳಲ್ಲಿ ಸೇಬು, ದ್ರಾಕ್ಷಿ ಮುಂತಾದ ಹಣ್ಣುಗಳೂ ಬೆಳೆಯುವುವು. ಉತ್ತರ ಪರ್ವತಭಾಗಗಳಲ್ಲಿ ತೇ ಎಲೆಯೂ, ದಕ್ಷಿಣದ ಪರ್ವತ ಭಾಗಗಳಲ್ಲಿ ಕಾಫಿ, ಏಲಕ್ಕಿ, ಮೆಣಸು, ರಬ್ಬರುಗಳೂ ಬೆಳೆಯುವುವು.

ವನ್ಯಮೃಗ ಸಂಪತ್ತು ಭಾರತದಲ್ಲಿ ಬಹಳ ಕಡಮೆಯಾಗಿಬಿಟ್ಟಿದೆ. ಒಂದಾನೊಂದು ಕಾಲದಲ್ಲಿ ಅತ್ಯಂತ ಪ್ರಬಲವಾಗಿದ್ದ ಸಿಂಹವು ಈಗ ಕೇವಲ ಸೌರಾಷ್ಟ್ರದ ಗಿರ್ ಅರಣ್ಯ ಪ್ರದೇಶದಲ್ಲಿ ಅಲ್ಪ ಸಂಖ್ಯೆಯಲ್ಲಿ ದೊರೆಯುವುದು. ಹುಲಿ ಮತ್ತು ಆನೆಗಳು ಮಾತ್ರ ಈಗಲೂ ಹೆಚ್ಚಾಗಿ ದೊರೆಯುವುವು.

ಉರಗಗಳು ಹೇರಳವಾಗಿವೆ. ಅವುಗಳಲ್ಲಿ ಮೊಸಳೆ, ನಾಗರಹಾವು ಮುಖ್ಯ. ಹಲವು ಜಾತಿಯ ಮೀನುಗಳೂ ದೊರೆಯುವುವು.

ಭಾರತದ ಇತಿಹಾಸ

ಋಷಿವರ್ಯರ ಮತ್ತು ಸಾಧು ಸಂತರ ಪುರಾತನ ನೆಲೆಯಾದ ಭಾರತ ದೇಶ ಸಹಸ್ರಾರು ವರ್ಷಗಳಿಂದ ತನ್ನ ಸಂಸ್ಕೃತಿ, ಕಲಾವೈಭವ, ಧರ್ಮಸಂಸ್ಕಾರ, ಆರ್ಥಿಕೋನ್ನತಿ ಮತ್ತು ಪ್ರಬುದ್ಧ ಆಳ್ವಿಕೆಯಿಂದ ಅತ್ಯಂತ ವ್ಯವಸ್ಥಿತವಾಗಿ ಅಭಿವೃದ್ಧಿ ಹೊಂದುತ್ತಾ ಬಂದಿತು. ಅದರೂ ಆಗಾಗ್ಗೆ ವಿದೇಶೀಯರ ದಂಡಯಾತ್ರೆಗಳಿಂದ ದೇಶವು ಬಹಳ ಘಾಸಿ ಹೊಂದುತ್ತಾ ಇತ್ತು. ಕ್ರಿಸ್ತಶಕ ಹನ್ನೆರಡನೆ ಶತಮಾನದಿಂದ ತುರ್ಕರು, ಮಂಗೋಲರು, ಆಫ್ಘನರ ಧಾಳಿಗೊಳಗಾಗಿ ದೇಶವು ತನ್ನ ಸ್ವಾತಂತ್ರ್ಯ ಕಳೆದುಕೊಂಡಿತು. ಮೊಗಲ್ ಆಳ್ವಿಕೆಯಲ್ಲಿ ದೇಶದಲ್ಲಿ ಶಾಂತಿ ನೆಲಸಿದರೂ ಹದಿನೇಳನೆ ಶತಮಾನದ ಹೊತ್ತಿಗೆ ಐರೋಪ್ಯ ದೇಶೀಯರ ಧಾಳಿಗೆ ಆರಂಭವಾಗಿ ಕೊನೆಗೆ ಇಂಗ್ಲಿಷರು ಭಾರತವನ್ನೆಲ್ಲ ಗೆದ್ದು ತಮ್ಮ ಪ್ರಭುತ್ವ ಸ್ಥಾಪಿಸಿದರು. ಪಾರತಂತ್ರ್ಯದಿಂದ ನರಳುತ್ತಿದ್ದ ಭಾರತದಲ್ಲಿ ಕಳೆದ ಶತಮಾನದ ಮಧ್ಯ ಭಾಗದಲ್ಲಿ 'ಸಿಪಾಯಿ ದಂಗೆ' ಎಂದು ಕರೆಯಲ್ಪಟ್ಟ ಪ್ರಥಮ ಸ್ವಾತಂತ್ರ್ಯ ಹೋರಾಟ ನಡೆಯಿತು. ಅದರಲ್ಲಿ ಪರಾಭವವುಂಟಾದರೂ ಜನತೆಯಲ್ಲಿ ಸ್ವಾತಂತ್ರ್ಯಾಭಿಲಾಷೆಯೂ ಜಾಗೃತಿಯೂ ಉಂಟಾಗಲು ಅದರಿಂದ ದಾರಿಯಾಯಿತು. 1885ರಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಮಹಾಸಂಸ್ಥೆಯು ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿ ಕ್ರಮಕ್ರಮವಾಗಿ ದೇಶವನ್ನು ಸ್ವಾತಂತ್ರ್ಯದತ್ತ ಒಯ್ದಿತು. 1920ರಲ್ಲಿ ಮಹಾತ್ಮಾ ಗಾಂಧೀಜಿಯವರ ನಾಯಕತ್ವ ದೇಶಕ್ಕೆ ದೊರೆತು ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವೇ ಆರಂಭವಾಯಿತು. ಪ್ರಪಂಚವು ಹಿಂದೆಂದೂ ಕಂಡರಿಯದ ಅಹಿಂಸಾಯುತ ಸತ್ಯಾಗ್ರಹದ ಅಸ್ತ್ರವನ್ನು ಹಿಡಿದು ದೇಶವು ಸ್ವಾತಂತ್ರ್ಯಕ್ಕಾಗಿ ಹೋರಾಡಿತು. ಕೊನೆಗೆ 1947ರ ಆಗಸ್ಟ್ 15ರಲ್ಲಿ ಭಾರತವು ಪರಕೀಯ ಆಳ್ವಿಕೆಯಿಂದ ಪಾರಾಗಿ ಸ್ವತಂತ್ರವಾಯಿತು. ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಂದ ಸಂವಿಧಾನವು ಸಿದ್ಧವಾಯಿತು. 1950ನೇ ಜನವರಿ 26ರಿಂದ ಭಾರತವು ಗಣರಾಜ್ಯವಾಗಿ (ರಿಪಬ್ಲಿಕ್) ಘೋಷಿಸಲ್ಪಟ್ಟಿತು. ಬ್ರಿಟನಿನೊಡನೆ ಸಂಬಂಧ ಉಳಿಸಿಕೊಂಡು ಬಂದರೂ ಬ್ರಿಟಿಷ್ ರಾಜಪ್ರಭುತ್ವದಿಂದ ದೂರವಾಗಿ ಭಾರತವು ಪೂರ್ಣ ಸ್ವತಂತ್ರವಾಗಿದೆ.

ಭಾರತದ ಸಂಸ್ಥಾನಗಳು

‘ಎ’

ಅಸ್ಸಾಂ:—ಭಾರತದ ಈಶಾನ್ಯ ಗಡಿಭಾಗದಲ್ಲಿ ಹಿಮಾಲಯಾ ತಪ್ಪಲಿನಲ್ಲಿರುವ ಸಂಸ್ಥಾನ. 85,012 ಚದರ ಮೈಲಿ ವಿಸ್ತೀರ್ಣವಿದೆ. ಜಿಲ್ಲೆಗಳು 11. ಜನ ಸಂಖ್ಯೆ 90,43,707. ಅತ್ಯಗಾಧವಾಗಿ ಮಳೆ ಸುರಿಯುವ ಚಿರಾಪುಂಜಿ ಪ್ರದೇಶವು ಇಲ್ಲೇ ಇರುವುದು.

ಇಲ್ಲಿನ ವಿಧಾನ ಮಂಡಲಿ ಏಕಸದನವಾಗಿದ್ದು ವಿಧಾನ ಸಭೆಯೊಂದೇ ಇರುವುದು. ರಾಜಧಾನಿ ಷಿಲಾಂಗ್. ರಾಜ್ಯಪಾಲ (ಗವರ್ನರ್) ಶ್ರೀ ಜೈರಾಂದಾಸ್ ದೌಲತ್‌ರಾಂ. ಮುಖ್ಯಮಂತ್ರಿ ಶ್ರೀ ವಿಷ್ಣುರಾಮಮೇಧಿ.

ಬೀಹಾರ್:—ಪೂರ್ವಕ್ಕೆ ಬಂಗಾಳ, ಪಶ್ಚಿಮಕ್ಕೆ ಉತ್ತರ ಪ್ರದೇಶ, ದಕ್ಷಿಣಕ್ಕೆ ಒರಿಸ್ಸಾ ಇವುಗಳ ಮಧ್ಯೆ 70,330 ಚದರ ಮೈಲಿ ವಿಸ್ತೀರ್ಣದಲ್ಲಿ ಬೀಹಾರ ಪ್ರಾಂತ ಹರಡಿದೆ. ಇಲ್ಲಿ 4,02,25,947 ಜನಸಂಖ್ಯೆಯಿದೆ.

ಯಥೇಚ್ಛವಾಗಿ ಖನಿಜಗಳು ದೊರೆಯುವುದರಿಂದ ಇಲ್ಲಿ ಕೈಗಾರಿಕೆಗಳು ಚೆನ್ನಾಗಿ ಬೆಳೆದಿವೆ. ಆದರೂ ಜನಸಂಖ್ಯೆಯಲ್ಲಿ ಶೇ|| 80 ಭಾಗ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಗಂಗಾನದಿಯ ಜಲ ಸಂಪತ್ತು ಇಲ್ಲಿಯ ಭೂಮಿಯನ್ನೆಲ್ಲ ಫಲವತ್ತಾಗಿ ಮಾಡಿದೆ.

ವಿಧಾನ ಮಂಡಲವು ದ್ವಿಸದನವುಳ್ಳದ್ದು—ಎಂದರೆ ವಿಧಾನ ಪರಿಷತ್ತು ಮತ್ತು ವಿಧಾನ ಸಭೆ. ರಾಜಧಾನಿ ಪಾಟ್ನಾ. ರಾಜ್ಯಪಾಲ ಶ್ರೀ ಆರ್. ಆರ್. ದಿವಾಕರ್. ಮುಖ್ಯಮಂತ್ರಿ ಶ್ರೀ ಶ್ರೀಕೃಷ್ಣಸಿಂಹ.

ಬೊಂಬಾಯಿ:—ಪಶ್ಚಿಮ ಕರಾವಳಿಯಲ್ಲಿ ದಕ್ಷಿಣೋತ್ತರವಾಗಿರುವ ಈ ಪ್ರಾಂತವು ಉತ್ತರಕ್ಕೆ ಗುಜರಾತಿನಿಂದ ಹಿಡಿದು ದಕ್ಷಿಣಕ್ಕೆ ಮಂಗಳೂರುವರೆಗೂ ಪ್ರಸರಿಸಿದೆ. ವಿಸ್ತೀರ್ಣ 111,434 ಚದರ ಮೈಲಿ. ಜನಸಂಖ್ಯೆ 3,59,56,000. ಕೈಗಾರಿಕೆಯಲ್ಲಿ ಮುಂದುವರಿದ ಪ್ರದೇಶವಿದು. ಹತ್ತಿ ಗಿರಣಿಗಳೂ ಹಲ ವಿಧವಾದ ಕಾರ್ಖಾನೆಗಳೂ ಅನೇಕವಿವೆ. ಶೇ|| 64 ಮಂದಿ ವ್ಯವಸಾಯವನ್ನವಲಂಬಿಸಿದ್ದಾರೆ.

ಇಲ್ಲಿನ ವಿಧಾನ ಮಂಡಲ ದ್ವಿಸದನವಾಗಿದ್ದು ವಿಧಾನ ಪರಿಷತ್ತು, ವಿಧಾನ

ಸಭೆಗಳನ್ನೊಳಗೊಂಡಿವೆ. ರಾಜಧಾನಿ ಬೊಂಬಾಯಿ. ರಾಜ್ಯಪಾಲ ಶ್ರೀ ಗಿರಿಜಾ ಶಂಕರ ಬಾಜಪಾಯಿ. ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ.

ಮಧ್ಯ ಪ್ರದೇಶ:— ಭಾರತದ ರಾಜ್ಯಗಳಲ್ಲೆಲ್ಲ ಅತ್ಯಂತ ವಿಸ್ತಾರವಾದ ರಾಜ್ಯವಿದು. ಬೊಂಬಾಯಿಗೂ ಬಂಗಾಳಕ್ಕೂ ಮಧ್ಯೆ ಇದು 1,30.272 ಚದರ ಮೈಲಿ ವಿಸ್ತೀರ್ಣವಾಗಿದೆ. ಜಿಲ್ಲೆಗಳು 22. ಜನಸಂಖ್ಯೆ 2,12,47,533. ವ್ಯವಸಾಯವೇ ಇಲ್ಲಿನ ಜನರ ಜೀವಾಳ. ಕೆಲಕೆಲವು ಕೈಗಾರಿಕೆಗಳೂ ಬೆಳೆಯುತ್ತಿವೆ.

ಇಲ್ಲಿನ ವಿಧಾನಮಂಡಲ ಏಕಸದನವಾಗಿದ್ದು, ವಿಧಾನಸಭೆಯೊಂದನ್ನು ಮಾತ್ರ ಹೊಂದಿದೆ. ರಾಜಧಾನಿ ನಾಗಪುರ. ರಾಜ್ಯಪಾಲ ಡಾ॥ ಪಟ್ಟಾಭಿ ಸೀತಾರಾಮಯ್ಯ. ಮುಖ್ಯ ಮಂತ್ರಿ ಶ್ರೀ ರವಿ ಶಂಕರ ಶುಕ್ಲ.

ಪಂಜಾಬ್:—ಭಾರತದ ವಾಯುವ್ಯ ಗಡಿ ಭಾಗದಲ್ಲಿರುವ ಪ್ರಾಂತ. ವಿಸ್ತೀರ್ಣ 37.378 ಚದರ ಮೈಲಿಗಳು. ಜನಸಂಖ್ಯೆ 1,26,41,205. ಜಿಲ್ಲೆಗಳು 13. ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದುತ್ತಿದೆ. ವ್ಯವಸಾಯವೇ ಮುಖ್ಯ ವೃತ್ತಿ. ಗೋಧಿಯೇ ಪ್ರಧಾನ ಬೆಳೆ.

ಇಲ್ಲಿನ ವಿಧಾನ ಮಂಡಲವಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಿದ್ದು ದ್ವಿಸದನವಾಗಿದೆ. ರಾಜಧಾನಿ ಚಂಡೀಘಡ. ರಾಜ್ಯಪಾಲ ಶ್ರೀ ಸಿ. ವಿ. ಎಲ್. ಸಿಂಗ್. ಮುಖ್ಯಮಂತ್ರಿ ಶ್ರೀ ಭೀಮಸೇನ ಸಾಚಾರ್.

ಉತ್ತರ ಪ್ರದೇಶ:—ಭಾರತದ ಉತ್ತರ ಭಾಗದಲ್ಲಿರುವ ಪ್ರಧಾನ ಪ್ರದೇಶ. ವಿಸ್ತೀರ್ಣ. 1,13,409 ಚದರ ಮೈಲಿಗಳು. ಜನಸಂಖ್ಯೆ 6,32,15,000. ಜಿಲ್ಲೆಗಳು 51. ವ್ಯವಸಾಯವೂ ಕೈಗಾರಿಕೆಯೂ ಚನ್ನಾಗಿ ಅಭಿವೃದ್ಧಿಯಾಗುತ್ತಿವೆ. ಗೃಹಕೈಗಾರಿಕೆ ಹೆಚ್ಚಾಗಿ ಬೆಳೆದಿದೆ. ವಿದ್ಯಾಪ್ರಗತಿಯೂ ಚೆನ್ನಾಗಿದೆ.

ವಿಧಾನ ಮಂಡಲವಲ್ಲಿ ಎರಡು ಸದನಗಳಿವೆ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತು. ರಾಜಧಾನಿ ಲಕ್ನೋ. ರಾಜ್ಯಪಾಲ ಶ್ರೀ. ಕೆ. ಎಂ. ಮುನ್ಷಿ. ಮುಖ್ಯಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು.

ಪಶ್ಚಿಮ ಬಂಗಾಳ:—ಭಾರತದ ಪೂರ್ವಗಡಿ ಭಾಗದಲ್ಲಿರುವ ಈ ಪ್ರಾಂತ್ಯವು 30.775 ಚದರ ಮೈಲಿ ವಿಸ್ತೀರ್ಣವಿದೆ. ಜನಸಂಖ್ಯೆ, 2,48,10,000. ಜಿಲ್ಲೆಗಳು 14. ವ್ಯವಸಾಯ ಮತ್ತು ಕೈಗಾರಿಕೆಗಳಲ್ಲಿ ಬಹಳ ಮುಂದುವರಿದಿದೆ. ಫಲವತ್ತಾದ ಭೂಮಿ. ಭತ್ತವೇ ಪ್ರಧಾನ ಆಹಾರ ಬೆಳೆ. ಕೈಗಾರಿಕೆಗಳಲ್ಲಿ ಸೆಣಬು,

ಸಕ್ಕರೆ, ಕಲ್ಲಿದ್ದಲು ಮುಖ್ಯವಾದುವು.

ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳನ್ನೊಳಗೊಂಡ ದ್ವಿಸದನ ವಿಧಾನ ಮಂಡಲವಿದೆ. ರಾಜಧಾನಿ ಕಲ್ಕತ್ತಾ. ರಾಜ್ಯಪಾಲ ಡಾ|| ಎಚ್. ಸಿ. ಮುಖರ್ಜಿ. ಮುಖ್ಯಮಂತ್ರಿ ಡಾ|| ಬಿ. ಸಿ. ರಾಯ್.

ಒರಿಸ್ಸಾ:—ಬಂಗಾಳಕ್ಕೂ ಆಂಧ್ರಕ್ಕೂ ಮಧ್ಯೆ ಇರುವ ಈ ರಾಜ್ಯ 60,136 ಚದರ ಮೈಲಿ ವಿಸ್ತೀರ್ಣ ಹೊಂದಿದೆ. ಜನಸಂಖ್ಯೆ 1,46,45,946.

ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದೆ. ಈಗ ಕೈಗೊಳ್ಳುತ್ತಿರುವ ನದಿ ಯೋಜನೆಗಳಿಂದ ಕೈಗಾರಿಕೆಯೂ ವ್ಯವಸಾಯವೂ ಅಭಿವೃದ್ಧಿಯಾಗುವ ನಿರೀಕ್ಷಣೆಯಿದೆ.

ವಿಧಾನ ಮಂಡಲ ಏಕಸದನವಾಗಿದ್ದು, ವಿಧಾನಸಭೆಯನ್ನು ಮಾತ್ರ ಹೊಂದಿದೆ.

ರಾಜಧಾನಿ ಭುವನೇಶ್ವರ್. ರಾಜ್ಯಪಾಲ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾ. ಮುಖ್ಯಮಂತ್ರಿ ಶ್ರೀ ನವಕೃಷ್ಣ ಚೌಧುರಿ.

ಆಂಧ್ರ:—1953ನೇ ಅಕ್ಟೋಬರಿನಲ್ಲಿ ಸ್ಥಾಪಿತವಾದ ಈ ರಾಜ್ಯವು ಮದ್ರಾಸಿನ ಉತ್ತರಭಾಗದಲ್ಲಿ 12 ತೆಲುಗು ಜಿಲ್ಲೆಗಳನ್ನೊಳಗೊಂಡಿದೆ.

ರಾಜಧಾನಿ ಕರ್ನೂಲ್. ರಾಜ್ಯಪಾಲ ಶ್ರೀ ಚಂದೂಲಾಲ್ ತ್ರಿವೇದಿ. ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂ.

ಮದ್ರಾಸ್:—ಪರ್ಯಾಯ ದ್ವೀಪದ ದಕ್ಷಿಣ ಭಾಗದಲ್ಲಿರುವ ಈ ಸಂಸ್ಥಾನ ಅತ್ಯಂತ ಉದ್ದವಾದ ಸಮುದ್ರಕರಾವಳಿಯನ್ನು ಹೊಂದಿದೆ. ಮದ್ರಾಸ್ ನಗರವನ್ನು ಬಿಟ್ಟು 12 ಜಿಲ್ಲೆಗಳಿವೆ.

ವ್ಯವಸಾಯವೇ ಮುಖ್ಯ ಆಧಾರ. ಭತ್ತವೇ ಪ್ರಧಾನ ಬೆಳೆ. ಖನಿಜಗಳು ಹೆಚ್ಚಾಗಿರುವುದರಿಂದ ಗಣಿ ಕೈಗಾರಿಕೆ ಚೆನ್ನಾಗಿ ಬೆಳೆದಿದೆ.

ವಿಧಾನ ಮಂಡಲವು ದ್ವಿಸದನವುಳ್ಳದಾಗಿದ್ದು ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳನ್ನೊಳಗೊಂಡಿದೆ. ರಾಜಧಾನಿ ಮದ್ರಾಸ್. ರಾಜ್ಯಪಾಲ ಶ್ರೀ ಶ್ರೀ ಪ್ರಕಾಶ. ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ.

'ಬಿ'

ಹೈದರಾಬಾದ್:— ದಖನ್ನಿನ ಪೂರ್ವ ಪಾರ್ಶ್ವಕ್ಕಿರುವ ಈ ರಾಜ್ಯವು 82,168 ಚದುರಮೈಲಿ ವಿಸ್ತೀರ್ಣವುಳ್ಳದಾಗಿದೆ. ಜನಸಂಖ್ಯೆ 1,86,65,108.

ಜನತೆಯಲ್ಲಿ ಅಧಿಕಮಂದಿ ಕೃಷಿ ಜೀವನವನ್ನವಲಂಬಿಸಿದ್ದಾರೆ. ಪೂರ್ವ ಭಾಗದಲ್ಲಿ ಭತ್ತವೂ, ಪಶ್ಚಿಮ ಭಾಗದಲ್ಲಿ ಗೋಧಿ ಮತ್ತು ಜೋಳವೂ ಬೆಳೆಯುವುವು. ಅಲ್ಲದೆ ಹತ್ತಿ, ಬಾರ್ಲಿ, ದ್ವಿದಳಧಾನ್ಯಗಳು, ಎಣ್ಣೆಬೀಜಗಳು ಬೆಳೆಯುವುವು. ಕೈಗಾರಿಕೆಯೂ ತಕ್ಕಮಟ್ಟಿಗೆ ಇರುವುದು.

ವಿಧಾನಮಂಡಲ ಏಕಸದನವಾಗಿದ್ದು ವಿಧಾನಸಭೆ ಮಾತ್ರವಿರುವುದು. ರಾಜಧಾನಿ ಹೈದರಾಬಾದ್. ರಾಜಪ್ರಮುಖರು ನಿಜಾಮರು. ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು.

ಜಮ್ಮು ಮತ್ತು ಕಾಶ್ಮೀರ:— ಭಾರತದ ವಾಯುವ್ಯ ತುದಿಯಲ್ಲಿ ಹಿಮಾಲಯದ ತಪ್ಪಲಲ್ಲಿ ಪ್ರಕೃತಿ ಸೌಂದರ್ಯದ ಖನಿಯಂತಿರುವ ಈ ರಾಜ್ಯವು 2,744 ಚದರ ಮೈಲಿಗಳ ವಿಸ್ತೀರ್ಣವಿದೆ. ಜನಸಂಖ್ಯೆ ಸುಮಾರು 40 ಲಕ್ಷ ಎಂದು ಅಂದಾಜು ಮಾಡಿದೆ.

ಈ ರಾಜ್ಯದಲ್ಲಿ ಆಹ್ಲಾದಕರವಾದ ಹವಾಗುಣವಿದೆ. ಬೇಸಿಗೆಯಲ್ಲಿ ಇಲ್ಲಿನ ತಂಪು ವಾತಾವರಣದ ಸುಖವನ್ನನುಭವಿಸಲು ಪ್ರಪಂಚದ ಎಲ್ಲ ಕಡೆಗಳಿಂದಲೂ ಇಲ್ಲಿಗೆ ಜನ ಬರುತ್ತಾರೆ.

ವ್ಯವಸಾಯವೇ ಜನರ ಮುಖ್ಯ ಜೀವನಾಧಾರ. ಜೊತೆಗೆ ಉಣ್ಣೆ, ರೇಷ್ಮೆ ಕೈಗಾರಿಕೆಯೂ, ಕೆಲವು ಖನಿಗಳೂ ಹಲವು ಜನರಿಗೆ ಉದ್ಯೋಗ ಒದಗಿಸಿಕೊಟ್ಟಿವೆ.

ರಾಜಧಾನಿ ಶ್ರೀನಗರ. ಸದರ್-ಇ-ರಿಯಾಸತ್ (ರಾಜ್ಯಾಧಿಪತಿ) ಯುವರಾಜ ಕರಣ್‌ಸಿಂಗ್. ಮುಖ್ಯಮಂತ್ರಿ ಭಕ್ಷಿ ಗುಲಾಮ್ ಮಹಮದ್.

ಮಧ್ಯಭಾರತ:—1949ರಲ್ಲಿ ಗ್ವಾಲಿಯರ್, ಇಂದೋರ್ ಮತ್ತು ಮಾಳ್ವಾ ಸಂಸ್ಥಾನಗಳು ಒಟ್ಟುಗೂಡಿ ಮಧ್ಯಭಾರತವೆಂಬ ರಾಜ್ಯ ರೂಪುಗೊಂಡಿತು. ವಿಸ್ತೀರ್ಣ 46,478 ಚದರ ಮೈಲಿಗಳು. ಜನಸಂಖ್ಯೆ, 7,954,154.

ವ್ಯವಸಾಯವೇ ಜನರ ಮುಖ್ಯ ವೃತ್ತಿ. ಗೋಧಿ, ಹತ್ತಿ, ಭತ್ತ, ಕಬ್ಬು ಮುಂತಾದುವು ಬೆಳೆಯುವುವು. ಕೈಗಾರಿಕೆಗಳಲ್ಲಿ ಹತ್ತಿ ಬಟ್ಟೆ, ಎಣ್ಣೆ, ಸಕ್ಕರೆ ಮತ್ತು ಸಿಮೆಂಟ್ ಮುಖ್ಯ.

ವಿಧಾನ ಮಂಡಲ ಏಕಸದನವಾಗಿದೆ. ರಾಜಧಾನಿ ಗ್ವಾಲಿಯರ್. ಬೇಸಿಗೆಯ ರಾಜಧಾನಿ ಇಂದೋರ್. ರಾಜಪ್ರಮುಖರು ಗ್ವಾಲಿಯರಿನ ಮಹಾರಾಜಾ ಶ್ರೀ ಜೀವಜಿರಾವ್ ಸಿಂಧ್ಯ. ಮುಖ್ಯಮಂತ್ರಿ ಶ್ರೀ ಮಿಶ್ರಿಲಾಲ್ ಗಂಗ್‌ವಾಲ್.

ಮೈಸೂರು :— 33,310 ಚದರ ಮೈಲಿ ವಿಸ್ತೀರ್ಣವುಳ್ಳ ಈ ರಾಜ್ಯವು

ಮದ್ರಾಸಿಗೂ ಬೊಂಬಾಯಿಗೂ ಮಧ್ಯೆ ದರ್ಖ ಪ್ರಸ್ಥಭೂಮಿಯ ಮೇಲಿದೆ. ಜನ ಸಂಖ್ಯೆ 98,48,684. ಈ ಪೈಕಿ 3,821 ಚದರ ಮೈಲಿ ವಿಸ್ತೀರ್ಣವುಳ್ಳ ಬಳ್ಳಾರಿ ಜಿಲ್ಲೆಯಲ್ಲಿ 773,712 ಜನರಿದ್ದಾರೆ.

ಕೈಗಾರಿಕೆಯಲ್ಲಿ ಮೈಸೂರು ಬಹಳ ಮುಂದುವರಿದಿದೆ. ಆದರೂ ಬಹ್ವಂಶದ ಜನತೆಯ ಮುಖ್ಯವೃತ್ತಿ ವ್ಯವಸಾಯ. ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಮುಖ್ಯವಾದ ಬೆಳೆಗಳು.

ವಿಧಾನ ಮಂಡಲವು ದ್ವಿಸದನವುಳ್ಳದಾಗಿದ್ದು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳನ್ನೊಳಗೊಂಡಿದೆ. ರಾಜಧಾನಿ ಮೈಸೂರು. ಆಡಳಿತ ಕೇಂದ್ರ ಬೆಂಗಳೂರು. ರಾಜಪ್ರಮುಖರು ಮಹಾರಾಜಾ ಶ್ರೀ ಜಯಚಾಮರಾಜ ಒಡೆಯರ್. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ.

ಪೆಪ್ಸು:—'ಪಂಜಾಬ್ ಮತ್ತು ಪೂರ್ವ ಪಂಜಾಬ್ ಸಂಸ್ಥಾನಗಳ ಒಕ್ಕೂಟ' ಎಂಬ ಹೆಸರಿನ ಈ ರಾಜ್ಯವು ಪಂಜಾಬ್ ರಾಜ್ಯದ ಮಧ್ಯದಲ್ಲಿ ಒಂದು ದ್ವೀಪದೋಪಾದಿಯಲ್ಲಿದೆ. ಇದರ ವಿಸ್ತೀರ್ಣ 10,070 ಚದರ ಮೈಲಿ. ಜನಸಂಖ್ಯೆ 3,493,685.

ವ್ಯವಸಾಯವೇ ಜನರ ಮುಖ್ಯ ಜೀವನಾಧಾರ. ಗೋಧಿ, ಕಡಲೆ, ಕಬ್ಬು ಪ್ರಧಾನಗಳು. ಸಕ್ಕರೆ, ಸಿಮೆಂಟ್, ಬಿಸ್ಕತ್ ಮುಂತಾದವು ಮುಖ್ಯ ಕೈಗಾರಿಕೆಗಳು.

ವಿಧಾನ ಮಂಡಲ ಏಕ ಸದನವಾಗಿದ್ದು ವಿಧಾನ ಸಭೆಯೊಂದು ಮಾತ್ರವಿದೆ. ರಾಜಧಾನಿ ಪಾಟಿಯಾಲ. ರಾಜಪ್ರಮುಖರು ಪಾಟಿಯಾಲ ಮಹಾರಾಜರು.

ರಾಜಾಸ್ಥಾನ:—ಭಾರತದ ಪಶ್ಚಿಮ ಗಡಿಯಲ್ಲಿರುವ ಈ ಸಂಸ್ಥಾನ 730 ಮೈಲಿಯಷ್ಟು ದೂರ ಪಾಕಿಸ್ತಾನದ ಗಡಿಯನ್ನು ಮುಟ್ಟಿದೆ. 130,207 ಚದರ ಮೈಲಿ ವಿಸ್ತೀರ್ಣವಿದ್ದರೂ ಇದರ ಜನಸಂಖ್ಯೆ ಮಾತ್ರ 1,5290,797. ಈ ಸಂಸ್ಥಾನ ಬಹುಭಾಗ ಮರುಭೂಮಿಯಾಗಿರುವುದರಿಂದಲೇ ಇಲ್ಲಿ ಜನಸಾಂದ್ರತೆ ಹೆಚ್ಚಾಗಿಲ್ಲ.

ಬಾಜ್ರಾ ಮತ್ತು ಜೋಳ ಇಲ್ಲಿಯ ಮುಖ್ಯ ಬೆಳೆ. ಹತ್ತಿಬಟ್ಟೆ, ಜಮಖಾನ, ಉಣ್ಣೆಬಟ್ಟೆಗಳು ಮುಂತಾದವು ಇಲ್ಲಿನ ಮುಖ್ಯ ಕೈಗಾರಿಕೆಗಳು.

ವಿಧಾನಮಂಡಲವು ಏಕಸದನವುಳ್ಳದ್ದು, ವಿಧಾನಸಭೆ ಮಾತ್ರವಿದೆ. ರಾಜಧಾನಿ ಜೈಪುರ. ಮಹಾರಾಜಪ್ರಮುಖರು ಉದಯಪುರದ ಮಹಾರಾಣಾರವರು; ರಾಜಪ್ರಮುಖರು ಜೈಪುರದ ಮಹಾರಾಜರು; ಉಪರಾಜ ಪ್ರಮುಖರು ಕೋಟಾ ಸಂಸ್ಥಾನದ ಮಹಾರಾವ್‌ರವರು. ಮುಖ್ಯಮಂತ್ರಿ ಶ್ರೀ ಟೀಕಾರಾಮ್ ಪಾಲಿವಾಲ್.

ಸೌರಾಷ್ಟ್ರ:—ಭಾರತದ ಪಶ್ಚಿಮ ತೀರಭಾಗದಲ್ಲಿ ಉತ್ತರಕ್ಕಿರುವ ಈ ಸಂಸ್ಥಾನ

21,421 ಚದರ ಮೈಲಿ ವಿಸ್ತೀರ್ಣವಾಗಿದೆ. 4,137,359 ಜನಸಂಖ್ಯೆಯಿದೆ.

ವ್ಯವಸಾಯವೇ ಮುಖ್ಯ ವೃತ್ತಿ. ಗೋಧಿ, ಜೋಳ, ಬಾಜ್ರಾ, ನೆಲಗಡಲೆ ಮತ್ತು ಹತ್ತಿ ಮುಖ್ಯ ಬೆಳೆಗಳು. ಕೈಗಾರಿಕೆ ಉತ್ತೇಜನೆಗೆ ಆಸ್ಪದ ಕೊಡಲಾಗುತ್ತಿದೆ.

ವಿಧಾನ ಮಂಡಲ ಏಕಸದನವಾಗಿದ್ದು, ವಿಧಾನಸಭೆಯನ್ನೊಳಗೊಂಡಿದೆ. ರಾಜಧಾನಿ ನವಾನಗರ್. ರಾಜಪ್ರಮುಖರು ನವಾನಗರದ ಜಾಂ ಸಾಹೇಬರು. ಮುಖ್ಯಮಂತ್ರಿ ಶ್ರೀ ಯು. ಎನ್. ಢೇಬರ್.

ತಿರುವಾಂಕೂರು-ಕೊಚ್ಚಿ :—ಪಶ್ಚಿಮತೀರಭಾಗದಲ್ಲಿ ಅತ್ಯಂತ ದಕ್ಷಿಣಕ್ಕಿರುವ ಈ ಚಿಕ್ಕ ಸಂಸ್ಥಾನದ ವಿಸ್ತೀರ್ಣ 9,144 ಚದರ ಮೈಲಿ. ಆದರೂ ಜನಸಂಖ್ಯೆ ಮಾತ್ರ 9,280,425.

ವ್ಯವಸಾಯ ಮತ್ತು ಕೈಗಾರಿಕೆಗಳಲ್ಲಿ ಬಹಳ ಮುಂದುವರಿದಿದೆ. ಭತ್ತ, ಕಡಲೆ, ಮೆಣಸು, ರಬ್ಬರ್, ಟೀ, ಏಲಕ್ಕಿ ಮುಂತಾದುವು ಮುಖ್ಯ ಬೆಳೆಗಳು. ಸಕ್ಕರೆ, ರಸಾಯನ ವಸ್ತು, ಪೋರ್ಸಿಲೇನ್ ಮುಂತಾದ ಕೈಗಾರಿಕೆಗಳು ಬೆಳೆದಿವೆ. ಉಪ್ಪನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಿ ಹೊರಕ್ಕೆ ಕಳುಹಿಸಲಾಗುತ್ತಿದೆ.

ಇಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗಿದೆ. ಸ್ತ್ರೀ ವಿದ್ಯಾಭ್ಯಾಸವೂ ಚೆನ್ನಾಗಿದೆ.

ವಿಧಾನ ಮಂಡಲವಲ್ಲಿ ಏಕಸದನವಿದೆ.

ರಾಜಧಾನಿ ತಿರುವನಂತಪುರ. ರಾಜಪ್ರಮುಖರು ತಿರುವಾಂಕೂರು ಮಹಾರಾಜರು. ಉಪರಾಜಪ್ರಮುಖರು ಕೊಚ್ಚಿ ಮಹಾರಾಜರು.

‘ ಸಿ ’

ಅಜ್ಮೀರ್:—ರಾಜಸ್ಥಾನದ ಮಧ್ಯೆ ಸೇರಿರುವ ಈ ಚಿಕ್ಕ ಸಂಸ್ಥಾನ 2,417 ಚದರ ಮೈಲಿ ವಿಸ್ತೀರ್ಣವಾಗಿದೆ. ಜನಸಂಖ್ಯೆ 6,93,372.

ಮಳೆ ಬಹಳ ಸ್ವಲ್ಪ. ಆದ್ದರಿಂದ ಕೇವಲ ಕುಷ್ಕಿ ಬೆಳೆಗಳು ಮಾತ್ರ ಬೆಳೆಯುವುವು. ಕೆಲವು ಕೈಗಾರಿಕೆಗಳೂ ಇವೆ.

ಚೀಫ್ ಕಮೀಷನರು ಶ್ರೀ. ಎ. ಡಿ. ಪಂಡಿತ್. ಮುಖ್ಯಮಂತ್ರಿ ಶ್ರೀ ಹರಿಭಾವ್ ಉಪಾಧ್ಯಾಯ.

ಭೋಪಾಲ್:—ಭಾರತದ ಮಧ್ಯ ಭಾಗದಲ್ಲಿರುವ ಈ ಸಂಸ್ಥಾನ 6,878 ಚದರ ಮೈಲಿ ವಿಸ್ತೀರ್ಣವಿದ್ದು, 8,36,474 ಜನಸಂಖ್ಯೆ ಹೊಂದಿದೆ.

ಭೂಮಿ ಫಲವತ್ತಾಗಿದೆ. ಮೂರನೇ ಎರಡು ಭಾಗವೆಲ್ಲ ಸಾಗುವಳಿಯಾಗುತ್ತಿದೆ. ಗೋಧಿಯೇ ಮುಖ್ಯ ಬೆಳೆ. ಸಕ್ಕರೆ, ಬಟ್ಟೆ ಕೈಗಾರಿಕೆಗಳು ಬೆಳೆಯುತ್ತಿವೆ.

ಚೀಫ್ ಕಮೀಷನರು ಶ್ರೀ ಭಗವಾನ್ ಸಹಾಯ. ಮುಖ್ಯಮಂತ್ರಿ ಡಾ॥ ಶಂಕರ್ ದಯಾಳ್ ಶರ್ಮ.

ಬಿಲಾಸ್‌ಪುರ:—ಪೂರ್ವ ಪಂಜಾಬಿನ ಬೆಟ್ಟಪ್ರದೇಶಗಳಲ್ಲಿರುವ ಈ ಸಂಸ್ಥಾನ 453ಚದರಮೈಲಿ ವಿಸ್ತೀರ್ಣವಾಗಿದೆ. ಜನಸಂಖ್ಯೆ 1,26,099. ಕೇಂದ್ರ ಸರಕಾರವೇ ಇದರ ಆಡಳಿತವನ್ನು ನೇರವಾಗಿ ನಡೆಸುತ್ತಿದೆ. ಚೀಫ್ ಕಮಿಷನರ್ ಶ್ರೀ ತಿರೀಷ ಚಂದ್ರ ಛಾಬ್ರಾ.

ಕೊಡಗು:—ಮೈಸೂರಿನ ಆಗ್ನೇಯ ಗಡಿಯಲ್ಲಿರುವ ಈ ಚಿಕ್ಕ ಸಂಸ್ಥಾನ 1,586 ಚದರಮೈಲಿ ವಿಸ್ತೀರ್ಣದಲ್ಲಿದೆ. ಇಲ್ಲಿನ ಜನಸಂಖ್ಯೆ 2,29,405.

ಭತ್ತ, ಕಾಫಿ, ಮೆಣಸು ಮತ್ತು ಏಲಕ್ಕಿ ಇಲ್ಲಿ ಬೆಳೆಯುವುವು. ಇಲ್ಲಿ ಬೆಳೆಯುವ ಕಿತ್ತಲೆಹಣ್ಣು ಪ್ರಪಂಚ ಪ್ರಸಿದ್ಧಿಯಾದದ್ದು. ಕೈಗಾರಿಕೆಯಲ್ಲಿ ಅಷ್ಟು ಮುಂದುವರಿದಿಲ್ಲ.

ವಿಧಾನಸಭೆಯೊಂದಿದ್ದು ಅದರಲ್ಲಿ 24 ಜನ ಸದಸ್ಯರಿದ್ದಾರೆ. ರಾಜಧಾನಿ ಮಡಕೇರಿ. ಚೀಫ್‌ಕಮಿಷನರ್ ಕನ್‌ವರ್ ದಯಾಲ್ ಸಿಂಗ್ ಬೇಡಿ. ಮುಖ್ಯ ಮಂತ್ರಿ ಶ್ರೀ ಸಿ.ಎಂ. ಪೂನಚ್ಚ.

ದೆಹಲಿ:—ಪಂಜಾಬಿಗೂ ಉತ್ತರ ಪ್ರದೇಶಕ್ಕೂ ಮಧ್ಯೆ ಇರುವ ದೆಹಲಿ ಸಂಸ್ಥಾನದಲ್ಲಿ ಭಾರತದ ರಾಜಧಾನಿಯಿದೆ. 1911ರಲ್ಲಿ ಕಲ್ಕತ್ತಾದಿಂದ ಭಾರತರಾಜಧಾನಿ ದೆಹಲಿಗೆ ವರ್ಗವಾಯಿತು. ರಾಜಧಾನಿಗಾಗಿ ನವದೆಹಲಿಯು ನೂತನವಾಗಿ ನಿರ್ಮಿತವಾಯಿತು.

ದೆಹಲಿ ಸಂಸ್ಥಾನದಲ್ಲಿ ಹಳೆಯ ದೆಹಲಿ ನಗರವೂ, ನವದೆಹಲಿ ನಗರವೂ, ಸುತ್ತ ಮುತ್ತಲ ಸ್ವಲ್ಪ ಗ್ರಾಮಾಂತರ ಭಾಗಗಳೂ ಇವೆ. ವಿಸ್ತೀರ್ಣ 578 ಚದರ ಮೈಲಿ. ಜನಸಂಖ್ಯೆ 17,44,072. ಈ ಸಂಸ್ಥಾನಕ್ಕೆ ವಿಧಾನ ಸಭೆಯೊಂದಿದೆ. ಚೀಫ್ ಕಮಿಷನರ್ ಶ್ರೀ ಶಂಕರ್ ಪ್ರಸಾದ್. ಮುಖ್ಯ ಮಂತ್ರಿ ಶ್ರೀ ಬ್ರಹ್ಮ ಪ್ರಕಾಶ್.

ಹಿಮಾಚಲ ಪ್ರದೇಶ:—ಜಮ್ಮು ಮತ್ತು ಕಾಶ್ಮೀರಕ್ಕೆ ದಕ್ಷಿಣಕ್ಕೆ ಹಿಮಾಲಯಪರ್ವತ ಭಾಗಗಳಲ್ಲಿರುವ ಈ ಸಂಸ್ಥಾನ 10,451 ಚದರ ಮೈಲಿ ವಿಸ್ತೀರ್ಣವಾಗಿದೆ. ಇಲ್ಲಿನ ಜನಸಂಖ್ಯೆ 9,83.367.

ಆಲೂಗೆಡ್ಡೆಯೇ ಇಲ್ಲಿನ ಮುಖ್ಯ ಬೆಳೆ. ಸೇಬು, ಬಾದಾಮಿ, ಖರ್ಜೂರ, ದಾಳಿಂಬೆ ಮುಂತಾದ ಹಣ್ಣುಗಳೂ ಬೆಳೆಯುವುವು. ಇಲ್ಲಿನ ಕಾಡು ಪ್ರದೇಶದಲ್ಲಿ ದೊರೆಯುವ ಮರ ಮುಟ್ಟುಗಳನ್ನು ಉತ್ತರ ಭಾರತಕ್ಕೆ ಒದಗಿಸಲಾಗುವುದು.

ಇಲ್ಲಿ 36 ಜನ ಸದಸ್ಯರನ್ನೊಳಗೊಂಡ ವಿಧಾನ ಸಭೆಯಿದೆ. ಚೀಫ್ ಕಮಿಾಷನರ್ ಶ್ರೀ ಹಿಮ್ಮತ್‌ಸಿಂಗ್‌ಜಿ. ಮುಖ್ಯ ಮಂತ್ರಿ ಡಾ|| ಪಾರ್‌ಮಾರ್.

ಕಚ್:—ಪಶ್ಚಿಮ ತೀರದಲ್ಲಿ ಪಾಕಿಸ್ಥಾನದ ಗಡಿಭಾಗದಲ್ಲಿ ಈ ರಾಜ್ಯವಿದೆ. ವಿಸ್ತೀರ್ಣ 16,724 ಚದರ ಮೈಲಿಗಳು. ಜನಸಂಖ್ಯೆ 5,67,606. ಚೀಫ್ ಕಮಿಾಷನರ್ ಶ್ರೀ ಎಸ್. ಎ. ಗಾಟ್ಗೆ.

ಮಣಿಪುರ:—ಅಸ್ಸಾಮ್‌ಗೂ ಬರ್ಮಾವಿಗೂ ಮಧ್ಯೆ ಇದು ಭಾರತದ ಪೂರ್ವ ಗಡಿಭಾಗದಲ್ಲಿರುವ ರಾಜ್ಯ. ವಿಸ್ತೀರ್ಣ 8,628 ಚದರ ಮೈಲಿ. ಜನಸಂಖ್ಯೆ 577,636.

ರಾಜಧಾನಿ ಇಂಫಾಲ್. ಚೀಫ್ ಕಮಿಾಷನರು ಶ್ರೀ ಆರ್. ವಿ. ಭಾರ್ಗವ.

ತ್ರಿಪುರಾ:—ಪೂರ್ವ ಪಾಕಿಸ್ಥಾನ ಪೂರ್ವ ಗಡಿ ಭಾಗದಲ್ಲಿರುವ ಈ ರಾಜ್ಯವು 4,032 ಚದರ ಮೈಲಿ ವಿಸ್ತೀರ್ಣವಿದೆ. ಜನಸಂಖ್ಯೆ 6,39,029. ಚೀಫ್ ಕಮಿಾಷನರ್ ಶ್ರೀ ವಿ. ಐ. ನಂಜಪ್ಪ.

ವಿಂಧ್ಯ ಪ್ರದೇಶ:—ಉತ್ತರ ಪ್ರದೇಶಕ್ಕೆ ದಕ್ಷಿಣದಲ್ಲಿದ್ದ 26 ಸಣ್ಣ ಪುಟ್ಟ ಸಂಸ್ಥಾನಗಳನ್ನೆಲ್ಲ ಒಟ್ಟುಗೂಡಿಸಿ ಈ ಸಂಸ್ಥಾನವಾಯಿತು. ವಿಸ್ತೀರ್ಣ 23,603 ಚದರ ಮೈಲಿ. ಜನಸಂಖ್ಯೆ 35,74,690.

ಇಲ್ಲಿ ಖನಿಜ ಸಂಪತ್ತು ಚೆನ್ನಾಗಿದೆ. ಕಲ್ಲಿದ್ದಲು, ವಜ್ರ, ಸುಣ್ಣದಕಲ್ಲು, ಕಬ್ಬಿಣ, ತಾಮ್ರ ದೊರೆಯುವುವು. ಅರಣ್ಯ ಸಂಪತ್ತೂ ಚೆನ್ನಾಗಿದ್ದು ಯಥೇಚ್ಛವಾಗಿ ಮರ ಮುಟ್ಟುಗಳು ದೊರೆಯುವುವು.

60 ಜನ ಸದಸ್ಯರನ್ನೊಳಗೊಂಡ ವಿಧಾನ ಸಭೆಯಿದೆ. ರಾಜಧಾನಿ ರೀವಾ. ಚೀಫ್ ಕಮಿಾಷನರ್ ಶ್ರೀ ಕೆ. ಸಂತಾನಂ. ಮುಖ್ಯಮಂತ್ರಿ ಶ್ರೀ ಶಂಭುನಾಥ ಶುಕ್ಲ.

ಭಾರತ ಸರ್ಕಾರ

ಅಧ್ಯಕ್ಷರು ಡಾ॥ ರಾಜೇಂದ್ರ ಪ್ರಸಾದ್. ಉಪಾಧ್ಯಕ್ಷರು ಡಾ॥ ಎಸ್. ರಾಧಾಕೃಷ್ಣನ್.

ಮಂತ್ರಿಮಂಡಲ :— ಪ್ರಧಾನಮಂತ್ರಿ: ಪಂಡಿತ ಜವಾಹರಲಾಲ ನೆಹರು. ವಿದ್ಯಾಭ್ಯಾಸ ಮತ್ತು ವೈಜ್ಞಾನಿಕ ಸಂಶೋಧನೆ: ಮೌಲಾನ ಅಬುಲ್ ಕಲಾಂ ಆಜಾದ್. ಸಂಚಾರ ಸೌಲಭ್ಯ: ಶ್ರೀ ಜಗಜೀವನರಾಂ. ಆರೋಗ್ಯ: ರಾಜಕುಮಾರಿ ಅಮೃತಕೌರ್. ಹಣಕಾಸು: ಶ್ರೀ ಚಿಂತಾಮಣ್ ದ್ವಾರಕನಾಥ್ ದೇಶಮುಖ್. ಯೋಜನೆ ಮತ್ತು ನೀರಾವರಿ ಸೌಕರ್ಯ: ಶ್ರೀ ಗುಲ್‌ಜಾರಿಲಾಲ್‌ನಂದ. ಸಂಸ್ಥಾನಗಳು ಮತ್ತು ಒಳಾಡಳಿತ: ಡಾ॥ ಕೈಲಾಸನಾಥ್ ಖಟ್ಜು. ಆಹಾರ ಮತ್ತು ವ್ಯವಸಾಯ: ಶ್ರೀ ರಫಿ ಅಹ್ಮದ್ ಕಿದ್ವಾಯಿ. ಕೈಗಾರಿಕೆ ಮತ್ತು ವಾಣಿಜ್ಯ: ಶ್ರೀ ಟಿ.ಟಿ. ಕೃಷ್ಣಮಾಚಾರಿ. ಲೇಬರ್: ಶ್ರೀ ವಿ.ವಿ. ಗಿರಿ. ಶಾಸನ ಮತ್ತು ಅಲ್ಪ ಸಂಖ್ಯಾತಹಿತ: ಶ್ರೀ ಸಿ.ಸಿ. ಬಿಸ್ವಾಸ್. ರೈಲ್ವೆ ಮತ್ತು ಸಂಚಾರ ಸೌಲಭ್ಯ: ಶ್ರೀ ಲಾಲ್‌ಬಹದೂರ್‌ಶಾಸ್ತ್ರಿ. ವರ್ಕ್ಸ್, ಹೌಸಿಂಗ್ ಮತ್ತು ಸರಬರಾಜು: ಸರ್ದಾರ್ ಸ್ವರ್ಣಸಿಂಗ್. ಉತ್ಪನ್ನ: ಶ್ರೀ ಕೆ. ಸಿ. ರೆಡ್ಡಿ.

ಮಂತ್ರಿಮಂಡಲದ ಸದಸ್ಯರಲ್ಲದ ಇತರ ಮಂತ್ರಿಗಳು:— ಪಾರ್ಲಿಮೆಂಟರಿ ವಿದ್ಯಮಾನಗಳು: ಶ್ರೀ ಸತ್ಯನಾರಾಯಣಸಿಂಹ. ರಿಹ್ಯಾಬಿಲಿಟೇಷನ್: ಅಜಿತಪ್ರಸಾದ ಜೈನ್. ರಕ್ಷಣ ವ್ಯವಸ್ಥೆ: ಶ್ರೀ ಮಹವೀರತ್ಯಾಗಿ. ಸಮಾಚಾರ ಮತ್ತು ಪ್ರಸಾರ: ಡಾ॥ ಬಿ. ವಿ. ಕೇಸ್ಕರ್. ವಾಣಿಜ್ಯ: ಶ್ರೀ ಡಿ. ಪಿ. ಕರಮರಕರ್.

ಡೆಪ್ಯುಟಿ ಮಂತ್ರಿಗಳು:—ವರ್ಕ್ಸ್, ಹೌಸಿಂಗ್ ಮತ್ತು ಸರಬರಾಜು: ಶ್ರೀ ಎಸ್. ಎನ್. ಬುರಗೋಹೇನ್. ಸಂಚಾರ: ಶ್ರೀ ರಾಜಬಹದೂರ್. ವೈಜ್ಞಾನಿಕ ಸಂಶೋಧನೆ: ಶ್ರೀ ಕೆ. ಡಿ. ಮಾಳವೀಯ. ರಕ್ಷಣ: ಸರ್ದಾರ್ ಸುರ್ಜಿತ್‌ಸಿಂಗ್ ಮಜಿಥಿಯ. ಒಳಾಡಳಿತ: ಶ್ರೀ ಬಳವಂತ ನಾಗೇಶ ದಾತಾರ್. ಲೇಬರ್: ಶ್ರೀ ಅಬೀದ್ ಅಲಿ. ಹಣಕಾಸು: ಶ್ರೀ ಮಣಿಲಾಲ್ ಚತುರ್ಭಾಯ್ ಷಾ. ರಿಹ್ಯಾಬಿಲಿಟೇಷನ್: ಶ್ರೀ ಜೆ. ಕೆ. ಭೋನ್‌ಸ್ಲೆ. ರೈಲ್ವೆ ಮತ್ತು ಟ್ರಾನ್ಸ್‌ಪೋರ್ಟ್: ಶ್ರೀ ಓ. ವಿ. ಅಳಗೇಶನ್. ಆರೋಗ್ಯ: ಶ್ರೀಮತಿ ಎಂ. ಚಂದ್ರಶೇಖರ್. ವಿದೇಶ: ಶ್ರೀ ಎ. ಕೆ. ಚಂದ. ಆಹಾರ ಮತ್ತು ವ್ಯವಸಾಯ: ಶ್ರೀ ಎಂ. ವಿ. ಕೃಷ್ಣಪ್ಪ. ನೀರಾವರಿ ಮತ್ತು ವಿದ್ಯುಚ್ಛಕ್ತಿ: ಶ್ರೀ ಜೈಸುಕ್‌ಲಾಲ್ ಹತೀ.

ಭಾಗ 2

ಮೈಸೂರು

ಇತಿಹಾಸ

ಮೈಸೂರಿನ ಇತಿಹಾಸ ಪುರಾತನವಾದುದು. ರಾಮಾಯಣ ಮಹಾಭಾರತ ಕಾಲದಿಂದಲೂ ಮೈಸೂರಿಗೆ ಪ್ರಾಶಸ್ತ್ಯವಿದೆ. ಆದರೆ ಇತಿಹಾಸ ಕಾಲದಿಂದೀಚೆಗೆ ಮೈಸೂರಿನ ಹೆಸರು ಸ್ಪಷ್ಟವಾಗಿ ತೋರಿ ಬರುವದು ಮೌರ್ಯರ ಆಡಳಿತ ಕಾಲದಲ್ಲಿ. ಚಂದ್ರಗುಪ್ತ ಮೌರ್ಯನು ತನ್ನ ಅಂತ್ಯಕಾಲವನ್ನು ಶ್ರವಣಬೆಳಗೊಳದಲ್ಲಿ ಕಳೆದನೆಂದು ಜೈನ ಆಧಾರ ಗ್ರಂಥಗಳಿಂದ ಗೊತ್ತಾಗುವದು. ಧರ್ಮ ಪ್ರಭು ಅಶೋಕನ ಸಾಮ್ರಾಜ್ಯವು ಮೈಸೂರಿನ ಈಶಾನ್ಯ ಭಾಗದವರೆಗೂ ಪ್ರಸರಿಸಿತ್ತೆಂಬುದಕ್ಕೆ ಇಲ್ಲಿ ದೊರೆತಿರುವ ಅಶೋಕ ಶಿಲಾಶಾಸನಗಳು ಆಧಾರ. ಕ್ರಿ. ಪೂ. 3ನೇ ಶತಮಾನ ಕಾಲದಲ್ಲಿ ಇದು ಅಶೋಕನ ಆಡಳಿತದಲ್ಲಿತ್ತು. ಅನಂತರ ಮೈಸೂರಿನ ಉತ್ತರ ಭಾಗವೆಲ್ಲ ಆಂಧ್ರ ಅಥವಾ ಶಾತವಾಹನ ಸಂತತಿಯ ಆಡಳಿತಕ್ಕೆ ಒಳಗಾಯಿತು. ಕ್ರಿ. ಪೂ. 2ನೇ ಶತಮಾನದಿಂದ ಕ್ರಿ. ಶ. 2ನೇ ಶತಮಾನದವರೆಗೆ ಇವರ ಆಡಳಿತ ಇಲ್ಲಿ ನಡೆದಿರುವಂತೆ ಹೇಳಬಹುದು.

ಕ್ರಿ. ಶ. 3ನೇ ಶತಮಾನದಿಂದೀಚೆಗೆ ಮೈಸೂರು ಪ್ರದೇಶದ ಇತಿಹಾಸವನ್ನು ಸುಸ್ಪಷ್ಟವಾಗಿ ಅರಿಯಬಹುದಾಗಿದೆ. ಮೊದಮೊದಲು ಮೈಸೂರು ಮೂರು ವಿಧದ ರಾಜ ಸಂತತಿಗಳ ಪ್ರಭಾವಕ್ಕೆ ಒಳಗಾಗಿತ್ತು. ವಾಯವ್ಯ ಭಾಗದಲ್ಲಿ ಕದಂಬರೂ, ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಪಲ್ಲವರೂ ಆಳುತ್ತಿದ್ದರು. ದಕ್ಷಿಣ ಮತ್ತು ಮಧ್ಯ ಭಾಗಗಳಲ್ಲಿ ಗಂಗರಸರು ಅಭಿವೃದ್ಧಿ ಸ್ಥಿತಿಯಲ್ಲಿದ್ದರು.

7ನೇ ಶತಮಾನದ ಹೊತ್ತಿಗೆ ಕದಂಬರು ತಮ್ಮ ಸ್ವಾತಂತ್ರ್ಯ ಕಳೆದುಕೊಂಡರು, ಚಾಳುಕ್ಯರು ಪ್ರವರ್ಧಮಾನಕ್ಕೆ ಬಂದು ಆಳ ತೊಡಗಿದರು. ಆದರೆ ಅವರ ಆಡಳಿತವೂ ಹೆಚ್ಚು ಕಾಲ ಉಳಿಯಲಿಲ್ಲ. 8ನೇ ಶತಮಾನದ ಮಧ್ಯ ಭಾಗದಲ್ಲಿ ರಾಷ್ಟ್ರಕೂಟರು ಚಾಳುಕ್ಯರನ್ನು ಗೆದ್ದು ಸುಮಾರು ಎರಡು ಶತಮಾನಗಳ ಕಾಲ ಉತ್ತರ ಮೈಸೂರು ಭಾಗವನ್ನೆಲ್ಲಾ ಆಳಿದರು. ಅವರು ತಮ್ಮ ರಾಜ್ಯವನ್ನು ವಿಸ್ತಾರ ಗೊಳಿಸುತ್ತಾ ಗಂಗವಾಡಿ ಮತ್ತು ಚೋಳ ರಾಜ್ಯದವರೆಗೂ ಹೋದರು. ಇಷ್ಟರೊಳಗೆ 972ರಲ್ಲಿ ಚಾಳುಕ್ಯರು ತಾವು ಹಿಂದೆ ಕಳೆದುಕೊಂಡಿದ್ದ ರಾಜ್ಯವನ್ನೆಲ್ಲಾ ಪುನಃ ಪಡೆದು, ಸುಮಾರು ಇನ್ನೂರು ವರ್ಷಗಳ ಕಾಲ ಉಚ್ಛ್ರಾಯ ಸ್ಥಿತಿಯಲ್ಲಿದ್ದು ರಾಜ್ಯಭಾರ ಮಾಡಿದರು.

ಇತ್ತ ಕಡೆ ಮೈಸೂರಿನ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಪಲ್ಲವರು

ಯಾವ ಅಡೆತಡೆಯಿಲ್ಲದೆ ಪೂರ್ಣ ಸ್ವಾತಂತ್ರ್ಯದಿಂದ ಆಡಳಿತ ನಡೆಸುತ್ತಿದ್ದರು. ಪಲ್ಲವರು ಕಂಚಿಯನ್ನು ರಾಜಧಾನಿ ಮಾಡಿಕೊಂಡು ಹಲವು ಶತಮಾನಗಳ ಕಾಲ ರಾಜ್ಯಭಾರ ನಡೆಸಿ, ದಕ್ಷಿಣ ಭಾರತದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೈಸೂರಿನ ಇಂದಿನ ಕೋಲಾರ, ಬೆಂಗಳೂರು, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ 9 ಮತ್ತು 10ನೇ ಶತಮಾನಗಳಲ್ಲಿ ಪಲ್ಲವರು ಆಡಳಿತ ನಡೆಸುತ್ತಿದ್ದರು.

ಗಂಗರಸರು

ಮೈಸೂರು ಸಂಸ್ಥಾನದ ಬಹುಭಾಗವು (ದಕ್ಷಿಣ ಮತ್ತು ಮಧ್ಯಭಾಗ) ಮೊದಲನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೂ ಗಂಗರಸರ ಆಳ್ವಿಕೆಯಲ್ಲಿದ್ದಿತು. ದಕ್ಷಿಣ ಭಾರತದ ಜೈನ ರಾಜ ವಂಶಗಳಲ್ಲಿ ಅವರು ಮುಖ್ಯರು. ತಲಕಾಡು ರಾಜಧಾನಿ. ಗಂಗರಸ ರಾಚಮಲ್ಲನ ಕಾಲದಲ್ಲಿ (974–984) ಚನ್ನರಾಯಪಟ್ಟಣದ ತಾಲ್ಲೂಕು ಶ್ರವಣಬೆಳಗೊಳದಲ್ಲಿ 60 ಅಡಿ ಎತ್ತರದ ಗೋಮಟೇಶ್ವರ ವಿಗ್ರಹವು ನಿರ್ಮಿತವಾಯಿತು. ಅದು ಇಂದಿಗೂ ಪ್ರಪಂಚವನ್ನು ವಿಸ್ಮಯಗೊಳಿಸುವಂತಹ ಅಚ್ಚರಿಯಾಗಿದೆ.

ಕ್ರಿ. ಶ. 1000ರ ಹೊತ್ತಿಗೆ ಚೋಳರಾಜ ವಂಶವು ಪ್ರಾಮುಖ್ಯತೆಗೆ ಬಂದಿತು. ಅವರು ಗಂಗರಸರನ್ನು ಸೋಲಿಸಿ, ಇಡೀ ದಕ್ಷಿಣ ಮೈಸೂರನ್ನು ತಮ್ಮ ಆಡಳಿತಕ್ಕೆ ತೆಗೆದುಕೊಂಡರು. ಅವರು ಕ್ರಮಕ್ರಮವಾಗಿ ದಂಡಯಾತ್ರೆ ನಡೆಸುತ್ತಾ ದಕ್ಷಿಣ ಭಾರತದ ಬಹುಭಾಗವನ್ನು ಆಕ್ರಮಿಸಿ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡರು. ಆದರೆ ಅವರು ಇಷ್ಟು ಉನ್ನತಿಗೆ ಬಂದರೂ ಅವರ ಅವನತಿಯು ಬೇಗನೇ ಸನ್ನಿಹಿತವಾಯಿತು. ಅವರ ರಾಜ್ಯಭಾರವೆಲ್ಲ 1000ದಿಂದ 1120ರ ವರೆಗೆ ಮಾತ್ರ ನಡೆಯಿತು.

ಕರ್ನಾಟಕದ ಸುವರ್ಣ ಕಾಲ—ಹೊಯ್ಸಳರ ರಾಜ್ಯ

ಆಮೇಲೆ ತಾನೇ ಕರ್ನಾಟಕದ ಸುವರ್ಣ ಕಾಲವೆನ್ನಬಹುದಾದ ಹೊಯ್ಸಳ ರಾಜ್ಯಭಾರವು ಬಂದಿತು. ಬಿಟ್ಟೀದೇವನೆಂಬಾತನು ವಿಷ್ಣುವರ್ಧನನೆಂಬ ರಾಜನಾಮಾಂಕಿತ ಹೊಂದಿ, 1104ರಲ್ಲಿ ರಾಜಗದ್ದುಗೆಯನ್ನೇರಿ ಚೋಳರನ್ನು ಹೊಡೆದೋಡಿಸಿದನು. ಗಂಗವಾಡಿಯನ್ನೂ ನೊಳಂಬವಾಡಿಯನ್ನೂ ಆಕ್ರಮಿಸಿಕೊಂಡನು. ಇಂದಿನ ಮೈಸೂರು ಸಂಸ್ಥಾನದ ಎಲ್ಲ ಭಾಗವೂ ಆತನ ವಶವಾದುದೇ ಅಲ್ಲದೆ, ಆತನ ಆಡಳಿತವು ಶಾಲ್ಯ, ಕೊಯಮತ್ತೂರು, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳಿಗೂ ಆವರಿಸಿತು. ಆತನ ಕಾಲದಲ್ಲಿ ಶ್ರೀರಾಮಾನುಜಾಚಾರ್ಯರು ಶ್ರೀವೈಷ್ಣವ

(ವಿಶಿಷ್ಟಾದ್ವೈತ) ಮತವನ್ನು ಸ್ಥಾಪಿಸಿದರು. ಬಿಟ್ಟಿದೇವನು ಆದಿಯಲ್ಲಿ ಜೈನ ಮತಾವಲಂಬಿಯಾಗಿದ್ದು ಶ್ರೀರಾಮಾನುಜಾಚಾರ್ಯರ ಪ್ರಭಾವಕ್ಕೆ ಮನಸೋತು ಶ್ರೀವೈಷ್ಣವ ಮತವನ್ನು ಅಂಗೀಕರಿಸಿದನು. ಆಚಾರ್ಯರಿಗೆ ತಮ್ಮ ಮತ ಪ್ರಚಾರ ಮಾಡಲು ಸರ್ವ ಸೌಲಭ್ಯಗಳನ್ನೂ ಪ್ರೋತ್ಸಾಹವನ್ನೂ ಇತ್ತನು.

14ನೇ ಶತಮಾನದ ಆದಿಭಾಗದಲ್ಲಿ ಹೊಯ್ಸಳ ರಾಜ್ಯಕ್ಕೆ ಮಹಮದೀಯರಿಂದ ವಿಪತ್ತು ಬಂದೊದಗಿತು. ಹೊಯಿಸಳರ ರಾಜಧಾನಿಗೆ 1310ರಲ್ಲೂ ಅನಂತರ 1326ರಲ್ಲೂ ಮಹಮದೀಯರು ಮುತ್ತಿಗೆ ಹಾಕಿ ನಗರವನ್ನು ನಾಶಮಾಡಿದರು. ಅಲ್ಲಿಗೆ ಹೊಯಿಸಳರ ರಾಜ್ಯವು ಕೊನೆಯಾಯಿತು. ಪ್ರಪಂಚ ಪ್ರಸಿದ್ಧವಾದ ಬೇಲೂರು ಮತ್ತು ಹಳೆಯಬೀಡು ದೇವಸ್ಥಾನಗಳು ನಿರ್ಮಿತವಾದುದು ಹೊಯಿಸಳರ ಕಾಲದಲ್ಲಿಯೇ. ಆ ದೇವಾಲಯಗಳಲ್ಲಿಯ ಕೆತ್ತನೆಗಳು ಮತ್ತು ಶಿಲ್ಪಕಲಾ ಚಾತುರ್ಯವು ಅಂದಿನ ಕಲಾಕೌಶಲ್ಯ ಮತ್ತು ಸಂಸ್ಕೃತಿಯ ಉನ್ನತ ಮಟ್ಟವನ್ನು ಮುಕ್ತಕಂಠದಿಂದ ಇಂದಿಗೂ ಹೊರಪಡಿಸುವುವು. ಹೊಯಿಸಳ ವಂಶವು ಈ ರೀತಿಯಲ್ಲಿ ಕೊನೆಗೊಂಡರೂ ಹೊಯಿಸಳ ಸಾಮ್ರಾಜ್ಯವು ಕಡೆಗಾಣಲಿಲ್ಲ. ನಾಮಾಂತರವನ್ನೂ ರೂಪಾಂತರವನ್ನೂ ಹೊಂದಿ ಮೊದಲಿಗಿಂತಲೂ ವಿಸ್ತಾರವಾಗಿ ಪ್ರಸಿದ್ಧಿ ಪಡೆಯಿತು.

ಅನಂತರ ವಿಜಯನಗರ ಸಾಮ್ರಾಜ್ಯದ ಸಂಪರ್ಕ ಮೈಸೂರಿಗೆ ದೊರೆಯಿತು. ಮೈಸೂರಿನ ವಿವಿಧ ಭಾಗಗಳು ವಿಜಯನಗರ ಸಾಮ್ರಾಜ್ಯದ ಮೇಲಾಡಳಿತಕ್ಕೆ ಒಳಗಾಗಿದ್ದರೂ ಇಲ್ಲಿ ಆಡಳಿತ ನಡೆಸುತ್ತಿದ್ದ ಸಣ್ಣ ಪುಟ್ಟ ಪಾಳೆಯಗಾರರೂ, ಸಾಮ್ರಾಜ್ಯದ ಪ್ರತಿನಿಧಿಗಳೂ ತಮ್ಮ ತಮ್ಮ ಅಧಿಕಾರವನ್ನು ಬಲಪಡಿಸಿಕೊಂಡು ಸ್ವತಂತ್ರರಾಗಿಯೇ ವರ್ತಿಸ ತೊಡಗಿದರು. ತಾಳೀಕೋಟೆ ಯುದ್ಧ ನಡೆದು ವಿಜಯನಗರ ಸಾಮ್ರಾಜ್ಯವು ನಾಶವಾಗುವುದಕ್ಕೆ ಬಹು ಮುಂಚೆಯೇ ಈ ಸ್ಥಳೀಯ ಪಾಳೆಯಗಾರರು ಸ್ವಾತಂತ್ರ್ಯ ಪಡೆದು, ತಮ್ಮ ತಮ್ಮಲ್ಲಿಯೇ ಹೊಡೆದಾಟಕ್ಕೆ ಶುರು ಮಾಡಿದರು. ಇಂತಹ ಸಿಂದಿಗ್ಧ ಸನ್ನಿವೇಶದಲ್ಲಿಯೇ ಮೈಸೂರಿನ ಇಂದಿನ ರಾಜಸಂತತಿಯ ಮೂಲ ಪುರುಷರು ರಾಜ್ಯವನ್ನು ಗಳಿಸಿ ರಾಜವಂಶವನ್ನು ಆರಂಭಿಸಿದರು.

ಯದುವಂಶದ ರಾಜರು

ಶ್ರೀಕೃಷ್ಣನ ವಂಶವಾದ ಯಾದವ ವಂಶಕ್ಕೆ ಸೇರಿದ ವಿಜಯ ಮತ್ತು ಕೃಷ್ಣರೆಂಬ ಸೋದರರು ಹದಿನಾಲ್ಕನೇ ಶತಮಾನದ ಅಂತ್ಯ ಭಾಗದಲ್ಲಿಯೇ ದ್ವಾರಕೆಯಿಂದ ಬಂದು, ಹದಿನಾಡಿನ ಚಾಮರಾಜನ ಮಗಳನ್ನು ಕಾರುಗಹಳ್ಳಿ ಮಾರನಾಯಕನ ಬಾಧೆಯಿಂದ ತಪ್ಪಿಸಿ, ಹದಿನಾಡಿನಲ್ಲಿಯೂ ಪುರಿಗೆರೆಯಲ್ಲಿಯೂ (ಮೈಸೂರು

ರಂಗಾಚಾರ್ಲು (1881-83), ಸರ್ ಕೆ. ಶೇಷಾದ್ರಿ ಐಯರ್ (1883-1901). ಸರ್ ಎಂ. ವಿಶ್ವೇಶ್ವರಯ್ಯ(1912-18), ಮತ್ತು ಸರ್ ಮಿರ್ಜಾ ಎಂ. ಇಸ್ಮಾಯಿಲ್ (1926-41) ಇವರುಗಳ ಹೆಸರನ್ನು ವಿಶೇಷವಾಗಿ ಸೂಚಿಸಬಹುದು.

ಶ್ರೀ ಸಿ. ರಂಗಾಚಾರ್ಲು ಮೈಸೂರಿನಲ್ಲಿ ಪ್ರಜಾಪ್ರಭುತ್ವದ ಅಂಕುರಾರ್ಪಣ ಮಾಡಿದರು. 1881 ರಲ್ಲಿಯೇ ಅವರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ, ಸಂಸ್ಥಾನದ ಆಡಳಿತದಲ್ಲಿ ಸಹಾಯ ಮಾಡಲು ಪ್ರಜೆಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟರು. ಇಡೀ ಭಾರತದಲ್ಲಿ ಇಂತಹ ಪ್ರಜಾ ಪ್ರಾತಿನಿಧ್ಯ ಸಭೆಯು ಸ್ಥಾಪಿತವಾದುದು ಇದೇ ಮೊದಲು. ಸರ್ ಕೆ. ಶೇಷಾದ್ರಿ ಅಯ್ಯರ್ ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿ ತಯಾರಿಕಾ ಕಾರ್ಯಾಲಯವನ್ನು ಸ್ಥಾಪಿಸಿ, ಮೈಸೂರಿನ ಕೈಗಾರಿಕೆ ಮತ್ತು ಆರ್ಥಿಕ ಅಭಿವೃದ್ಧಿಗೆ ಬಲವಾದ ಅಸ್ತಿಭಾರ ಹಾಕಿದರು. ಏಷ್ಯಾ ಖಂಡದಲ್ಲೆಲ್ಲೂ ಕೂಡ ಇಂತಹ ವಿದ್ಯುಚ್ಛಕ್ತಿ ಕಾರ್ಯಾಲಯ ಆರಂಭವಾದುದು ಇಲ್ಲಿಯೇ.

ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಆಧುನಿಕ ಮೈಸೂರಿನ ನಿರ್ಮಾಣದಲ್ಲಿ, ಅದರ ಸರ್ವತೋಮುಖವಾದ ಅಭಿವೃದ್ಧಿಗೆ ಹಾಕಿ ಕೊಟ್ಟ ಅಸ್ತಿಭಾರದ ಮಹತ್ತೇನೆಂಬುದನ್ನು ಪೂರ್ಣವಾಗಿ ಅರಿಯಬೇಕಾದರೆ ಇನ್ನು ಸ್ವಲ್ಪ ಕಾಲ ಬೇಕಾಗುವದು. ಅವರು ಆದಿಯಲ್ಲಿ ಚೀಫ್ ಎಂಜನಿಯರಾಗಿಯೂ, ಅನಂತರ ದಿವಾನರಾಗಿಯೂ ಮೈಸೂರಿಗೆ ಅಮೋಘ ಸೇವೆ ಸಲ್ಲಿಸಿದ್ದಾರೆ. ಮೈಸೂರಿನ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿಗಾಗಿ ಅವರು ಅನೇಕ ದಶಕಗಳ ಹಿಂದೆಯೇ ಯೋಜನೆಯನ್ನು ಸಿದ್ಧಗೊಳಿಸಿದರು. ಅಂತಹ ಯೋಜನೆಗಳೇ ಅಲ್ಲದೆ ಅವರು ಹಲವಾರು ಕಾರ್ಯಗಳನ್ನು ಜಾರಿಗೂ ತಂದರು. ಮೈಸೂರು ವಿಶ್ವವಿದ್ಯಾಲಯವನ್ನು 1916ರಲ್ಲಿ ಸ್ಥಾಪಿಸಿದರು. ಭಾರತದ ದೇಶೀ ಸಂಸ್ಥಾನವೊಂದರಲ್ಲಿ ವಿಶ್ವವಿದ್ಯಾಲಯ ಸ್ಥಾಪಿತವಾದುದು ಇಲ್ಲಿಯೇ ಮೊದಲು. ಕನ್ನಂಬಾಡಿಯಲ್ಲಿ ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿ ಕೃಷ್ಣರಾಜಸಾಗರ ಜಲಾಶಯವನ್ನು ನಿರ್ಮಿಸಿದರು. ಇದರಿಂದ ಸಾಗುವಳಿಗೆ ಅಮೋಘವಾದ ಸಹಾಯ ದೊರೆತಂತಾಯಿತು. ಭದ್ರಾವತಿಯಲ್ಲಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿ, ಸಂಸ್ಥಾನದ ವಿವಿಧ ಭಾಗಗಳಲ್ಲಿ ಅದರ ಶಾಖೆಗಳನ್ನಾರಂಭಿಸಿದರು. ಮೈಸೂರು ಆರ್ಥಿಕ ಸಮ್ಮೇಳನವನ್ನು ಆರಂಭಿಸಿ ಸಂಸ್ಥಾನದ ಆರ್ಥಿಕ ರಚನೆಯನ್ನು ಸುಭದ್ರಗೊಳಿಸಲು ಅವಕಾಶ ಕಲ್ಪಿಸಿದರು.

ಸರ್ ಎಂ. ವಿಶ್ವೇಶ್ವರಯ್ಯನವರು ಹಾಕಿಕೊಟ್ಟ ಅಸ್ತಿಭಾರದ ಮೇಲೆ ಅಭಿವೃದ್ಧಿ ಕಾರ್ಯವನ್ನೆಸಗಿದ ಮತ್ತು ಅವರು ಸಿದ್ಧಗೊಳಿಸಿದ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಪೂರ್ಣಗೊಳಿಸಿದ ಯಶಸ್ಸು ಸರ್ ಮಿರ್ಜಾ ಇಸ್ಮಾಯಿಲ್ ರವರಿಗೆ ಸಲ್ಲುವುದಾಗಿದೆ. ದೇಶದಲ್ಲಿ ಕೈಗಾರಿಕೆಗಳನ್ನು ತ್ವರಿತಗತಿಯಲ್ಲಿ ಹೆಚ್ಚಿಸಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿದರು. ಸಾರ್ವಜನಿಕ ಆರೋಗ್ಯವನ್ನು ಉತ್ತಮ ಗೊಳಿಸಲು ಅವರು ಹವಣಿಸಿ ಆಸ್ಪತ್ರೆಗಳನ್ನು ದೇಶದ ಎಲ್ಲ ಭಾಗಗಳಲ್ಲಿಯೂ ಹೆಚ್ಚಿಸಿ ದರು. ಈ ರೀತಿ ಆಸ್ಪತ್ರೆಗಳ ಸ್ಥಾಪನೆಯಲ್ಲಿ ಅವರು ಹಣವಂತರ ಮತ್ತು ಉದಾರದಾನಿಗಳ ಸಹಾಯವನ್ನು ಪಡೆದರು. ಆಸ್ಪತ್ರೆಗಳ ಸ್ಥಾಪನೆಗೆ ಹೇಗೋ ಹಾಗೆಯೇ ವಿದ್ಯಾಸಂಸ್ಥೆಗಳ ಸ್ಥಾಪನೆಯಲ್ಲಿಯೂ ಕೂಡ ಸಾರ್ವಜನಿಕ ಹಣವಂತರು ಗಳ ಸಹಾಯ ಪಡೆದು ಅಧಿಕ ಸಂಖ್ಯೆಯಲ್ಲಿ ಶಾಲೆಗಳನ್ನೂ ಸ್ಥಾಪಿಸಿದರು. ವಿದ್ಯಾಭಿ ವೃದ್ಧಿಯಲ್ಲಿ ಮೈಸೂರು ಪ್ರಗತಿಪರವಾದ ನೀತಿಯನ್ನು ಅನುಸರಿಸುತ್ತಾ ವಿದ್ಯಾವಂತರ ಸಂಖ್ಯೆಯು ಹೆಚ್ಚಿತು. ವಿದ್ಯಾಭಿವೃದ್ಧಿಗಾಗಿ ಅಧಿಕಪ್ರಮಾಣದಲ್ಲಿ ಹಣವ್ಯಯಮಾಡ ತೊಡಗಿದರು. ನಗರಗಳ ಸೌಲಭ್ಯಗಳನ್ನು ಗ್ರಾಮಾಂತರ ಭಾಗಗಳಿಗೂ ಕಲ್ಪಿಸಿ ಕೊಟ್ಟು ಗ್ರಾಮಾಂತರ ಭಾಗಗಳನ್ನೂ ಅಭಿವೃದ್ಧಿಗೊಳಿಸಲು ದಾರಿಮಾಡಿಕೊಟ್ಟರು.

1947ರಲ್ಲಿ ಪ್ರಜೆಗಳ ಚಳುವಳಿಯ ಫಲವಾಗಿ ಜವಾಬ್ದಾರಿ ಸರಕಾರ ಸ್ಥಾಪನೆ ಯಾಗಿ, ಸಂಸ್ಥಾನದಲ್ಲಿ ನೂತನ ಅಧ್ಯಾಯವೊಂದು ಆರಂಭವಾಯಿತು. ಮೈಸೂರು ಕಾಂಗ್ರೆಸಿನ ಅಂದಿನ ಅಧ್ಯಕ್ಷ ಶ್ರೀ ಕೆ. ಸಿ. ರೆಡ್ಡಿಯವರು ಮುಖ್ಯಮಂತ್ರಿಯಾಗಿ ಆಡಳಿತಾಧಿಕಾರವನ್ನು ವಹಿಸಿಕೊಂಡರು. ಶಾಸನ ಸಭೆಗೆ ಜವಾಬ್ದಾರಿಯಾದಂತಹ ಮಂತ್ರಿಮಂಡಳವನ್ನು ಅವರು ರಚಿಸಿದರು. ಅವರೂ ಅವರ ಸಹೋದ್ಯೋಗಿ ಮಂತ್ರಿ ಗಳೂ ಸಂಸ್ಥಾನದ ಪ್ರಜೆಗಳ ನೈತಿಕ ಮತ್ತು ಸಾಂಪತ್ತಿಕ ಮಟ್ಟವನ್ನು ಏರಿಸುವ ಪ್ರಯತ್ನದಲ್ಲಿ ತೊಡಗಿದರು. ಸರ್ ಎಂ. ವಿ. ರವರ ಯೋಜನೆಗಳನ್ನೇ ಇವರೂ ಕೂಡ ಇಂದಿನ ಪರಿಸ್ಥಿತಿಗನುಗುಣವಾಗಿ ಸರಿಹೊಂದಿಸಿಕೊಂಡು ಕಾರ್ಯ ರೂಪಕ್ಕೆ ತರಲು ಹವಣಿಸಿದರು. 1952ರಲ್ಲಿ ನೂತನ ರಾಜ್ಯಾಂಗಕ್ಕೆ ಅನುಗುಣವಾಗಿ ಮಹಾ ಚುನಾವಣೆ ನಡೆದು ಹೊಸ ಶಾಸನಸಭೆಗಳು ರಚಿತವಾದವು. ಶ್ರೀ ಕೆ. ಹನುಮಂತಯ್ಯ ನವರು ಮುಖ್ಯಮಂತ್ರಿಯಾಗಿ ಆರಿಸಲ್ಪಟ್ಟರು. ಅವರೂ ಅವರ ಸಹೋದ್ಯೋಗಿ ಮಂತ್ರಿಗಳೂ ಪ್ರಗತಿಪರ ರೀತಿಯಲ್ಲಿ ಆಡಳಿತ ಕಾರ್ಯ ನಡೆಸುತ್ತಾ ಮುಂದುವರೆದಿ ದ್ದಾರೆ. ಆಂಧ್ರಪ್ರಾಂತ ರಚನೆಯ ಫಲವಾಗಿ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕು ಗಳು 1953ನೇ ಅಕ್ಟೋಬರ್ 1 ರಿಂದ ಮೈಸೂರಿಗೆ ಸೇರಿದವು. ಇದರಿಂದ

ಪ್ರಸಿದ್ಧ ಹಂಪಿಯೂ, ತುಂಗಭದ್ರಾ ಅಣೆಕಟ್ಟೂ ಮೈಸೂರಿಗೆ ಸೇರಿದವು.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದಮೇಲೆ ಮೈಸೂರು ಮಹಾರಾಜರವರು ಮೈಸೂರು ಸೈನ್ಯ, ವಿದೇಶಾಂಗ ಸಂಬಂಧ ಮತ್ತು ಮಾರ್ಗಾನುಕೂಲಸೌಕರ್ಯ ಇವುಗಳ ಆಡಳಿತವನ್ನು ಕೇಂದ್ರ ಸರಕಾರಕ್ಕೆ ವಹಿಸಿ ಕೊಟ್ಟರು. 1949ರಲ್ಲಿ ಅಖಿಲ ಭಾರತ ರಾಜ್ಯಾಂಗ ರಚನೆಯನ್ನು ಮೈಸೂರಿಗೂ ಅನ್ವಯಿಸುವಂತೆ ಘೋಷಿಸಲಾಯಿತು. ಈ ರಾಜ್ಯಾಂಗದ ರೀತ್ಯಾ ಮೈಸೂರು ಸಂಸ್ಥಾನ ದೇಶದ ಇತರ ಪ್ರಾಂತಗಳ ಸ್ಥಾನಮಾನ ಮತ್ತು ಸೌಲಭ್ಯಗಳನ್ನು ಅನುಭವಿಸುವಂತಾಗಿದೆ. ರಾಜಪ್ರಮುಖರುಗಳ ಸಂಸ್ಥಾನಗಳ ಮೇಲೆ ಭಾರತ ಸರ್ಕಾರದ ಮೇಲಾಡಳಿತವಿರಬೇಕೆಂಬ ರಾಜ್ಯಾಂಗದ 371ನೇ ಆರ್ಟಿಕಲನ್ನು ಮೈಸೂರಿಗೆ ಅನ್ವಯಿಸದಂತೆ ರಾಷ್ಟ್ರಪತಿಯವರು ರಿಯಾಯಿತಿ ತೋರಿಸಿದ್ದಾರೆ. ಇದರಿಂದ ಮೈಸೂರು ಮುಂದುವರಿದ ರಾಜ್ಯವೆಂದು ಸ್ಪಷ್ಟವಾಗಿದೆ.

ಮೈಸೂರು ರಾಜಸಂತತಿಯ ವಂಶವೃಕ್ಷ ಈ ರೀತಿ ಇದೆ:—

ಯದುರಾಜ ವಿಜಯ 1399–1423; ಮೊದಲನೆ ಹಿರೇ ಬೆಟ್ಟದಚಾಮರಾಜಒಡೆಯರು 1423–1458; ಮೊದಲನೆ ತಿಮ್ಮರಾಜಒಡೆಯರು 1458–1478; ಎರಡನೆ ಹಿರೇಚಾಮರಾಜಒಡೆಯರು 1478–1513; ಮೂರನೇ ಬೆಟ್ಟದಚಾಮರಾಜಒಡೆಯರು 1513–1552; ಎರಡನೆ ತಿಮ್ಮರಾಜಒಡೆಯರು 1522–1571; ನಾಲ್ಕನೆ ಬೋಳಚಾಮರಾಜಒಡೆಯರು 1571–1576; ಐದನೇ ಬೆಟ್ಟದಚಾಮರಾಜಒಡೆಯರು 1576–1578; ಮೊದಲನೆ ರಾಜಒಡೆಯರು 1578–1617; ಆರನೆ ಚಾಮರಾಜಒಡೆಯರು 1617--1637; ಎರಡನೆ ರಾಜಒಡೆಯರು 1637--1638; ರಣಧೀರ ಕಂಠೀರವನರಸರಾಜಒಡೆಯರು 1638–1659; ದೊಡ್ಡದೇವರಾಜಒಡೆಯರು, 1659--1672; ಚಿಕ್ಕದೇವರಾಜಒಡೆಯರು 1672–1704; ಕಂಠೀರವ ನರಸರಾಜಒಡೆಯರು (ಮೂಕರಸು) 1704–1713; ಮೊದಲನೆ ದೊಡ್ಡಕೃಷ್ಣರಾಜಒಡೆಯರು 1713–1731; ಏಳನೆ ಚಾಮರಾಜಒಡೆಯರು 1731–1734; ಎರಡನೆ ಕೃಷ್ಣರಾಜಒಡೆಯರು 1734–1766; ನಂಜರಾಜಒಡೆಯರು 1766–1770; ಎಂಟನೆ ಬೆಟ್ಟದಚಾಮರಾಜಒಡೆಯರು 1770–1776; ಒಂಭತ್ತನೆ ಖಾಸಾಚಾಮರಾಜಒಡೆಯರು 1776–1796; ಮುಮ್ಮಡಿ ಕೃಷ್ಣರಾಜಒಡೆಯರು 1706–1868; ಹತ್ತನೆ ಚಾಮರಾಜಒಡೆಯರು 1768–1894; ನಾಲ್ವಡಿ ಕೃಷ್ಣರಾಜಒಡೆಯರು 1894–1940; ಮತ್ತು ಶ್ರೀ ಜಯಚಾಮರಾಜಒಡೆಯರು 1940ರಿಂದ.

ಭೂಭಾಗದ ಲಕ್ಷಣಗಳು

ಪೂರ್ವ ಪಶ್ಚಿಮ ಘಟ್ಟಗಳ ನಡುವೆ ನೀಲಗಿರಿ ಕಡೆಗೆ ಸಂಕುಚಿತವಾಗುತ್ತಲೂ, ಕೃಷ್ಣಾ ನದಿಯ ಕಡೆಗೆ ವಿಸ್ತಾರವಾಗುತ್ತಲೂ ಇರುವ ತ್ರಿಕೋಣಾಕೃತಿಯ ಕಲ್ಲು ನೆಲದ ಭೂಮಿಯೆಂದು ಹೇಳಬಹುದು ಮೈಸೂರು ದೇಶವನ್ನು. ಇದು ಪ್ರಸ್ಥಭೂಮಿಯಾಗಿದೆ, ಆದರೆ ಸಮತಲವಾದ ಮೈದಾನವಿಲ್ಲ. ಉತ್ತರ ಮತ್ತು ದಕ್ಷಿಣ ಗಡಿ ಭಾಗಗಳು ಸಾಧಾರಣವಾಗಿ ಸಮುದ್ರ ಮಟ್ಟದಿಂದ 2000 ಅಡಿ ಮೇಲ್ಮಟ್ಟದಲ್ಲಿದ್ದು ಅಲ್ಲಿಂದ ಕ್ರಮಕ್ರಮವಾಗಿ ನೆಲ ಮೇಲ್ಮಟ್ಟಕ್ಕೆ ಬರುತ್ತಾ ಸಂಸ್ಥಾನದ ಮಧ್ಯ ಭಾಗವಾದ ಬೆಂಗಳೂರಿನ ಬಳಿ ಸಮುದ್ರ ಮಟ್ಟಕ್ಕೆ 3000 ಅಡಿ ಎತ್ತರಕ್ಕೆ ಬಂದು ಸೇರುವುದು. ಸಾಮಾನ್ಯವಾಗಿ ಬೆಂಗಳೂರಿನಿಂದ ನಾಲ್ಕು ದಿಕ್ಕುಗಳಿಗೂ ನೆಲವು ಇಳಿಜಾರಾಗುತ್ತ ಹೋಗುವುದು. ಇದರ ಉತ್ತರಕ್ಕೆ ಕೃಷ್ಣಾ ನದಿ ಜಲಾನಯನ ಭೂಮಿಯೂ ದಕ್ಷಿಣದ ಕಡೆಗೆ ಕಾವೇರಿ ನದಿಯ ಜಲಾನಯನ ಭೂಮಿಯೂ ವಿಸ್ತರಿಸಿಕೊಂಡು ಹೋಗುವುವು. ಉತ್ತರದಲ್ಲಿ ಹರಿಹರದ ಬಳಿ ನೆಲ ಸಮುದ್ರ ಮಟ್ಟಕ್ಕಿಂತ 1754 ಅಡಿಗಳ ಎತ್ತರಕ್ಕೆ ನಿಲ್ಲುವುದು. ಪಶ್ಚಿಮಕ್ಕೆ ಬೆಟ್ಟ ಭಾಗಗಳು ನೆಲದ ಮಟ್ಟವನ್ನು ಎತ್ತರಿಸಿ, ಸಂಸ್ಥಾನದಲ್ಲೆಲ್ಲ ಅತ್ಯಂತ ಎತ್ತರವಾದ ಸ್ಥಳ ಮುಳ್ಳಯ್ಯನಗಿರಿಯಲ್ಲಿ 6,317 ಅಡಿ ಎತ್ತರದಷ್ಟು ಮೇಲೇರಿದೆ.

ದೇಶವು ಉಷ್ಣವಲಯದಲ್ಲಿದೆ. ಭೂಮಧ್ಯ ರೇಖೆಗೆ ಉತ್ತರದಲ್ಲಿ ಅಕ್ಷಾಂಶ 12°ಯಿಂದ 15°ಗಳವರೆಗೂ, ಪೂರ್ವರೇಖಾಂಶ 75°ಯಿಂದ 78°ಗಳವರೆಗೂ ಇರುವ ಪ್ರದೇಶದಲ್ಲಿದೆ.

ಮೈಸೂರು ದೇಶ ಉತ್ತರ ಮತ್ತು ವಾಯುವ್ಯ ದಿಕ್ಕುಗಳಲ್ಲಿ ಬೊಂಬಾಯಿ ಕರ್ಣಾಟಕ ಜಿಲ್ಲೆಗಳಿಂದ ಧಾರವಾಡ, ಕಾರಾವಾರಗಳಿಂದ ಆವೃತ್ತವಾಗಿದೆ. ಈಶಾನ್ಯ ದಿಕ್ಕಿನಲ್ಲಿ ಆಂಧ್ರಪ್ರಾಂತವಿದೆ. ಉಳಿದ ಎಲ್ಲ ದಿಕ್ಕುಗಳಲ್ಲೂ ಮದ್ರಾಸ್ ಪ್ರಾಂತದಿಂದ ಸುತ್ತಲ್ಪಟ್ಟಿದೆ. ನೈರುತ್ಯಕ್ಕೆ ಮಾತ್ರ ಕೊಡಗು ಸಂಸ್ಥಾನವಿದೆ. ಸಮುದ್ರ ಕರಾವಳಿಯಿಂದ ಮೈಸೂರಿಗೆ ಪೂರ್ವಕ್ಕೆ 120 ಮೈಲಿಯೂ ಪಶ್ಚಿಮಕ್ಕೆ 8 ಮೈಲಿ ದೂರವೂ ಇದೆ. ವರ್ಷಾದ್ಯಂತ ಸೌಮ್ಯವಾದ, ಸಮಧಾತುವಾದ ಮತ್ತು ಹಿತಕರವಾದ ವಾಯುಗುಣವಿದೆ. ಬೇಸಿಗೆಯಲ್ಲಿ 105 ಡಿಗ್ರಿಗಿಂತ ಉಷ್ಣ ಹೆಚ್ಚುವುದಿಲ್ಲ, ಚಳಿಗಾಲದಲ್ಲಿ 40 ಡಿಗ್ರಿಗಿಂತ ಉಷ್ಣಾಂಶ ಕಡಿಮೆಯಾಗುವುದಿಲ್ಲ. ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಬೇಸಿಗೆ

ಯಲ್ಲಿ 90ಡಿಗ್ರಿ. ಚಳಿಗಾಲದಲ್ಲಿ 60ಡಿಗ್ರಿ ಉಷ್ಣಾಂಶವಿದ್ದು ಅತ್ಯಂತ ಸಮಶೀತೋಷ್ಣ ವಾಗಿರುವುದು.

ಮಳೆಗಾಲ ಸಾಮಾನ್ಯವಾಗಿ ಜೂನ್ ತಿಂಗಳ ಮೊದಲ ವಾರದಲ್ಲಿ ಮುಂಗಾರು ಮಳೆಯೊಡನೆ ಆರಂಭವಾಗಿ, ನವೆಂಬರಿನಲ್ಲಿ ಹಿಂಗಾರು ಮಳೆಯುವರೆಗಿರುವುದು. ಅನಂತರ ಆರಂಭವಾಗುವ ಚಳಿಗಾಲದಲ್ಲಿ ಸಾಧಾರಣವಾಗಿ ಮಳೆ ಬೀಳುವುದಿಲ್ಲ. ಮಾರ್ಚಿ ತಿಂಗಳ ಮಧ್ಯ ಭಾಗದಿಂದ ಬೇಸಿಗೆ ಆರಂಭವಾಗಿ ಮೇ ತಿಂಗಳ ಪೂರ್ತಿ ಇರುವುದು.

ಸಂಸ್ಥಾನದಲ್ಲೆಲ್ಲ ಹೆಚ್ಚಾಗಿ ಮಳೆ ಬೀಳುವುದು ಮುಂಗಾರಿನ ಕಾಲದಲ್ಲಿ. ಪಶ್ಚಿಮಘಟ್ಟಕ್ಕೆ ಸೇರಿದಂತಿರುವ ಮಲೆನಾಡು ಪ್ರಾಂತದಲ್ಲಿ ಮಳೆ ಹೆಚ್ಚು. ಆಗುಂಬೆ ಯಲ್ಲಿ ಎಲ್ಲ ಪ್ರದೇಶಕ್ಕಿಂತಲೂ ಅಧಿಕಮಳೆ ಬೀಳುವುದು. ಒಂದು ವರ್ಷ 483 ಅಂಗುಲದಷ್ಟು ಮಳೆಬಿದ್ದಿತು. ಮೈಸೂರಿನ ಒಟ್ಟು ಮಳೆಯಲ್ಲಿ ಶೇ. 60ಭಾಗ ಮಲೆನಾಡಿನಲ್ಲೇ ಬೀಳುವುದು. ಮೈಸೂರಿನ ಉಳಿದ ಭಾಗಗಳಲ್ಲಿ ಸರಾಸರಿ ವರ್ಷಕ್ಕೆ 25ರಿಂದ ಹಿಡಿದು 35 ಅಂಗುಲಗಳವರೆಗೆ ಮಳೆ ಬೀಳುವುದು.

ಮೈಸೂರಿನ ನದಿಗಳಲ್ಲಿ ಮುಖ್ಯವಾದವು ಎರಡು. ಉತ್ತರಕ್ಕೆ ತುಂಗಭದ್ರ, ದಕ್ಷಿಣಕ್ಕೆ ಕಾವೇರಿ. ಇವುಗಳ ಉಪನದಿಗಳು ಹಲವಿವೆ. ಇವಲ್ಲದೆ ಪೂರ್ವಕ್ಕೆ ಎರಡು ಪೆನ್ನಾರ್ ನದಿಗಳೂ ಪಾಲರ್ ನದಿಯೂ ಹರಿಯುವುವು. ಈ ಎಲ್ಲ ನದಿಗಳೂ ಬಂಗಾಳಾಕೊಲ್ಲಿಯನ್ನು ಸೇರುವುವು. ಅರಬ್ಬೀಸಮುದ್ರಕ್ಕೆ ಹೋಗುವ ಒಂದೆರಡು ನದಿಗಳು ವಾಯವ್ಯ ಭಾಗದಲ್ಲಿ ಶರಾವತಿ ನದಿಗೆ ಹೋಗಿ ಸೇರುವುವು. ಶರಾವತಿ ಜೋಗದ ಹತ್ತಿರ 700 ಅಡಿಗಳ ಕೆಳಗೆ ಧುಮುಕಿ ನಯನಮನೋಹರವಾದ ದೃಶ್ಯ ಒದಗಿಸಿದೆ.

ಸಂಸ್ಥಾನದಲ್ಲಿ ನದಿಗಳ ಒಟ್ಟು ಉದ್ದ 1606ಮೈಲಿಗಳು. ಅದರಲ್ಲಿ ತುಂಗಭದ್ರ ಮತ್ತು ಅದರ ಉಪನದಿಗಳು 611ಮೈಲಿ ಉದ್ದವಿವೆ. ಕಾವೇರಿ ಮತ್ತು ಅದರ ಉಪನದಿಗಳ ಉದ್ದ 646 ಮೈಲಿ. ಪೆನ್ನಾರ್-ಪಾಲಾರ್‌ಗಳು 245 ಮೈಲಿ ಇವೆ. ಶರಾವತಿ ಮತ್ತು ಪಶ್ಚಿಮಘಟ್ಟದ ಕಡೆಯ ಇತರ ನದಿಗಳ ಉದ್ದ 103 ಮೈಲಿಗಳು.

ಮೈಸೂರಿನಲ್ಲಿ ಅರಣ್ಯಗಳು 3696ಚದರ ಮೈಲಿಯಷ್ಟು ವಿಸ್ತಾರವಿದೆ. ಪಶ್ಚಿಮ ಘಟ್ಟದ ಕಡೆಯಿರುವ ಭಾಗವೆಲ್ಲ ಸದಾ ಹಸುರಾಗಿಯೇ ಇರುವುದು. ಅಲ್ಲಿಂದ ಸ್ವಲ್ಪ

ಪೂರ್ವಕ್ಕೆ ಬಂದರೆ ಮಲೆನಾಡಿನ ಬಹು ಭಾಗ ಸಂಪೂರ್ಣ ಹಸುರಾಗಿಲ್ಲದಿದ್ದರೂ ಮಧ್ಯಸ್ಥವಾಗಿದೆ. ಇಲ್ಲಿಯೇ ಅಧಿಕವಾಗಿ ಮರಮುಟ್ಟುಗಳೂ, ಗಂಧವೂ, ಬಿದಿರೂ ದೊರೆಯುವುವು. ಅಲ್ಲಿಂದ ಇನ್ನೂ ಪೂರ್ವಕ್ಕೆ ಬಂದರೆ ಬೆಂಗಾಡಿದೆ. ಇದು ಸಂಸ್ಥಾನದ ಅಧಿಕ ಭಾಗವನ್ನು ಆವರಿಸಿದೆ. ಇಲ್ಲಿ ಬೆಳೆಯುವ ಮರಗಳು ಬಹಳ ಕಡಿಮೆ ದರ್ಜೆಯವು.

ಮೈಸೂರಿನಲ್ಲಿ ಪ್ರಾಣಿ ಸಂಪತ್ತು ಚೆನ್ನಾಗಿದೆ. ಹಲವಿಧವಾದ ಪ್ರಾಣಿಗಳಿವೆ. ಹುಲಿ, ಚಿರತೆ, ಆನೆ, ಕಾಡೆಮ್ಮೆ, ಕಾಡುಹಂದಿ, ಕಾಡುನಾಯಿ, ಜಿಂಕೆ ಹೀಗೆ ಹಲವಿಧವಾದ ಮೃಗಗಳನ್ನು ಇಲ್ಲಿಯ ಕಾಡಿನಲ್ಲಿ ಕಾಣಬಹುದು. ಹಾವುಗಳೂ ಅಧಿಕವಾಗಿವೆ. ನದಿಗಳಲ್ಲಿ ಮೀನುಗಳು ಯಥೇಚ್ಛವಾಗಿವೆ.

ಸಂಸ್ಥಾನದಲ್ಲಿ ಅಧಿಕ ಮಳೆಬೀಳುವ ಪ್ರದೇಶದಲ್ಲಿ ಮುಖ್ಯಬೆಳೆ ಭತ್ತ ಮತ್ತು ಅಡಿಕೆ. ಇವಲ್ಲದೆ ಕಬ್ಬು, ಮೆಣಸು, ಕಾಫಿ, ಟೀ, ಏಲಕ್ಕಿ, ರಬ್ಬರ್ ಬೆಳೆಯೂ ಇದೆ. ಮೈದಾನ ಪ್ರದೇಶದಲ್ಲಿ ಆಹಾರ ಧಾನ್ಯಗಳೂ, ಇತರ ಬೆಳಸೂ ಆಗುವುವು. ಭತ್ತ, ರಾಗಿ, ಜೋಳ, ಕಬ್ಬು ಮುಂತಾದ ಪದಾರ್ಥಗಳ ಬೆಳಸಾಗುವುವು. ಹತ್ತಿ, ಹೊಗೆಸೊಪ್ಪು ಮುಂತಾದ ಇತರ ಬೆಳಸುಗಳಾಗುವುವು.

ಸಂಸ್ಥಾನದಲ್ಲಿ ಖನಿಜಸಂಪತ್ತು ಚೆನ್ನಾಗಿದೆ. ಕೋಲಾರ ಜಿಲ್ಲೆಯಲ್ಲಿರುವ ಚಿನ್ನದ ಗಣಿಗಳು ಭಾರತದಲ್ಲೆಲ್ಲಾ ಅತ್ಯಧಿಕ ಪ್ರಮಾಣದಲ್ಲಿ ಚಿನ್ನವನ್ನೊದಗಿಸುವುವು. ತುಮಕೂರು ಜಿಲ್ಲೆಯ ಬೆಳ್ಳಾರ ಗಣಿಯಲ್ಲೂ ಚಿನ್ನದ ಉತ್ಪತ್ತಿಯಿದೆ. ಶಿವಮೊಗ್ಗಾ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಬ್ಬಿಣದ ಅದುರುಗಳು ಸಿಗುವುವು. ಮ್ಯಾಂಗನೀಸ್, ಅಭ್ರಕ, ಕ್ರೋಮಿಯಂ, ಕಲ್ನಾರು, ಪಚ್ಚೆ ಇವು ಸಂಸ್ಥಾನದಲ್ಲಿ ದೊರೆಯುವ ಇತರ ಖನಿಜಗಳು.

ಮೈಸೂರು ಸಂಸ್ಥಾನ ಕೈಗಾರಿಕೆಯಲ್ಲಿ ಬಹಳ ಮುಂದುವರಿದ ಪ್ರದೇಶ. ಅನೇಕ ಪ್ರಧಾನ ಕೈಗಾರಿಕೆಗಳೂ, ಸಣ್ಣ ಪುಟ್ಟ ಗೃಹಕೈಗಾರಿಕೆಗಳೂ ಇಲ್ಲಿ ನಡೆಯುತ್ತವೆ.

ಆಡಳಿತ ಅನುಕೂಲಕ್ಕಾಗಿ ಸಂಸ್ಥಾನವನ್ನು ಹತ್ತು ಜಿಲ್ಲೆಗಳು ಮತ್ತು 96 ತಾಲ್ಲೂಕುಗಳನ್ನಾಗಿ ವಿಂಗಡಿಸಿದೆ. 5 ನಗರಗಳೂ, 106 ಪಟ್ಟಣಗಳೂ, 17,058 ಗ್ರಾಮಗಳೂ ಇವೆ.

ಹತ್ತು ಜಿಲ್ಲೆಗಳೆಂದರೆ–ಬೆಂಗಳೂರು, ಚಿಕ್ಕಮಗಳೂರು, ಚಿತ್ರದುರ್ಗ, ಬಳ್ಳಾರಿ, ಹಾಸನ, ಕೋಲಾರ, ಮಂಡ್ಯ, ಮೈಸೂರು, ತುಮಕೂರು ಮತ್ತು ಶಿವಮೊಗ್ಗ. ಬೆಂಗಳೂರು ಜಿಲ್ಲೆ 3137·9 ಚದರ ಮೈಲಿಯಿದ್ದು 11 ತಾಲ್ಲೂಕುಗಳನ್ನೊಳಗೊಂಡಿದೆ. ಚಿಕ್ಕಮಗಳೂರಿನಲ್ಲಿ 7 ತಾಲ್ಲೂಕುಗಳಿದ್ದು, 2771 ಚದರ ಮೈಲಿ ವಿಸ್ತೀರ್ಣವಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ 9 ತಾಲ್ಲೂಕುಗಳಿವೆ, 4161·9 ಚದರ ಮೈಲಿ ವಿಸ್ತೀರ್ಣವಿದೆ. ಹಾಸನ ಜಿಲ್ಲೆ 8 ತಾಲ್ಲೂಕುಗಳಾಗಿ ವಿಂಗಡವಾಗಿದೆ, 2715·4 ಚದರ ಮೈಲಿ ವಿಸ್ತೀರ್ಣವಾಗಿದೆ. ಬಳ್ಳಾರಿ ಜಿಲ್ಲೆಯು 7 ತಾಲ್ಲೂಕುಗಳಾಗಿ 3821 ವಿಸ್ತೀರ್ಣವಿದೆ. ಕೋಲಾರ ಜಿಲ್ಲೆಯ ವಿಸ್ತೀರ್ಣ 3192·4 ಚದರ ಮೈಲಿ, ಅಲ್ಲಿ 14 ತಾಲ್ಲೂಕುಗಳಿವೆ. ಮಂಡ್ಯ ಜಿಲ್ಲೆ 1935·2 ಚದರ ಮೈಲಿ ವಿಸ್ತೀರ್ಣವಾಗಿದ್ದು, 7 ತಾಲ್ಲೂಕುಗಳನ್ನು ಹೊಂದಿದೆ. ಮೈಸೂರು ಜಿಲ್ಲೆಯ ವಿಸ್ತೀರ್ಣ 3700·3 ಚದರ ಮೈಲಿ, 10 ತಾಲ್ಲೂಕುಗಳಿವೆ. ತುಮಕೂರು ಜಿಲ್ಲೆಯಲ್ಲಿ 10 ತಾಲ್ಲೂಕುಗಳಿವೆ, 4082.1 ಚದರ ಮೈಲಿ ವಿಸ್ತೀರ್ಣವಿದೆ. ಶಿವಮೊಗ್ಗ ಜಿಲ್ಲೆ 4048.6 ಚದರ ಮೈಲಿಯಿದ್ದು 9 ತಾಲ್ಲೂಕುಗಳನ್ನೊಳಗೊಂಡಿದೆ.

ಮೈಸೂರು ನಗರವೇ ಸಂಸ್ಥಾನದ ರಾಜಧಾನಿ. ರಾಜಪ್ರಮುಖರು ಅಲ್ಲಿ ವಾಸಿಸುವರು. ಆದರೆ ಬೆಂಗಳೂರು ಆಡಳಿತ ಕೇಂದ್ರ, ಮಂತ್ರಿಗಳೂ ಇತರ ಪ್ರಮುಖ ಅಧಿಕಾರಿಗಳೂ ಆಡಳಿತ ನಡೆಸುವರು.

ಜನಸಂಖ್ಯೆ

33.310 ಚದರ ಮೈಲಿ ವಿಸ್ತೀರ್ಣದ ಮೈಸೂರು ಸಂಸ್ಥಾನದಲ್ಲಿ (ಬಳ್ಳಾರಿ ಸೇರಿ) 1951ರ ಜನಗಣತಿಯ ಪ್ರಕಾರ 9,848,684 ಜನಸಂಖ್ಯೆಯಿರುವುದಾಗಿ ಗೊತ್ತಾಗಿದೆ. 11.31,814 ಚದರ ಮೈಲಿ ವಿಸ್ತೀರ್ಣದ ಇಡೀ ಭಾರತದಲ್ಲಿ 36.182 ಕೋಟಿ ಜನಸಂಖ್ಯೆಯಿದೆ.

ಕಳೆದ ಹತ್ತು ವರ್ಷಗಳಲ್ಲಿ ಮೈಸೂರಿನ ಜನಸಂಖ್ಯೆ ಏರಿದೆ. ಜನಬಾಹುಳ್ಯವು 17.3 ಲಕ್ಷದಷ್ಟು .ಎಂದರೆ ಶೇ|| 23.6 ರಷ್ಟು ಹೆಚ್ಚಿದೆ. 1901ರಿಂದ 1941ರ ವರೆಗೆ ಬೆಳೆದಿದ್ದ ಜನಸಂಖ್ಯೆಯು ಸುಮಾರಾಗಿ ಕಳೆದ 10 ವರ್ಷದಲ್ಲಿ ಬೆಳೆದಿರುವ ಜನಸಂಖ್ಯೆಯಷ್ಟೇ ಇದೆ. ಕಳೆದ 60 ವರ್ಷಗಳಲ್ಲಿ ಮೈಸೂರು ಸಂಸ್ಥಾನದ ಜನಸಂಖ್ಯೆಯು ದ್ವಿಗುಣಗೊಂಡಿದೆ.

ಕಳೆದ 10 ವರ್ಷಗಳ ಕಾಲದಲ್ಲಿ ಹೆಚ್ಚಾದ 17.3 ಲಕ್ಷದ ಜನಸಂಖ್ಯೆಯಲ್ಲಿ ಅರ್ಧವೆಲ್ಲಾ ನಗರ ಮತ್ತು ಪಟ್ಟಣಗಳ ಭಾಗಗಳಲ್ಲೇ ಆಗಿದೆ. ಬೆಂಗಳೂರು, ಮೈಸೂರು, ಕೆ. ಜಿ. ಎಫ್. ಈ ಮೂರು ನಗರಗಳಲ್ಲೇ ಒಟ್ಟು 4,88,503 ಜನ ಹೆಚ್ಚಿದ್ದಾರೆ. ಬೆಂಗಳೂರು ನಗರದಲ್ಲಿ 1941ರಲ್ಲಿದ್ದ ಜನಸಂಖ್ಯೆಗೆ ಶೇ|| 90.8ರಷ್ಟು 1951ರಲ್ಲಿ ಜನಸಂಖ್ಯೆ ಹೆಚ್ಚಿದೆ (4,06,760ರಿಂದ 7,76,170). ಮೈಸೂರು ನಗರದಲ್ಲಿ ಶೇ|| 62.3ರಷ್ಟು ಹೆಚ್ಚಿದೆ. ಜಿಲ್ಲೆಗಳಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಶೇ|| 29.4ರಷ್ಟು ಜನಸಂಖ್ಯೆ ಬೆಳೆದಿದೆ.

ಜನಸಾಂದ್ರತೆಯು ಚಿಕ್ಕಮಗಳೂರು ಜಿಲ್ಲೆಯಲ್ಲಿ ಚದರ ಮೈಲಿಗೆ 150 ಯಿದ್ದರೆ, ಬೆಂಗಳೂರು ಜಿಲ್ಲೆಯಲ್ಲಿ 441ಯಿದೆ. ಸಂಸ್ಥಾನದಲ್ಲಿ ಸರಾಸರಿ ಒಂದು ಚದರ ಮೈಲಿಗೆ 308 ಜನರಿರುವರು.

ಅಕ್ಷರಸ್ಥರ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತ ಬಂದಿದೆ. 1901ರಲ್ಲಿ ನೂರಕ್ಕೆ 5 ಮಂದಿ ಮಾತ್ರ ಅಕ್ಷರಸ್ಥರಿದ್ದ ಮೈಸೂರಿನಲ್ಲಿ ಈಗ ಅಂದರೆ 1951ರ ಜನಗಣತಿಯಲ್ಲಿ ನೂರಕ್ಕೆ 20.6 ಮಂದಿಯಿರುವುದಾಗಿ ಅಂದಾಜಾಗಿದೆ. ಇದರಲ್ಲಿ ಮಹಿಳೆಯರ ಪಾತ್ರವೂ ಬಹಳ ಹೆಚ್ಚಾಗಿದೆ.

ಬೆಂಗಳೂರು ನಗರದಲ್ಲಿಯೇ ಅಕ್ಷರಸ್ಥರ ಪ್ರಮಾಣ ಅತ್ಯಧಿಕ. 1941ರಲ್ಲಿ

ನೂರಕ್ಕೆ 38.4 ಅಕ್ಷರಸ್ಥರಿದ್ದ ಬೆಂಗಳೂರಿನಲ್ಲಿ 1951ರಲ್ಲಿ 43.3 ಜನ ಓದುಬಲ್ಲವರಿದ್ದಾರೆ. ಈಗ ಮೂವರು ಹೆಂಗಸರಿಗೆ ಒಬ್ಬರು ಓದು ಬಲ್ಲವರು.

ಜ್ಞಾನ ಮತ್ತು ವಿದ್ಯೆಯ ಅಧಿದೇವತೆಯಾದ ಶಾರದಾ ಮಾತೆಯು ಪೀಠವಿರುವ ಶೃಂಗೇರಿಯಲ್ಲಿ ಸಂಸ್ಥಾನದ ಎಲ್ಲ ಪಟ್ಟಣ ನಗರಗಳಿಗಿಂತಲೂ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಅಕ್ಷರಸ್ಥರಿರುವುದು ಯುಕ್ತವಾಗಿದೆ. ಇಲ್ಲಿ ನೂರಕ್ಕೆ 57.3 ಮಂದಿ ಓದು ಬಲ್ಲವರಿದ್ದಾರೆ. ಶೃಂಗೇರಿ ತಾಲ್ಲೂಕಿನಲ್ಲಿ ನೂರಕ್ಕೆ 35.7 ಮಂದಿಯೂ, ಭದ್ರಾವತಿಯಲ್ಲಿ 28.7 ಮಂದಿಯೂ ಓದು ಬಲ್ಲವರಿದ್ದಾರೆ. ಒಂದು ಕಡೆ ಈ ಚಿತ್ರವಾದರೆ ಇನ್ನೊಂದು ಕಡೆ ಅತಿ ಕಡಿಮೆ ಪ್ರಮಾಣದ ಅಕ್ಷರಸ್ಥರಿರುವ ತಾಲ್ಲೂಕೆಂದರೆ ವೈಸೂರು (ನೂರಕ್ಕೆ 8.2), ಬಾಗೇಪಲ್ಲಿ ತಾಲ್ಲೂಕಿನಲ್ಲಿ ನೂರಕ್ಕೆ 8.9.

ಜಿಲ್ಲೆಗಳಲ್ಲೆಲ್ಲ ಶಿವಮೊಗ್ಗಾ ಜಿಲ್ಲೆಯು ಅತ್ಯಧಿಕ ಪ್ರಮಾಣದಲ್ಲಿ ಅಕ್ಷರಸ್ಥರನ್ನು ಹೊಂದಿದೆ (ನೂರಕ್ಕೆ 24.8).

ಸಂಸ್ಥಾನದಲ್ಲಿ ಮಹಿಳೆಯರ ಸಂಖ್ಯೆಯು ಪುರುಷರ ಸಂಖ್ಯೆಗಿಂತ ಕಡಿಮೆಯಾಗಿದೆ. ಈ ಶತಮಾನದ ಆರಂಭದಲ್ಲಿ ಸಾವಿರ ಪುರುಷರಿಗೆ 980 ಮಂದಿ ಮಹಿಳೆಯರಿದ್ದರು. ಈಗ ಅದೇ 945 ಮಂದಿಯಿದ್ದಾರೆ. ಕೆ. ಜಿ. ಎಫ್. ನಲ್ಲಿ ಮಹಿಳೆಯರ ಸಂಖ್ಯೆ ಪುರುಷರದ್ದನ್ನು ಮೀರಿಸಿದೆ (ಸಾವಿರ ಪುರುಷರಿಗೆ 1004 ಮಹಿಳೆಯರು). ಬೆಂಗಳೂರು ನಗರದಲ್ಲಿ ಸಾವಿರ ಪುರುಷರಿಗೆ 885 ಮಂದಿ ಮಹಿಳೆಯರಿದ್ದಾರೆ.

ಮೈಸೂರು ಸಂಸ್ಥಾನಕ್ಕೆ ಈಚೆಗೆ ಪಾಕಿಸ್ತಾನದಿಂದ ಬಂದಿರುವ ನಿರಾಶ್ರಿತರುಗಳ ಸಂಖ್ಯೆ 7891. ಇವರಲ್ಲಿ 5000 ಮಂದಿ ಗಂಡಸರು. ಬೆಂಗಳೂರು ನಗರದಲ್ಲಿಯೇ 4552 ಮಂದಿ ಆಶ್ರಯ ಪಡೆದಿದ್ದಾರೆ. ಉಳಿದವರಲ್ಲಿ ಬಹುಮಂದಿ ಬೆಂಗಳೂರು ಜಿಲ್ಲೆಯಲ್ಲಿ ಅಲ್ಲಲ್ಲಿ ಸೇರಿದ್ದಾರೆ. ಮೈಸೂರು ನಗರದಲ್ಲಿ 499 ಮಂದಿಯಿದ್ದಾರೆ.

ಜಿಲ್ಲೆ ಅಥವಾ ನಗರ	ಒಟ್ಟು ಜನಸಂಖ್ಯೆ	ಗಂಡಸರು	ಹೆಂಗಸರು	ಜನ ಸಾಂದ್ರತೆ
ಬೆಂಗಳೂರು ನಗರ	7,78,977	4,13,687	3,65,290	28,747
ಕೆ. ಜಿ. ಎಫ್.	1,59,084	79,384	79,700	5,305
ಮೈಸೂರು ನಗರ	2,44,323	1,25,459	1,18,864	17,452

ಜಿಲ್ಲೆ ಅಥವಾ ನಗರ	ಒಟ್ಟು ಜನಸಂಖ್ಯೆ	ಗಂಡಸರು	ಹೆಂಗಸರು	ಜನ ಸಾಂದ್ರತೆ
ಬೆಂಗಳೂರು ಜಿಲ್ಲೆ	13,49,030	6,94,744	6,54,286	411
ಕೋಲಾರ ಜಿಲ್ಲೆ	9,70,288	4,93,417	4,76,871	301
ತುಮಕೂರು ಜಿಲ್ಲೆ	11,51,362	5,87,988	5,63,374	281
ಮೈಸೂರು ಜಿಲ್ಲೆ	10,40,130	5,27,711	5,12,419	295
ಮಂಡ್ಯ ಜಿಲ್ಲೆ	7,17,545	3,60,530	3,57,015	374
ಚಿತ್ರದುರ್ಗ ಜಿಲ್ಲೆ	8,68,370	4,47,047	4,21,323	208
ಹಾಸನ ಜಿಲ್ಲೆ	7,15,135	3,63,049	3,52,086	270
ಚಿಕ್ಕಮಗಳೂರು ಜಿಲ್ಲೆ	4,17,538	2,20,231	1,97,307	150
ಶಿವಮೊಗ್ಗ ಜಿಲ್ಲೆ	6,63,315	3,48,684	3,14,631	164
ಬಳ್ಳಾರಿ ಜಿಲ್ಲೆ	7,73,712			

ಪುರಪ್ರದೇಶಗಳಲ್ಲಿ ಜನಸಂಖ್ಯೆ ಬೆಳವಣಿಗೆ

ಜಿಲ್ಲೆ ಅಥವಾ ನಗರ	1941	1951	ಅಭಿವೃದ್ಧಿಯ ಶೇಕಡಾವಾರು
ಜಿಲ್ಲೆಗಳು			
ಬೆಂಗಳೂರು	91,237	1,34,146	47·4
ಕೋಲಾರ	87,668	1,20,049	36·8
ತುಮಕೂರು	65,677	1,05,762	61·2
ಮೈಸೂರು	87,225	1,21,292	30·1
ಮಂಡ್ಯ	53,029	77,776	46·7
ಚಿತ್ರದುರ್ಗ	88,221	1,35,961	54·2
ಹಾಸನ	57,783	87,396	51·4
ಚಿಕ್ಕಮಗಳೂರು	47,641	66,588	39·7
ಶಿವಮೊಗ್ಗ	89,774	1,46,294	62·6

ಜಿಲ್ಲೆ ಅಥವಾ ನಗರ	1941	1951	ಅಭಿವೃದ್ಧಿಯು ಶೇಕಡಾವಾರು
ನಗರಗಳು			
ಬೆಂಗಳೂರು ನಗರ	4,06,760	7,78,977	90·8
ಮೈಸೂರು	1,50,540	2,44,323	62·3
ಕೆ. ಜಿ. ಎಫ್.	1,33,859	1,59,084	18·9
ಒಟ್ಟು ಸಂಸ್ಥಾನದಲ್ಲಿ	13,59,344	21,78.727	60·4

ಜನತೆಯಲ್ಲಿ ಸಾಕ್ಷರತೆ

ಜಿಲ್ಲೆ ಅಥವಾ ನಗರ	ಒಟ್ಟು	ಗಂಡಸರು	ಹೆಂಗಸರು
ಬೆಂಗಳೂರು ನಗರ	3,36,199	2,21,045	1,15,154
ಕೆ. ಜಿ. ಎಫ್.	47,762	34,505	13,257
ಮೈಸೂರು ನಗರ	1,03,981	66,367	37,614
ಬೆಂಗಳೂರು ಜಿಲ್ಲೆ	2,27,604	1,81,580	46,024
ಕೋಲಾರ ಜಿಲ್ಲೆ	1,37,972	1,08,058	29,914
ತುಮಕೂರು ಜಿಲ್ಲೆ	2,02,887	1,63,542	39,345
ಮೈಸೂರು ಜಿಲ್ಲೆ	1,32,026	1,06,549	25,477
ಮಂಡ್ಯ ಜಿಲ್ಲೆ	1,02,073	83,199	18,874
ಚಿತ್ರದುರ್ಗ ಜಿಲ್ಲೆ	1,78,051	1,42,225	35,826
ಹಾಸನ ಜಿಲ್ಲೆ	1,43,000	1,12,368	30.602
ಚಿಕ್ಕಮಗಳೂರು ಜಿಲ್ಲೆ	95,184	72,669	22,515
ಶಿವಮೊಗ್ಗಾ ಜಿಲ್ಲೆ	1,64,540	1,24,302	40,238

ಅರಣ್ಯ ಸಂಪತ್ತು

ಮೈಸೂರಿನಲ್ಲಿ ಅರಣ್ಯಸಂಪತ್ತು ಅಗತ್ಯವಾದಷ್ಟಿಲ್ಲ. ಸಮರಸವಾದ ಆರ್ಥಿಕ ವ್ಯವಸ್ಥೆಗೆ ದೇಶದ ಶೇ. 25ಭಾಗವಾದರೂ ಅರಣ್ಯವಿರಬೇಕು. ಆದರೆ ಮೈಸೂರಿನಲ್ಲಿ 3,936.95 ಚದರಮೈಲಿಗಳಷ್ಟು ಮಾತ್ರ ಅರಣ್ಯವಿದೆ. ಅಂದರೆ ಒಟ್ಟು ವಿಸ್ತೀರ್ಣದಲ್ಲಿ ಶೇ. 14 ಭಾಗ ಮಾತ್ರವಿದೆ. ಸಂಸ್ಥಾನದ ಮುಖ್ಯ ಅರಣ್ಯಭಾಗಗಳು ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿವೆ. ಈ ಅರಣ್ಯಗಳಿಂದ 1500ಟನ್ ಗಂಧದಮರ, 5000ಟನ್ ಮರಮುಟ್ಟುಗಳು, 4,00,000 ಟನ್ ಸೌದೆ ಮತ್ತು ಇದ್ದಿಲು, ಮತ್ತು 10,000 ಟನ್ ಬೊಂಬು ಮತ್ತು ಗಳುಗಳು ದೊರೆಯುವುವು. ಇವಲ್ಲದೆ ಇತರ ಸಣ್ಣಪುಟ್ಟ ಅರಣ್ಯೋತ್ಪನ್ನಗಳಿಂದ ವರ್ಷಕ್ಕೆ 4 ಲಕ್ಷ. ರೂ.ಆದಾಯುವಿದೆ.

ಅರಣ್ಯಗಳ ಸಾಧನಸಂಪತ್ತಿನಿಂದ ಸಂಸ್ಥಾನದ ಅನೇಕ ಕೈಗಾರಿಕೆಗಳು ಬೆಳೆಯುತ್ತಿವೆ. ಭದ್ರಾವತಿಯಲ್ಲಿರುವ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಬೇಕಾದ ಸೌದೆ ಮತ್ತು ಇದ್ದಿಲು ಶಿವಮೊಗ್ಗದ ಅರಣ್ಯಗಳಿಂದಲೇ ಒದಗುತ್ತಿದೆ. ಕಾಗದದ ಕಾರ್ಖಾನೆಗೆ ಬೇಕಾದ ಬಿದರು ಕೂಡ ಶಿವಮೊಗ್ಗ ಅರಣ್ಯಗಳಿಂದಲೇ ದೊರೆಯುವುದು. ಯಶವಂತಪುರದಲ್ಲಿರುವ ಪ್ಲೈವುಡ್ ಕಾರ್ಖಾನೆಗೆ ಬೇಕಾದ ನಯವಾದ ಮರ ಹಾಸನಜಿಲ್ಲೆಯಿಂದ ದೊರೆಯುವದು. ರೈಲ್ವೆ ಮತ್ತು ಎಲೆಕ್ಟ್ರಿಕಲ್ ಇಲಾಖೆಗಳಿಗೆ ಅಗತ್ಯವಾದ ಮರದ ಕಂಬಗಳೂ, ಸ್ಲೀಪರುಗಳೂ ಶಿವಮೊಗ್ಗ ಚಿಕ್ಕಮಗಳೂರು ಅರಣ್ಯಗಳಿಂದ ಸಿಗುವವು.

ಮೈಸೂರಿನ ಅರಣ್ಯಗಳಲ್ಲಿ ಬೇಟೆಗಾರರಿಗೆ ಒಳ್ಳೆಯ ಅವಕಾಶವಿದೆ. ವಿದೇಶೀಯರು ಇಲ್ಲಿ ಬಂದು ಮೃಗಯಾವಿಹಾರ ನಡೆಸುವರು. ಶಿವಮೊಗ್ಗ, ಚಿಕ್ಕಮಗಳೂರು, ಜಿಲ್ಲೆಗಳು ಮೃಗಯಾವಿಹಾರಕ್ಕೆ ಅನುಕೂಲವಾದ ಅರಣ್ಯಗಳನ್ನು ಹೊಂದಿವೆ. ಮೈಸೂರು ಜಿಲ್ಲೆಯ ವೇಣುಗೋಪಾಲ ವೈಲ್ಡ್ ಲೈಫ್ ಪಾರ್ಕ್ ಮತ್ತು ಚಿಕ್ಕಮಗಳೂರಿನ ಜಾಗರ್‌ವ್ಯಾಲಿ ಭಾಗಗಳು ಮೃಗಯಾವಿಹಾರ ಕೇಂದ್ರಗಳಾಗಿವೆ. ಬೆಂಗಳೂರಿನಲ್ಲೊಂದು ಅರಣ್ಯಸಂಶೋಧನ ಸಂಸ್ಥೆ ಇದೆ. ಮರಮುಟ್ಟುಗಳನ್ನು ಸಂರಕ್ಷಿಸುವ ಮತ್ತು ಉಪಯೋಗಿಸುವ ಮಾರ್ಗಗಳನ್ನು ಕುರಿತು ಇಲ್ಲಿ ಸಂಶೋಧನೆ ನಡೆಯುತ್ತಿದೆ. ಈ ಸಂಸ್ಥೆಯಲ್ಲಿ ಅತ್ಯಂತ ಆಧುನಿಕವಾದ ಮ್ಯೂಜಿಯಂ ಮತ್ತು ಪುಸ್ತಕ ಭಂಡಾರ ಇವೆ.

ವ್ಯವಸಾಯಾಭಿವೃದ್ಧಿ

ಇಂದಿನ ಆಹಾರಾಭಾವದ ಸಂದಿಗ್ಧ ಪರಿಸ್ಥಿತಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಆಹಾರೋತ್ಪನ್ನ ಬಹಳ ಮಹತ್ವ ರೂಪ ತಳೆದಿದೆ. ಆಹಾರದ ವಿಷಯದಲ್ಲಿ ಸ್ವಪರಿಪೂರ್ಣತೆಯನ್ನು ಹೊಂದಬೇಕೆಂದು ಭಾರತ ಸರಕಾರ ಹಾಕಿಕೊಂಡಿರುವ ಗುರಿಗೆ ಅನುಗುಣವಾಗಿ ಮೈಸೂರು ಕೂಡ ಆಹಾರೋತ್ಪನ್ನವನ್ನು ಹೆಚ್ಚಿಸಲು ಸಾಧ್ಯವಾದೆಲ್ಲ ತುರ್ತು ಕಾರ್ಯಕ್ರಮಗಳನ್ನೂ ಕೈಕೊಂಡಿದೆ.

ಸಂಸ್ಥಾನದಲ್ಲಿ ವ್ಯವಸಾಯಕ್ಕೆ ಯೋಗ್ಯವಾದಂತಹ ಪ್ರದೇಶವೆಂದು ಗೊತ್ತಾಗಿರುವ ಒಟ್ಟು 1,88,17,161 ಎಕರೆಗಳಲ್ಲಿ ಈಗ ನಿಜವಾಗಿಯೂ ಬೆಳೆ ಪಡೆಯುತ್ತಿರುವ ಒಟ್ಟು ಪ್ರದೇಶ 64,23,987 ಎಕರೆಗಳು ಮಾತ್ರ. ಇಂದಿನ ಬೆಲೆಯ ಆಧಾರದ ಮೇಲೆ ಸಂಸ್ಥಾನದಲ್ಲಿ ವ್ಯವಸಾಯೋತ್ಪನ್ನದ ವಾರ್ಷಿಕ ಆದಾಯ 70 ಕೋಟಿ ರೂ.ಗಳು ಎಂದು ಗೊತ್ತು ಹಚ್ಚಲಾಗಿದೆ. ಆದರೆ ಸಾಗುವಳಿಯ ಭೂಮಿಯನ್ನು ಹೆಚ್ಚು ಮಾಡುತ್ತಾ ಹೋಗುವುದರಿಂದ ಈ ಆದಾಯವನ್ನು ಬಹುವಾಗಿ ವೃದ್ಧಿಗೊಳಿಸುತ್ತಾ ಹೋಗಬಹುದು. ಇದೇ ದೃಷ್ಟಿಯಿಂದ ಈಚೆಗೆ ಸರಕಾರ ಹಲವು ನೀರಾವರಿಯೋಜನೆಗಳನ್ನು ಮಂಜೂರು ಮಾಡಿದೆ. ಅಣೆಕಟ್ಟುಗಳನ್ನು ನಿರ್ಮಿಸುವುದು, ಕೆರೆಗಳನ್ನು ಕಟ್ಟುವುದು, ಈಗ ಇರುವ ನೀರಾವರಿ ವ್ಯವಸ್ಥೆಗಳನ್ನು ಉತ್ತಮಪಡಿಸುವುದು, ನಾಲೆಗಳನ್ನು ದುರಸ್ತು ಮಾಡಿ ಉತ್ತಮಗೊಳಿಸುವುದು, ಪಾಳು ಬಿದ್ದಿರುವ ನೆಲವನ್ನು ಉಳುಮೆಗೆ ಕೊಡುವುದು. ಇವೇ ಮುಂತಾದ ಕ್ರಮಗಳಿಂದ ನೀರಾವರಿ ವ್ಯವಸ್ಥೆ ಅಭಿವೃದ್ಧಿ ಪಡಿಸಲು ಸರಕಾರ ಹವಣಿಸಿದೆ. ಈ ಕಾರ್ಯಗಳಿಗಾಗಿ 1953-54ನೇ ಸಾಲಿಗೆ 22 ಲಕ್ಷ ರೂ.ಗಳ ವಿನಿಯೋಗ ಗೊತ್ತಾಗಿದೆ.

ವ್ಯವಸಾಯೋತ್ಪನ್ನವನ್ನು ಹೆಚ್ಚಿಸುವುದಕ್ಕೆ ಮುಖ್ಯ ಸಾಧನವೆಂದರೆ ಯಂತ್ರೋಪಕರಣಗಳ ಉಪಯೋಗ. ಇದಕ್ಕಾಗಿ ಸರಕಾರದ ವ್ಯವಸಾಯ ಇಲಾಖೆ ತೀವ್ರವಾದ ಪ್ರಚಾರವನ್ನು ಕೈಕೊಂಡಿರುವುದೇ ಅಲ್ಲದೆ, ಟ್ರಾಕ್ಟರುಗಳನ್ನು ಮತ್ತು ಇತರ ಯಂತ್ರೋಪಕರಣಗಳನ್ನು ಸಾಧ್ಯವಾದಷ್ಟು ಅಧಿಕ ಪ್ರಮಾಣದಲ್ಲಿ ರೈತಾಪಿ ವರ್ಗಕ್ಕೆ ಒದಗಿಸಲು ಮತ್ತು ಸಹಾಯ ಮಾಡಲು ವ್ಯವಸ್ಥೆ ಮಾಡಿದೆ. ಆದರೆ ಇದಕ್ಕೆ ವ್ಯವಸಾಯ ವ್ಯವಸ್ಥೆಯಲ್ಲಿರುವ ದೊಡ್ಡ ಅಡಚಣೆಯೆಂದರೆ, ವ್ಯಕ್ತಿಗಳ ವಶದಲ್ಲಿರುವ ಭೂಮಿಯ ಪ್ರಮಾಣ ಬಹಳ ಅಲ್ಪವಾಗಿದ್ದು, ಯಂತ್ರೋಪಕರಣಗಳನ್ನು ಉಪಯೋಗಿಸುವುದು ಮಿತವ್ಯಯ ದೃಷ್ಟಿಯಿಂದ ಸಾಧ್ಯವಾಗುತ್ತಿಲ್ಲ.

ಸಾಧಾರಣವಾಗಿ ಒಬ್ಬೊಬ್ಬ ರೈತನಿಗೆ ಸರಾಸರಿ 5 ಎಕರೆಗಿಂತಲೂ ಕಡಿಮೆ ಪ್ರಮಾಣದಲ್ಲಿ ಜಮೀನುಗಳಿವೆ. ಈ ಅಡಚಣೆಯನ್ನು ನಿವಾರಿಸಲು ಪರಸ್ಪರ ಸಹಕಾರ ತತ್ವದ ಮೇಲೆ ವ್ಯವಸಾಯವನ್ನು ನಡೆಸಲು ಪ್ರೋತ್ಸಾಹ ಕೊಡಲಾಗುತ್ತಿದೆ. ಗ್ರಾಮದ ಜನರೆಲ್ಲರೂ ಒಟ್ಟಾಗಿ ತಮ್ಮ ಎಲ್ಲ ಭೂಮಿಯಲ್ಲಿಯೂ ಒಟ್ಟು ಪ್ರಮಾಣದಲ್ಲಿ ಯಂತ್ರೋಪಕರಣಗಳನ್ನು ಉಪಯೋಗಿಸಿ ಪರಸ್ಪರ ಸಹಕಾರ ತತ್ವದ ಮೇಲೆ ಕೆಲಸ ಮಾಡಿ ಅದೇ ತತ್ವದ ಮೇಲೆ ಉತ್ಪನ್ನದ ಹಂಚಿಕೆ ಮಾಡಲಾಗುವುದು. ಇದರಿಂದ ಮಿತವ್ಯಯವೂ, ಕಾರ್ಯನಿಕ್ಷತೆಯೂ, ವ್ಯವಸ್ಥಾ ಬಲವೂ ಚೆನ್ನಾಗಿದ್ದು ಒಟ್ಟಿನಲ್ಲಿ ಉತ್ಪನ್ನ ಉತ್ತಮಗೊಳ್ಳುವುದು.

ಸಂಸ್ಥಾನದಲ್ಲಿ ವ್ಯವಸಾಯಕ್ಕೆ ಮುಖ್ಯವಾದ ನೀರಿನ ಆಸರೆ ಸರೋವರಗಳಿಂದ ದೊರೆಯುವುದು. ದೊಡ್ಡ ಸರೋವರಗಳಲ್ಲದೆ ಸಾವಿರಾರು ಸಣ್ಣ ಪುಟ್ಟ ಸರೋವರಗಳು ಸಂಸ್ಥಾನಾದ್ಯಂತವೂ ಇದ್ದು ಅವು ವ್ಯವಸಾಯ ಕಾರ್ಯಕ್ಕೆ ನೆರವಾಗಿವೆ. ಸುಮಾರು 29,000 ಚದರ ಮೈಲಿ ವಿಸ್ತೀರ್ಣದ ಪ್ರದೇಶದಲ್ಲಿ 26,000ಕ್ಕೆ ಕಡಿಮೆಯಿಲ್ಲದಂತೆ ವ್ಯವಸಾಯಕ್ಕೆ ಆಸರೆಯಾದ ದೊಡ್ಡ ಸರೋವರಗಳೂ ಸಣ್ಣ ಪುಟ್ಟ ಕೆರೆಗಳೂ ಇವೆ. ಆದರೆ ಈ ಸರೋವರ ಸಂಪತ್ತು ದೊರೆಯಬೇಕಾದಷ್ಟು ಪ್ರಯೋಜನವನ್ನು ಕೊಡುತ್ತಿಲ್ಲ. ಬಹು ಕಾಲದಿಂದಲೂ ಈ ಕೆರೆಗಳಿಗೆ ಸರಿಯಾಗಿ ಗಮನ ಕೊಡದೆ ಅವುಗಳಲ್ಲಿ ಹಲವು ಮಣ್ಣಿನಿಂದ ಹೂತು ಹೋಗಿವೆ, ಹಲವು ಕೇವಲ ಅಲ್ಪ ಪ್ರಮಾಣದಲ್ಲಿ ಕೆಲಸ ಮಾಡುತ್ತಿವೆ. ಈಗ ಈ ಕೆರೆಗಳನ್ನೆಲ್ಲಾ ದುರಸ್ತು ಮಾಡಲಾಗುತ್ತಿದೆ.

ಕೃಷ್ಣರಾಜಸಾಗರ, ವಾಣೀವಿಲಾಸಸಾಗರ ಮತ್ತು ಮಾರ್ಕೋನಹಳ್ಳಿ ಈ ಮೂರು ಭಾರಿ ಜಲಾಶಯಗಳು ನೀರಾವರಿಯ ದೊಡ್ಡ ಆಸರೆಯಾಗಿವೆ. ಇವುಗಳ ಜೊತೆಗೆ ಭದ್ರಾ, ತುಂಗಾ ಮತ್ತು ನುಗು ಅಣೆಕಟ್ಟೆ ಯೋಜನೆಗಳನ್ನು ಕೈಕೊಂಡು ಬೇಗನೆ ಮುಗಿಸಲು ಮೈಸೂರು ಸರಕಾರ ಹವಣಿಸುತ್ತಿದೆ ಈ ಯೋಜನೆಗಳೆಲ್ಲ ಮುಗಿದು ವ್ಯವಸಾಯಕ್ಕೆ ನೀರನ್ನೊದಗಿಸಿದರೆ ಸಂಸ್ಥಾನದಲ್ಲಿ ಇನ್ನೂ ಎರಡು ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳ ಉತ್ಪನ್ನ ಹೆಚ್ಚುವುದೆಂದು ಅಂದಾಜು ಮಾಡಿದೆ.

ಹೊಸ ಹೊಸ ಭೂಮಿಗಳನ್ನು ಸಾಗುವಳಿಗೆ ತರಲು ಸಂಸ್ಥಾನ ಸರಕಾರ ಸತತವಾಗಿ ಪ್ರಯತ್ನಿಸುತ್ತಿದೆ. ಇದರಿಂದ ಸಂಸ್ಥಾನದಲ್ಲಿಯ ಪಾಳುಭೂಮಿಯ ವಿಸ್ತೀರ್ಣ 20,518 ಎಕರೆಗೆ ಇಳಿದಿದೆ.

ಮೈಸೂರಿಗೆ ಹೊರಗಿನಿಂದ ಅಕ್ಕಿ, ಗೋಧಿ, ಬೇಳೆಗಳು, ಮಸಾಲೆ ಪದಾರ್ಥಗಳು, ಹೊಗೇಸೊಪ್ಪು, ಹತ್ತಿ ಇವುಗಳು ಬರುವುವು. ಮೈಸೂರಿನಲ್ಲಿ ಕಾಫಿ, ಏಲಕ್ಕಿ, ಅಡಿಕೆ, ತೆಂಗು, ರೇಷ್ಮೆ, ಎಣ್ಣೆ ಬೀಜಗಳು, ಹಣ್ಣುಗಳು, ತರಕಾರಿಗಳು ಮತ್ತು ಕಬ್ಬು ಇವುಗಳ ಉತ್ಪನ್ನದಿಂದ ಒಳ್ಳೆಯ ಆದಾಯವಿದೆ. ವ್ಯವಸಾಯೋತ್ಪನ್ನಗಳಲ್ಲಿ ದೇಶದ ಹೊರಭಾಗಗಳೊಡನೆ ನಡೆಸಿದ ವ್ಯಾಪಾರದಿಂದ 1939–45ರಲ್ಲಿ ಸಂಸ್ಥಾನಕ್ಕೆ 3 ಕೋಟಿ ರೂಪಾಯಿಗಳ ಲಾಭ ದೊರೆತಿದೆ. ವ್ಯವಸಾಯ ಸಂಸ್ಥಾನದ ಒಂದು ದೊಡ್ಡ ಸಂಪತ್ತಾಗಿದೆ.

ಸಂಸ್ಥಾನಕ್ಕೆ ಹೆಚ್ಚಿನ ಹಣವನ್ನೊದಗಿಸುವ ಬೆಳಸುಗಳಲ್ಲಿ ಕಬ್ಬು ಬಹು ಮುಖ್ಯ. 48,000 ಎಕರೆಗಳಷ್ಟು ವಿಸ್ತೀರ್ಣದಲ್ಲಿ ಕಬ್ಬನ್ನು ಬೆಳೆಯುತ್ತಿದೆ. ಬಹುಮಟ್ಟಿಗೆ ಕಬ್ಬಿನಬೆಳೆ ಮಂಡ್ಯ ಜಿಲ್ಲೆಯೊಳಗೂ ಸುತ್ತಮುತ್ತಲೂ ಆಗುತ್ತಿದೆ. ಆದ್ದರಿಂದಲೇ ಸಕ್ಕರೆಯ ಕಾರ್ಖಾನೆಯನ್ನು ಮಂಡ್ಯದಲ್ಲಿಯೇ ಸ್ಥಾಪಿಸಲಾಗಿದೆ. ಮಂಡ್ಯದ ಸಕ್ಕರೆಕಾರ್ಖಾನೆಗೆ ವರ್ಷಕ್ಕೆ 25,50,000ಟನ್ನುಗಳಷ್ಟು ಕಬ್ಬು ಒದಗಬೇಕು. ಮಂಡ್ಯದ ಸುತ್ತಮುತ್ತಲ ಪ್ರದೇಶದಲ್ಲಿ ಒಂದೆಕರೆಗೆ ಸರಾಸರಿ 25ಟನ್ನುಗಳಷ್ಟು ಕಬ್ಬು ಬೆಳೆಯುವುದು. ಕಾರ್ಖಾನೆಯು 1946–47ರವರೆಗೆ ರೈತರುಗಳಿಗೆ ಕಬ್ಬಿಗಾಗಿ 2.85 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ; ಸುಮಾರು 7 ಕೋಟಿ ರೂಪಾಯಿಗಳ ಬೆಲೆಯ ಸಕ್ಕರೆಯನ್ನು ತಯಾರಿಸಿದೆ. 1950ರ ಮೇ ತಿಂಗಳಲ್ಲಿ ಈ ಕಾರ್ಖಾನೆಯಲ್ಲಿ ಪೆಪ್ಪರ್‌ಮೆಂಟ್ ತಯಾರಿಕಾ ವಿಭಾಗವೊಂದು ಸ್ಥಾಪಿತವಾಗಿ ಕೆಲಸಮಾಡುತ್ತಿದೆ. ಈ ಕಾರ್ಖಾನೆ ಇತರ ವಿಸ್ತರಣ ಹಂಚಿಕೆಗಳನ್ನೂ ಹೊಂದಿದೆ. ತನ್ಮೂಲಕ ಸಕ್ಕರೆಯ ಉತ್ಪನ್ನವನ್ನು ಹೆಚ್ಚಿಸುವ ಆಲೋಚನೆ ಹೊಂದಿದೆ.

ಸಂಸ್ಥಾನದಲ್ಲಿ ಮತ್ತೊಂದು ಮುಖ್ಯಬೆಳೆಯೆಂದರೆ ಹತ್ತಿ. ಹಾಸನ, ಮೈಸೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಂಪುಭೂಮಿಯಲ್ಲಿ ಬೆಳೆ ಚೆನ್ನಾಗಿ ಆಗುತ್ತದೆ. ಕೇಂದ್ರ ಸರಕಾರ ಹತ್ತಿ ಬೆಳೆಯ ಅಭಿವೃದ್ಧಿಗಾಗಿ ಒದಗಿಸಿದ 18,000 ರೂ.ಗಳನ್ನು ಸಂಸ್ಥಾನ ಸರಕಾರ ಪೂರ್ಣವಾಗಿ ಉಪಯೋಗಿಸಿಕೊಂಡು ಹತ್ತಿ ಉತ್ಪನ್ನ ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತಿದೆ. ಈ ಹಂಚಿಕೆಯ ಫಲವಾಗಿ ಕೆಂಪುನೆಲದಲ್ಲಿ 1950ರಲ್ಲಿ 18,000 ಎಕರೆಯಷ್ಟು ಭೂಮಿಯಲ್ಲಿ ಉತ್ತಮ ದರ್ಜೆಯ ' ಲಾಂಗ್ ಸ್ಟೇಪಲ್ ' ಹತ್ತಿಯನ್ನು ಬೆಳೆಯಲವಕಾಶವಾಯಿತು. ಅದರ ಹಿಂದಿನ ವರ್ಷದಲ್ಲಿ 5,560ಎಕರೆಯಷ್ಟು ಭೂಮಿಯಲ್ಲಿ ಮಾತ್ರ ಈ ಬೆಳೆಯಾಗಿತ್ತು. ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿಯ ಕಪ್ಪುನೆಲದಲ್ಲಿ ಉತ್ತಮವರ್ಗದ ಮಾಡಿಯಂ

ಸ್ಟೇಪಲ್ ಹತ್ತಿಯನ್ನು ಬೆಳೆಯುತ್ತಿದೆ. ಇದರಿಂದ 7,000 ಬೇಲುಗಳಷ್ಟು ಹತ್ತಿಯು ಉತ್ಪನ್ನ ಹೆಚ್ಚಿದೆ. ಈ ಹೊಸ ಕಾರ್ಯ ಯೋಜನೆಯು ಪರಿಣಾಮವಾಗಿ 1950ರಲ್ಲಿ ಹತ್ತಿಬೆಳೆಯುವ ಜಮೀನು 68,000 ಎಕರೆಯಿಂದ 1,00,000 ಎಕರೆಗೆ ವಿಸ್ತರಿಸಿತು.

ಲಾಭವನ್ನೊದಗಿಸುವ ಮತ್ತೊಂದು ಮುಖ್ಯ ಬೆಳೆಯೆಂದರೆ ಕಾಫಿ. ಸುಮಾರು 10,000 ಎಕರೆಯಷ್ಟು ಜಮೀನಿನಲ್ಲಿ ಕಾಫಿ ಬೆಳೆಯಾಗುವುದು. ಭಾರತದಲ್ಲಿ ಉತ್ಪನ್ನವಾಗುವ ಕಾಫಿ ಬೀಜದಲ್ಲಿ ಮೈಸೂರಿನಲ್ಲೇ ಶೇ. 45 ರಷ್ಟು ಉತ್ಪನ್ನವಾಗುವುದು. ಮೈಸೂರಿನಲ್ಲಿ ಕಾಫಿ ಬೆಳೆಯಾಗುವುದು ಮುಖ್ಯವಾಗಿ ಮಲೆನಾಡಿನಲ್ಲಿ. ಹಣ ಕೊಡುವ ಇತರ ಬೆಳೆಗಳೆಂದರೆ ಆಲೂಗೆಡ್ಡೆ, ಟೀ. ಇವೆಲ್ಲ ಬಹುಮಟ್ಟಿಗೆ ಹೊರಭಾಗಕ್ಕೆ ರಫ್ತಾಗಿ ಹೋಗುವುವು. ಮಲೆನಾಡಿನಲ್ಲಿ, ಅದರಲ್ಲಿಯೂ ಹಾಸನ ಜಿಲ್ಲೆಯಲ್ಲಿ, ಏಲಕ್ಕಿ ವ್ಯವಸಾಯ ಬಹು ಮುಖ್ಯವಾದುದು. ಸುಮಾರು 29,000 ಎಕರೆಯಷ್ಟು ಭೂಮಿಯಲ್ಲಿ ಇದರ ಬೆಳೆಯಾಗುವುದು.

ಅಡಿಕೆ ಮತ್ತು ಹಿಪ್ಪನೇರಳೆ ಬೆಳೆಗಳೂ ಒಳ್ಳೆಯ ಹಣವನ್ನು ಕೊಡುತ್ತಿವೆ. ಅಡಕೆ 38,000 ಎಕರೆಯಷ್ಟು ವಿಸ್ತೀರ್ಣದಲ್ಲಿ ಬೆಳೆಯುತ್ತಿದೆ, ಹಿಪ್ಪನೇರಳೆ 80,000 ಎಕರೆಯಲ್ಲಿ ಆಗುವುದು. ಈ ಹಿಪ್ಪನೇರಳೆಯಿಂದ ವರ್ಷಕ್ಕೆ 14 ಲಕ್ಷ ಪೌಂಡುಗಳಷ್ಟು ರೇಷ್ಮೆಯನ್ನು ಉತ್ಪನ್ನ ಮಾಡಲು ಸಹಾಯವಾಗುತ್ತಿದೆ. ವರ್ಷ ವರ್ಷವೂ 10 ಲಕ್ಷ ಟನ್‌ಗಳಿಗಿಂತ ಕಡಿಮೆಯಿಲ್ಲದಂತೆ ಮೈಸೂರಿನಿಂದ ಹೊರಭಾಗಕ್ಕೆ ರೇಷ್ಮೆ ರವಾನೆಯಾಗುವುದು.

ತರಕಾರಿ ಮತ್ತು ಹಣ್ಣುಗಳ ಬೆಳೆಯೂ ಕೂಡ ದೇಶದ ಸಂಪತ್ತಿಗೆ ಸಾಧಕವಾಗಿದೆ. ಮೈಸೂರಿನಲ್ಲಿ ಆಗುವ ಕಿತ್ತಳೆ ಹಣ್ಣು, ಅದರಲ್ಲಿಯೂ 'ಎಮ್ಮೆ ದೊಡ್ಡಿ' ಮಾದರಿಯದು, ಬಹಳ ಚೆನ್ನಾಗಿ ಖರ್ಚಾಗುವುದು. ಇದು 5,000 ಎಕರೆಯ ಭೂಮಿಯಲ್ಲಿ ಬೆಳೆಯಾಗುತ್ತಿದೆ.

ಗ್ರಾಮಾಭಿವೃದ್ಧಿ

ಗ್ರಾಮಗಳೇ ಪ್ರಧಾನವಾಗುಳ್ಳ ಮೈಸೂರು ಸಂಸ್ಥಾನ, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಿಲ್ಲದೆ ಮುಂದೆ ಬರುವುದು ಸಾಧ್ಯವಿಲ್ಲವೆಂಬುದು ವೇದ್ಯವಾಗಿದೆ. ಆದ್ದರಿಂದ ಸರಕಾರ ಈ ಕಡೆಗೆ ತನ್ನ ದೃಷ್ಟಿಯನ್ನು ಹೊರಳಿಸಿ, ಸೂಕ್ತವಾದ ಕ್ರಮಗಳನ್ನು ಕೈಗೊಂಡಿದೆ. ಗ್ರಾಮಾಭಿವೃದ್ಧಿ ಕಾರ್ಯಗಳನ್ನು ತೀವ್ರತೆಯಿಂದ ಕೈಗೊಳ್ಳುವ ಸಲುವಾಗಿ ಒಬ್ಬ ಕಮಿಷನರ ನೇತೃತ್ವದಲ್ಲಿ ಒಂದು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿದೆ.

1953–54ನೇ ಸಾಲಿನಲ್ಲಿ ಗ್ರಾಮಾಭಿವೃದ್ಧಿಗಾಗಿ 31.52.000 ರೂ.ಗಳನ್ನು ಸರಕಾರ ಮೀಸಲಾಗಿಟ್ಟಿದೆ. ಗ್ರಾಮಗಳಲ್ಲಿ ನೀರಿನ ಸರಬರಾಜಿಗಾಗಿ ಈ ಹಣದಲ್ಲಿ 2 ಲಕ್ಷ ರೂಪಾಯಿ ಉಪಯೋಗವಾಗುವುದು. ಗ್ರಾಮ ಸಂಚಾರಮಾರ್ಗ ಸೌಲಭ್ಯಗಳಿಗಾಗಿ ಒಂದು ಲಕ್ಷ ರೂ. ನಿಗದಿಯಾಗಿದೆ. ನಿಮ್ನವರ್ಗದ ಜನರಿಗೆ ವಸತಿ ಸೌಕರ್ಯವನ್ನೊದಗಿಸಲು 19 ಲಕ್ಷ ರೂ. ವಿನಿಯೋಗವಾಗುವುದು.

ಗ್ರಾಮಾಭಿವೃದ್ಧಿ ಕಾರ್ಯಗಳನ್ನು ತ್ವರೆಯಿಂದಲೂ ದಕ್ಷತೆಯಿಂದಲೂ ನಡೆಸುವ ಸಲುವಾಗಿ ಕ್ರೇಂದ್ರ, ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಗ್ರಾಮಗಳಲ್ಲಿ ಜನರು ಸಹಕಾರ ಕಾರ್ಯ ಕಲಾಪಗಳ ಪ್ರಯೋಜನ ಹೊಂದುವಂತೆ ಮಾಡುವುದಕ್ಕಾಗಿಯೂ, ನಡವಳ ದಳ್ಳಾಳಿಗಳ ಲಾಭಕೋರತನವನ್ನು ತಪ್ಪಿಸುವುದಕ್ಕಾಗಿಯೂ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ.

ಗ್ರಾಮಸ್ಥರು ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ಸರ್ಕಾರದೊಡನೆ ಬಹುಮಟ್ಟಿಗೆ ಸಹಕರಿಸುತ್ತಿದ್ದಾರೆ ಎಂದು ಹೇಳಬಹುದು. ಇದಕ್ಕೆ ಒಂದು ನಿದರ್ಶನ: ಗ್ರಾಮಗಳನ್ನು ದುರಸ್ತುಪಡಿಸಿ, ಉತ್ತಮಪಡಿಸಲು ಗ್ರಾಮಸ್ಥರು ವಾರಕ್ಕೊಂದು ದಿನ ಉಚಿತವಾದ ಸೇವೆ ಸಲ್ಲಿಸುತ್ತಿದ್ದಾರೆ. ಇದಲ್ಲದೆ 1949ರಲ್ಲಿ 1760 ಗ್ರಾಮಗಳಲ್ಲಿ ತೋಪುಗಳನ್ನು ನೆಡಲಾಗಿದೆ. ವನಮಹೋತ್ಸವದ ಕಾರ್ಯಕ್ರಮದ ರೀತ್ಯಾ ಪ್ರತಿ ವರ್ಷವೂ ಸಂಸ್ಥಾನದ ವಿವಿಧ ಭಾಗಗಳಲ್ಲಿ ಲಕ್ಷಾಂತರ ಸಸಿಗಳನ್ನು ನೆಡಲಾಗುತ್ತಿದೆ.

ಗ್ರಾಮಾಂತರ ಭಾಗಗಳಲ್ಲಿ ಜನತೆಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ 1951ರಲ್ಲಿ ಪ್ರತಿ ಗ್ರಾಮದಲ್ಲಿಯೂ ಗ್ರಾಮಸಮೂಹ ಕೇಂದ್ರಗಳನ್ನು ಸ್ಥಾಪಿಸುವ ಹಂಚಿಕೆಯನ್ನು ಜಾರಿಗೆ ತಂದಿದೆ.

ಸಹಕಾರ ಚಳುವಳಿ

ಮೈಸೂರು ಸಂಸ್ಥಾನದ ಸಹಕಾರ ಚಳುವಳಿ 1905ರಷ್ಟು ಹಿಂದೆಯೇ ಆರಂಭವಾಗಿ ಕ್ರಮಕ್ರಮವಾಗಿ ಬೆಳೆದುಬಂದಿದೆ. ಆರಂಭದಲ್ಲಿ ಪುರಪ್ರದೇಶದಲ್ಲಿ ಮಾತ್ರ ಸಹಕಾರ ಸಂಘಗಳು ಆರಂಭವಾದುವು. ಆದರೆ ಕ್ರಮೇಣ ಸಹಕಾರ ಸಂದೇಶ ಗ್ರಾಮಾಂತರ ಭಾಗಗಳನ್ನೂ ಪ್ರವೇಶಿಸುತ್ತಾ ಬಂದಿದೆ. ಅಲ್ಲದೆ ಸಹಕಾರ ಚಳುವಳಿ ಸರ್ವಾಂಗೀನವಾಗಿ ಬೆಳೆಯುತ್ತಾ ಬಂದಿದೆ. ಸರಕಾರ ಕೂಡ ಇದರ ಪ್ರಚಾರಕ್ಕೆ ಮತ್ತು ಬೆಳವಣಿಗೆಗೆ ನೆರವು ನೀಡುತ್ತಿದೆ. 1953-4ರಲ್ಲಿ ಸಹಕಾರ ಸಂಘಗಳ ಬೆಳವಣಿಗೆಗಾಗಿ ಸರಕಾರ 6,59,000 ರೂ.ಗಳನ್ನೂ ಮೀಸಲಾಗಿಟ್ಟಿದೆ.

ಈಗ ಸಂಸ್ಥಾನದಲ್ಲೆಲ್ಲಾ ಒಟ್ಟು 5170ಕ್ಕೆ ಮೇಲ್ಪಟ್ಟು ಸಹಕಾರ ಸಂಘಗಳಿವೆ. ಅವುಗಳ ಸದಸ್ಯ ಬಲ 5,50,000 ಕ್ಕಿಂತಲೂ ಹೆಚ್ಚಾಗಿ ಇದೆ. ಇವುಗಳ ಷೇರುಗಳ ಬಂಡವಾಳ ಒಂದೂವರೆ ಕೋಟಿ ರೂ.ಗಳನ್ನು ಮೀರಿದೆ.

1949ರಲ್ಲಿ ಸರಕಾರ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಆರಂಭಿಸಿ, ಸಂಸ್ಥಾನದ ಮೂಲೆಮೂಲೆಯಲ್ಲೂ ಗ್ರಾಮಾಂತರ ಭಾಗಗಳಿಗೆಲ್ಲ ಸಹಕಾರ ಸಂಘಗಳ ಅನುಕೂಲವನ್ನೊದಗಿಸುವ ವ್ಯವಸ್ಥೆಮಾಡಿತು. ಈ ವ್ಯವಸ್ಥೆಯಿಂದ ಗ್ರಾಮಾಂತರ ಜನರು ಆತ್ಮಾವಲಂಬಿಗಳೂ, ಪರಸ್ಪರ ಸಹಾಯಕರೂ ಆಗಲು ದಾರಿಮಾಡಿ ಕೊಡಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ವ್ಯವಸಾಯಗಾರರು ತಮಗೆ ಅಗತ್ಯವಾದ ಸಾಲ ಪಡೆಯಲು ಖಾಸಗಿಯವರ ಕೈಕಾದು, ಅಧಿಕವಾಗಿ ಬಡ್ಡಿಯನ್ನು ಕೊಟ್ಟು ಕೊನೆಯಲ್ಲಿ ಅಧಿಕ ನಷ್ಟಪಡೆಯುತ್ತಿರುವುದನ್ನು ತಪ್ಪಿಸುವುದೇ ಇದರ ಮುಖ್ಯ ಉದ್ದೇಶ. ವ್ಯವಸಾಯಗಾರರಿಗೆ ಅಗತ್ಯವಾದಂತಹ ಸಾಧನ ಸಾಮಗ್ರಿಗಳನ್ನು ಸಾಲವಾಗಿ ಕೊಡುವ ವ್ಯವಸ್ಥೆಮಾಡಿದೆ. ಈ ವ್ಯವಸ್ಥೆ ಪ್ರಕಾರ ಸಂಸ್ಥಾನದಲ್ಲೆಲ್ಲ ಒಟ್ಟು 828 ವಿವಿಧೋದ್ದೇಶ ಸಹಕಾರ ಸಂಘಗಳಿವೆ.

ಕೈಗಾರಿಕಾ ಉದ್ದಿಶ್ಯಗಳಿಗಾಗಿ ಪ್ರಾಂತೀಯ ಹತ್ತಿ ಕೈಮಗ್ಗದವರ ಸಹಕಾರ ಸಂಘ, ಪ್ರಾಂತೀಯ ರೇಷ್ಮೆ ಕೈಮಗ್ಗದವರ ಸಹಕಾರ ಸಂಘ, ಪ್ರಾಂತೀಯ ಟೆಲಿಸ್ ಸಹಕಾರ ಸಂಘ ಮುಂತಾದ ಸಂಘಗಳು ಏರ್ಪಾಟಾಗಿ ಆಯಾ ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನೀಯುವ ಕಾರ್ಯ ನಡೆಯುತ್ತಿದೆ.

ಗೃಹದ ನಿರ್ಮಾಣ ಕಾರ್ಯದಲ್ಲಿಯೂ ಸಹಕಾರ ತತ್ವವನ್ನು ಪ್ರಚಾರ

ಮಾಡಲು ಪ್ರಾಂತೀಯ ಗೃಹನಿರ್ಮಾಣ ಕಾರ್ಪೊರೇಷನನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಇದಲ್ಲದೆ ಶಿವಮೊಗ್ಗಾ, ಮೈಸೂರು, ಬೆಂಗಳೂರು, ಮಂಡ್ಯ ಮುಂತಾದ ಪಟ್ಟಣಗಳಲ್ಲಿ ಗೃಹನಿರ್ಮಾಣ ಸಹಕಾರ ಸಂಘಗಳು ಕೆಲಸಮಾಡುತ್ತಿವೆ.

ಈಚೆಗೆ ವ್ಯವಸಾಯ ಕಾರ್ಯಕ್ರಮದಲ್ಲಿಯೂ ಸಹಕಾರ ತತ್ವವನ್ನು ಜಾರಿಗೆ ತರುವ ಉದ್ದಿಶ್ಯದಿಂದ ಮೈಸೂರು ಸರಕಾರ ಸಹಕಾರ ವ್ಯವಸಾಯ ಕ್ಷೇತ್ರಗಳನ್ನು ಆರಂಭಿಸಿದೆ. ಈಗ ಇಂತಹ 21 ವ್ಯವಸಾಯ ಸಹಕಾರ ಸಂಘಗಳು ಕೆಲಸಮಾಡುತ್ತಿವೆ.

ಮೈಸೂರು ಪ್ರಾಂತೀಯ ಅಡಮಾನದ ಬ್ಯಾಂಕಿನಿಂದ ಹಣವನ್ನು ದೊರಕಿಸಿ ಕೊಡುವ ಕಾರ್ಯಕ್ರಮವನ್ನೀಗ ಹೆಚ್ಚಾಗಿ ವಿಸ್ತರಿಸಲಾಗಿದೆ. ಸುಮಾರು 80 ಪ್ರಾಥಮಿಕ ಜಮೀನು ಅಡಮಾನ ಬ್ಯಾಂಕುಗಳು ಈ ಕೇಂದ್ರ ಬ್ಯಾಂಕಿಗೆ ಲಗತ್ತಾಗಿವೆ.

ಸಹಕಾರ ತತ್ವ ಮುದ್ರಣ ಪ್ರಪಂಚವನ್ನೂ ಪ್ರವೇಶಿಸಿದೆ. ಬೆಂಗಳೂರಿನಲ್ಲಿ ಮೈಸೂರು ಕೋ-ಆಪರೇಟಿವ್ ಪ್ರಿಂಟಿಂಗ್ ವರ್ಕ್ಸ್ ಸ್ಥಾಪನೆಯಾಗಿ, ಸಹಕಾರ ಸಂಸ್ಥೆಗಳಿಗೆ ಬೇಕಾಗುವ ರಿಜಿಸ್ಟರ್ ಮುಂತಾದುವನ್ನು ಮುದ್ರಿಸಿ, ಒದಗಿಸುತ್ತಿದೆ. ಸಹಕಾರ ತತ್ವ ಪ್ರಚಾರಕ್ಕಾಗಿ ಪಾಂತೀಯ ಸಹಕಾರ ಇನ್ಸ್ಟಿಟ್ಯೂಟ್ ಬೆಂಗಳೂರಿನಲ್ಲಿ ಸ್ಥಾಪನೆಯಾಗಿ ಕೆಲಸ ಮಾಡುತ್ತಿದೆ. ಇದರ ಶಾಖೆಗಳು ಮೈಸೂರು ಮತ್ತು ಇತರ ಪಟ್ಟಣಗಳಲ್ಲಿವೆ. ಈ ಸಂಸ್ಥೆ ಪ್ರಚಾರ ಕಾರ್ಯದ ಜೊತೆಗೆ ಶಿಕ್ಷಣ ವ್ಯವಸ್ಥೆಯನ್ನೂ ಮಾಡಿದೆ. ವರ್ಷಂಪ್ರತಿ ಹಲವರು ಸಹಕಾರ ಮತ್ತು ಸಂಬಂಧಪಟ್ಟ ಇತರ ವಿಷಯಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ವರ್ಷಕ್ಕೊಂದುಸಲ ಪ್ರಾಂತೀಯ ಸಹಕಾರಿಗಳ ಸಮ್ಮೇಳನ ನಡೆದು, ಸಹಕಾರ ಕಾರ್ಯದ ಮುನ್ನಡೆಗೆ ಪ್ರಯತ್ನವಾಗುತ್ತಿದೆ. ಮೈಸೂರಿಗೆ ಹೊಸದಾಗಿ ಸೇರಿದ ಬಳ್ಳಾರಿ ಜಿಲ್ಲೆಯಲ್ಲಿಯೂ ಸಹಕಾರ ಸಂಸ್ಥೆಗಳು ಮುಂದುವರಿದಿವೆ.

ಸಹಕಾರ ಸಂಸ್ಥೆಗಳಿಗೆ ಸಾಮಾನುಗಳನ್ನು ಮಾರಾಟಕ್ಕಾಗಿ ಒದಗಿಸಲು ಪ್ರಾಂತೀಯ ಮಾರ್ಕೆಟಿಂಗ್ ಕೋ-ಆಪರೇಟಿವ್ ಸಂಸ್ಥೆ ಬೆಂಗಳೂರಿನಲ್ಲಿ ಸ್ಥಾಪನೆಯಾಗಿ, ಕೆಲಸಮಾಡುತ್ತಿದೆ.

———

ಕೈಗಾರಿಕೆಗಳು

ಕೈಗಾರಿಕೆಯಲ್ಲಿ ಮೈಸೂರು ಸಂಸ್ಥಾನ ಭಾರತವಲ್ಲೆಲ್ಲ ಅತ್ಯಂತ ಪ್ರಭಾವಶಾಲಿಯಾದ ಪ್ರಮುಖಸ್ಥಾನ ಪಡೆದಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಮೈಸೂರು ಅತ್ಯಂತ ಪ್ರಗತಿ ಪರವಾದ ದೇಶವೆಂದು ಪ್ರಸಿದ್ಧವಾಗಿದೆ. ಇಲ್ಲಿನ ಪ್ರಕೃತಿ ಸಂಪತ್ತೂ, ಅನುಕೂಲವಾದ ಹವಾಗುಣವೂ, ಆಡಳಿತ ವರ್ಗದ ಪ್ರಗತಿದಾಯಕವಾದ ನೀತಿ ಮತ್ತು ಪ್ರೋತ್ಸಾಹವೂ ಕೈಗಾರಿಕಾಭಿವೃದ್ಧಿಗೆ ಬಹಳ ಸಹಾಯಮಾಡಿವೆ.

ಮೈಸೂರಿನ ಕೈಗಾರಿಕಾಭಿವೃದ್ಧಿಯ ಇತಿಹಾಸ ಸುಮಾರು ಐವತ್ತು ವರ್ಷಗಳ ಹಿಂದೆ ಆರಂಭವಾಯಿತೆನ್ನಬಹುದು. ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ವ್ಯವಸ್ಥೆ ಶಿವಸಮುದ್ರದಲ್ಲಿ ಆಗ ಆರಂಭವಾಯಿತು. ಭಾರತದಲ್ಲಿ ಇಂತಹ ಸಾಹಸ ನಡೆದುದು ಮೈಸೂರಿನಲ್ಲಿಯೇ ಮೊದಲು. ಇಲ್ಲಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯಿಂದ ಸಂಸ್ಥಾನವಲ್ಲಿ ವಿವಿಧಕೈಗಾರಿಕೆಗಳ ಬೆಳವಣಿಗೆಗಾಗಿ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ನೀತಿಯನ್ನು ಅನುಸರಿಸುತ್ತಾ ಬಂದುದರಿಂದ ಈ ಕಾರ್ಯ ಸುಲಭವಾಗಿ ನೆರವೇರಲು ಹೆಚ್ಚು ಅವಕಾಶವಾಯಿತು.

ಸರಕಾರ ನೇರವಾಗಿ ತಾನೇ ಹಲವಾರು ಕೈಗಾರಿಕೆಗಳನ್ನು ಆರಂಭಿಸಿದೆ. ವಿದ್ಯುಚ್ಛಕ್ತಿ, ಕಬ್ಬಿಣ-ಉಕ್ಕು, ಸಿಮೆಂಟ್ ಮುಂತಾದ ಮೂಲಭೂತವಾದ ಕೈಗಾರಿಕಾ ಪರಿಶ್ರಮಗಳನ್ನೆಲ್ಲ ಸರಕಾರ ನಡೆಸಿಕೊಂಡು ಬರುತ್ತಿದೆ. ಇತರ ಪ್ರಮುಖ ಮತ್ತು ಹಿರಿಯರೂಪದ ಕೈಗಾರಿಕೆಗಳನ್ನು ಆರಂಭಿಸಲು ಸರಕಾರ ಸರ್ವವಿಧವಾದ ಸೌಕರ್ಯವನ್ನು ಒದಗಿಸಿ ಪ್ರೋತ್ಸಾಹ ಕೊಡುತ್ತಿದೆ. ಕೆಲವು ಸಂಸ್ಥೆಗಳಿಗೆ ಸರಕಾರ ಬಂಡವಾಳವನ್ನು ಕೊಟ್ಟಿದೆ, ಮತ್ತೆ ಕೆಲವು ಸಂಸ್ಥೆಗಳ ಆಡಳಿತ ವ್ಯವಸ್ಥೆಯಲ್ಲೂ ಭಾಗವಹಿಸಿದೆ.

ಇಂದು ಸಂಸ್ಥಾನದಲ್ಲಿ 550ಕ್ಕಿಂತಲೂ ಹೆಚ್ಚು ಕೈಗಾರಿಕಾ ಸಂಸ್ಥೆಗಳು ಬೆಳೆದು ಬಂದಿವೆ. ಒಂದೂಕಾಲು ಲಕ್ಷಕ್ಕಿಂತಲೂ ಹೆಚ್ಚುಮಂದಿ ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಈ ಕೈಗಾರಿಕಾ ಸಂಸ್ಥೆಗಳಲ್ಲಿ ಸರಕಾರವೇ ನಡೆಸುವ ಸಂಸ್ಥೆಗಳಿಗೆ ಐದೂವರೆ ಕೋಟಿರೂಪಾಯಿಗಿಂತಲೂ ಹೆಚ್ಚು ಬಂಡವಾಳಹಾಕಿದೆ. ಸರಕಾರದ ಸಹಾಯದಿಂದ ನಡೆಯುವ ಇತರ ಕೈಗಾರಿಕೆಗಳ ಒಟ್ಟು ಬಂಡವಾಳ ರೂ. 4 ಕೋಟಿ. ಅದರಲ್ಲಿ ಸರಕಾರವೇ 84ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿದೆ. ಷೇರುಗಳ ರೂಪದಲ್ಲಿ ಹಣ ವಿನಿಯೋಗಿಸಿರುವುದೇ ಅಲ್ಲದೆ, ಬೇರೆ ವಿಧವಾಗಿ ಕೈಗಾರಿಕೆಗಳಿಗೆ ಪ್ರೋತ್ಸಾಹವೀಯಲು

ಸರಕಾರ 30 ಲಕ್ಷ ರೂಪಾಯಿಗಿಂತಲೂ ಜಾಸ್ತಿಹಣ ವ್ಯಯಮಾಡಿದೆ. ಕೋಲಾರ ಚಿನ್ನದಗಣಿಗಳಿಗಾಗಿ ವಿನಿಯೋಗವಾಗಿರುವ ಬಂಡವಾಳ ರೂ. 213.36ಲಕ್ಷ.

ಅಖಿಲ ಭಾರತಕ್ಕೆ ಅನ್ವಯವಾಗುವ ಕೆಲವು ಪ್ರಧಾನವಾದ ಕೈಗಾರಿಕೆಗಳೂ ಸಂಸ್ಥಾನದಲ್ಲಿ ನೆಲಸಿವೆ. ಬೆಂಗಳೂರಿನಲ್ಲಿರುವ ವಿಮಾನ ಕಾರ್ಖಾನೆ, ಟೆಲಿಫೋನ್ ಕಾರ್ಖಾನೆ, ಮೆಷಿನ್ ಟೂಲ್ಸ್ ಕಾರ್ಖಾನೆ, ಇಂಡಿಯನ್ ಟೆಲಿ ಇಂಡಸ್ಟ್ರೀಸ್ ಇವು ಮುಖ್ಯವಾದವು. ಇವಲ್ಲದೆ 'ಭಾರತ್ ಎಲೆಕ್ಟ್ರಾನಿಕ್ಸ್ ಫ್ಯಾಕ್ಟರಿ' ಎಂಬ ಕಾರ್ಖಾನೆ ಸದ್ಯದಲ್ಲಿಯೇ ಸಂಸ್ಥಾನದಲ್ಲಿ ಸ್ಥಾಪಿತವಾಗಲಿದೆ. ಇದು ವೈರ್‌ಲೆಸ್ ಮತ್ತು ರೇಡಿಯೋ ಸಲಕರಣೆಗಳನ್ನು ತಯಾರಿಸುವುದು.

ಕೈಗಾರಿಕೆಗಳ ಅಭಿವೃದ್ಧಿ ವಿಷಯವಾಗಿ ಈಗಿನ ಸರಕಾರ ಒಂದು ವಿಸ್ತಾರವಾದ ಹಿರಿಯ ಕಾರ್ಯಯೋಜನೆ ಸಿದ್ಧಗೊಳಿಸಿದೆ. ಈ ಕಾರ್ಯಯೋಜನೆಯೆಲ್ಲ ಕ್ರಮ ಕ್ರಮವಾಗಿ ಕಾರ್ಯರೂಪಕ್ಕೆ ಬರುತ್ತಿದೆ. ಈ ಕಾರ್ಯಕ್ರಮದಲ್ಲಿ, ಮುಖ್ಯವಾಗಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯು ಬಡಾವಣೆ ಸೇರಿದೆ. ಪಂಚ ವಾರ್ಷಿಕ ಯೋಜನೆ ಪ್ರಕಾರ ಆರೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಕಾರ್ಖಾನೆಯನ್ನು ವಿಸ್ತಾರಗೊಳಿಸಲಾಗುವುದು. ಕೇವಲ 25,000 ಟನ್‌ಗಳ ಪ್ರಮಾಣದಲ್ಲಿ ತಯಾರಾಗುತ್ತಿರುವ ಕಬ್ಬಿಣಕ್ಕೆ ಬದಲಾಗಿ 1,25,000 ಟನ್‌ಗಳ ಒಟ್ಟು ಪ್ರಮಾಣದಲ್ಲಿ ಬಗೆಬಗೆಯ ಉಕ್ಕುಗಳು ತಯಾರಾಗುವಂತಾಗುತ್ತದೆ. ಕಬ್ಬಿಣವನ್ನು ಉಕ್ಕಾಗಿ ಪರಿವರ್ತಿಸುವ ಕಾರ್ಯ ಸುಲಭವಾಗುವುದಕ್ಕಾಗಿ ವಿದ್ಯುಚ್ಛಕ್ತಿಯಿಂದ ನಡೆಯುವ ಹೊಸಬಗೆಯ ಮತ್ತು ಅತ್ಯಂತ ಆಧುನಿಕವಾದ ಯಂತ್ರ ಸಾಮಗ್ರಿಗಳನ್ನು ಸ್ಥಾಪಿಸಲಾಗುತ್ತಿದೆ. ಇದೇ ಕಾರ್ಖಾನೆಯಲ್ಲಿ ಫೆರೋಸಿಲಿಕಾನ್ ಎಂಬ ಸಾಮಗ್ರಿಯ ತಯಾರಿಕೆ ಮಹಾಯುದ್ಧ ಕಾಲದಲ್ಲಿ ಪ್ರಾಯೋಗಿಕವಾಗಿ ಆರಂಭವಾಯಿತು. ಈಗ ಅದರ ತಯಾರಿಕೆಯನ್ನು ನಡೆಸಿಕೊಂಡು ಬಂದಿರುವುದೇ ಅಲ್ಲದೆ, ಅದನ್ನು ಹೆಚ್ಚಿಸಿ ಕೊಳ್ಳುವ ಪ್ರಯತ್ನವೂ ನಡೆದಿದೆ. ಉಕ್ಕಿನ ತಯಾರಿಕೆಗೆ ಅಗತ್ಯವಾದ ಈ ಸಾಮಗ್ರಿ ಯನ್ನು ಭಾರತದಲ್ಲಿ ಈಗ ಅಗತ್ಯವಾದಷ್ಟನ್ನೇ ಅಲ್ಲದೆ ಇನ್ನು ಮುಂದೆ ಭಾರತ ಸರಕಾರ ಹೊಸದಾಗಿ ಸ್ಥಾಪಿಸಲಿರುವ ಉಕ್ಕಿನ ಕಾರ್ಖಾನೆಗೆ ಅಗತ್ಯವಾದಷ್ಟನ್ನೂ ಕೂಡ ಒದ ಗಿಸಲು ಇಲ್ಲಿ ಸಾಧ್ಯವಾಗುವಂತೆ ವ್ಯವಸ್ಥೆ ಮಾಡಲಾಗುತ್ತಿದೆ.

ಅಸೆಟಿಕ್ ಆಸಿಡ್ ತಯಾರಿಸುವ ಕಾರ್ಖಾನೆ ಭದ್ರಾವತಿಯಲ್ಲಿ ಸ್ಥಾಪನೆ ಯಾಗಿದೆ. ಭಾರತದಲ್ಲೆಲ್ಲ ಇಂತಹ ಕಾರ್ಖಾನೆ ಇದೇ ಮೊದಲನೆಯದು.

ಭದ್ರಾವತಿಯಲ್ಲಿ ಸಿಮೆಂಟ್ ಕಾರ್ಖಾನೆ ವಿಸ್ತರಣೆ ಹೊಂದಿದೆ. ಇದರಿಂದ

ದಿನಕ್ಕೆ 60 ಟನ್ ತಯಾರಾಗುತ್ತಿದ್ದ ಸಿಮೆಂಟು ಈಗ ದಿನಕ್ಕೆ 200 ಟನ್ ತಯಾರಾಗುತ್ತಿದೆ. ಇದಕ್ಕಾಗಿ ನಾಲ್ಕೂವರೆಕೋಟಿ ರೂಪಾಯಿಗಳ ಬಂಡವಾಳವನ್ನು ಹೆಚ್ಚಿಸಲಾಗಿದೆ. ಭದ್ರಾವತಿಯಲ್ಲಿ ಕೃತಕಗೊಬ್ಬರದ ಕಾರ್ಖಾನೆಯನ್ನು ಸ್ಥಾಪಿಸುವ ಹಂಚಿಕೆಯಿದೆ. ಇದರಿಂದ 25 ಸಾವಿರ ಟನ್ ಅಮೋನಿಯಂ ಸಲ್ಫೇಟ್ ಮತ್ತು 25 ಸಾವಿರ ಟನ್ ನೈಟ್ರೋಚಾಕ್ ತಯಾರಿಸಲು ಅವಕಾಶವಾಗುವುದು.

ಭದ್ರಾವತಿ ಕಾಗದದ ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ, ಬೆಂಗಳೂರಿನಲ್ಲಿರುವ ಸರಕಾರಿ ಸಾಬೂನು ಕಾರ್ಖಾನೆ, ಸರ್ಕಾರದ ರೇಷ್ಮೆ ಕಾರ್ಖಾನೆ ಇವುಗಳ ಬದಲಾವಣೆಮಾಡಲು ಸರಕಾರ ತೀವ್ರಾಲೋಚನೆಮಾಡುತ್ತಿದೆ. ಇದಲ್ಲದೆ ಪಂಚವಾರ್ಷಿಕ ಯೋಜನೆ ಪ್ರಕಾರ ರೂ. 2,20,00,000 ವೆಚ್ಚದ ಮೇಲೆ ಇತರ ವಿವಿಧ ಕೈಗಾರಿಕೆಗಳ ಅಭಿವೃದ್ಧಿ ವ್ಯವಸ್ಥೆಯನ್ನು ಮಾಡಲು ಆಲೋಚಿಸಿದೆ.

ಬೆಂಗಳೂರಿನಲ್ಲಿ ಹಲವು ಕೈಗಾರಿಕೆ ಸಂಸ್ಥೆಗಳು ವಿಸ್ತರಣೆ ಹೊಂದುತ್ತಿವೆ. ಪಿಂಗಾಣಿ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯ ಜೋಡಣೆಗಳಿಗೆ ಬೇಕಾಗುವ "ಎಲೆಕ್ಟ್ರೋ-ಪ್ರೋರ್ಸಿಲೇನ್" ಪಿಂಗಾಣಿ ಸಾಮಾನುಗಳನ್ನು ತಯಾರಿಸಲು ಒಂದುಕೋಟಿರೂಪಾಯಿಗಳ ವೆಚ್ಚದಲ್ಲಿ ವ್ಯವಸ್ಥೆ ಮಾಡಲಾಗುವುದು. ಜಪಾನಿನಲ್ಲಿಯ ಮಾದರಿಯಲ್ಲಿ ಈ ಕಾರ್ಖಾನೆಯನ್ನು ಸ್ವಯಂ ಪರಿಪೂರ್ಣವಾದುದನ್ನಾಗಿ ಮಾಡುವ ವ್ಯವಸ್ಥೆ ನಡೆದಿದೆ.

ಲ್ಯಾಂಪ್ ವರ್ಕ್ಸ್ ಕಾರ್ಖಾನೆಯಲ್ಲಿ ಸ್ವಯಂಚಾಲಕ ಯಂತ್ರವನ್ನು ಸ್ಥಾಪಿಸಲಾಗಿದೆ. ಹಿಂದೆ ದಿನಕ್ಕೆ 2,000 ವಿದ್ಯುದ್ದೀಪಗಳನ್ನು ತಯಾರಿಸುತ್ತಿದ್ದ ಈ ಕಾರ್ಖಾನೆ ಈಗ ದಿನಕ್ಕೆ 6,000 ದೀಪಗಳನ್ನು ತಯಾರಿಸಲು ಸಮರ್ಥವಾಗಿದೆ. ರೇಡಿಯೋ ಅಂಡ್ ಎಲೆಕ್ಟ್ರಿಕಲ್ಸ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಕಷ್ಟಸ್ಥಿತಿಯಲ್ಲಿದ್ದು ಈಗ ಉತ್ತಮ ಸ್ಥಿತಿಗೆ ಬರುತ್ತಿದೆ. ಕೇವಲ ರೇಡಿಯೋ ಕೈಗಾರಿಕೆಯೇ ಸಾಲದೆಂದು ಈ ಸಂಸ್ಥೆ ಎನರ್ಜಿ ಮೀಟರ್‌ಗಳು ಮುಂತಾದ ಇತರ ಹಲವು ವಿಧವಾದ ತಯಾರಿಕೆಗಳನ್ನು ಆರಂಭಿಸಿದೆ. ಒಂದು ಪ್ಲಾಸ್ಟಿಕ್ಸ್ ಕಾರ್ಖಾನೆಯನ್ನು ಸ್ಥಾಪಿಸಿ, ಅದರ ಆಡಳಿತ ಉಸ್ತುವಾರಿಯನ್ನು ಈ ಸಂಸ್ಥೆಗೆ ವಹಿಸುವ ಆಲೋಚನೆಯೂ ಇದೆ.

ಸಂಸ್ಥಾನದಲ್ಲಿ ಹತ್ತಿಬಟ್ಟೆ ಗಿರಣಿಗಳು ಹಲವಿವೆ. ಅವುಗಳ ಬೆಳವಣಿಗೆ ಸಾಕಷ್ಟು ನಡೆದಿದೆ. ದೊಡ್ಡ ದೊಡ್ಡ ಗಿರಣಿಗಳಲ್ಲದೆ ಪವರ್‌ಲೂಮ್‌ಗಳೂ ಹೆಚ್ಚಾಗುತ್ತಾ ಬಂದಿವೆ. ಈಗ ಒಟ್ಟು 1,000 ಪವರ್‌ಲೂಮ್‌ಗಳು ಕೆಲಸಮಾಡುತ್ತಿವೆ.

ರೇಷ್ಮೆ ಕೈಗಾರಿಕೆಯಲ್ಲಿ ಮೈಸೂರು ಸಂಸ್ಥಾನ ಪ್ರಮುಖ ಸ್ಥಾನ ಹೊಂದಿದೆ.

ಸರಕಾರ ಈ ಕೈಗಾರಿಕೆಗೆ ಹೆಚ್ಚಿನ ಬೆಂಬಲವಿತ್ತು ಬೆಳೆಸಿಕೊಂಡು ಬಂದಿದೆ. ಈಚೆಗೆ ಉತ್ತಮ ದರ್ಜೆಯ ರೇಷ್ಮೆಗೂಡುಗಳ ತಯಾರಿಕೆಗಾಗಿ ವ್ಯವಸ್ಥೆ ಮಾಡಿದೆ. ಅತ್ಯಂತ ಆಧುನಿಕವಾದ ಸಿಲ್ಕ್ ರೀಲಿಂಗ್ ಯಂತ್ರೋಪಕರಣಗಳನ್ನು ಜಪಾನಿನಿಂದ ತಂದು ಟಿ. ನರಸೀಪುರದಲ್ಲಿ ಸ್ಥಾಪಿಸಲಾಗಿದೆ.

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ಏರ್‌ಕ್ರಾಫ್ಟ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಸಂಸ್ಥೆಗಳು ಅಖಿಲಭಾರತ ರೂಪದ ಭಾರಿ ಕಾರ್ಖಾನೆಗಳು. ಏರ್‌ಕ್ರಾಫ್ಟ್ ಸಂಸ್ಥೆ ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಆಡಳಿತದಲ್ಲಿದೆ. ಇಲ್ಲಿ ವಿಮಾನ ರಿಪೇರಿ ಕೆಲಸವೂ, ತಯಾರಿಕೆ ಕೆಲಸವೂ ಆಗುತ್ತಿರುವುದಲ್ಲದೆ ರೈಲ್ವೆಗಾಡಿಗಳ ಮತ್ತು ಬಸ್ಸುಗಳ ಮೇಲುಕಟ್ಟಡಗಳನ್ನು ತಯಾರಿಸುವ ಕಾರ್ಯ ನಡೆಯುತ್ತಿದೆ.

1948ರಲ್ಲಿ ಸ್ಥಾಪಿತವಾದ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಕಾರ್ಖಾನೆ ಆಟೋಮ್ಯಾಟಿಕ್ ಟೆಲಿಫೋನುಗಳನ್ನೂ ಇತರ ಸಲಕರಣೆಗಳನ್ನೂ ತಯಾರಿಸುವ ಕಾರ್ಯದಲ್ಲಿ ಭರದಿಂದ ಮುಂದುವರೆಯುತ್ತಿದೆ. ಆರಂಭದಲ್ಲಿ ಕೇವಲ ಸರ್ಕಾರಿ ಸಂಸ್ಥೆಯಾಗಿಯೇ ಸ್ಥಾಪಿತವಾದ ಸಂಸ್ಥೆ 1950ರಲ್ಲಿ ಖಾಸಗಿ ಸಂಸ್ಥೆಯಾಗಿ ಪರಿವರ್ತನೆ ಹೊಂದಿತು. ಇದರ ಬಂಡವಾಳದಲ್ಲಿ ಶೇ. 95ಭಾಗವನ್ನು ಭಾರತ ಮತ್ತು ಮೈಸೂರು ಸರ್ಕಾರಗಳೇ ಹೊಂದಿವೆ. ಉಳಿದ ಷೇರಿನ ಭಾಗವನ್ನು ಇಂಗ್ಲೆಂಡಿನ ಆಟೊಮ್ಯಾಟಿಕ್ ಟೆಲಿಫೋನ್ ಅಂಡ್ ಎಲೆಕ್ಟ್ರಿಕಲ್ ಕಂಪನಿ ಹೊಂದಿದೆ. ಈ ಕಾರ್ಖಾನೆಯ ಒಟ್ಟು ಬಂಡವಾಳ ಎರಡೂವರೆ ಕೋಟಿ ರೂಪಾಯಿ. 1647ಜನ ಕೆಲಸಗಾರರಿದ್ದಾರೆ.

ಭಾರತದಲ್ಲೆಲ್ಲ ಅತ್ಯಂತ ಪ್ರಧಾನವಾದ ಚಿನ್ನದಗಣಿಗಳು ಕೋಲಾರ ಜಿಲ್ಲೆಯಲ್ಲಿವೆ. ಭಾರತದಲ್ಲಿ ಉತ್ಪತ್ತಿಯಾಗುವ ಚಿನ್ನದಲ್ಲಿ ಶೇ. 90ಭಾಗ ಮೈಸೂರಿನಲ್ಲೇ ದೊರೆಯುವುದು. ಇಲ್ಲಿ 20ಸಾವಿರಕ್ಕೂ ಜಾಸ್ತಿ ಜನ ಕೆಲಸಮಾಡುತ್ತಿದ್ದಾರೆ. ಕೋಲಾರದ ಚಿನ್ನದಗಣಿಗಳಲ್ಲದೆ ಶಿವಮೊಗ್ಗಾ, ಚಿತ್ರದುರ್ಗ, ತುಮಕೂರು, ಮತ್ತು ಬಳ್ಳಾರಿ ಜಿಲ್ಲೆಗಳಲ್ಲೂ ಚಿನ್ನ ದೊರೆಯುವುದು. ಆದರೆ ಈ ಪ್ರದೇಶಗಳಲ್ಲಿ ಚಿನ್ನ ತೆಗೆಯುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ತುಮಕೂರಿನ ಬೆಳ್ಳಾರದಲ್ಲಿ ಚಿನ್ನದಗಣಿ ವ್ಯವಸ್ಥೆ ಈಗ ತಾನೇ ಆರಂಭವಾಗಿದೆ.

ಸಂಸ್ಥಾನದಲ್ಲಿ ಕೈಗಾರಿಕಾಭಿವೃದ್ಧಿಯ ಕಾರ್ಯಯೋಜನೆಯಲ್ಲಿ ಗೃಹ ಕೈಗಾರಿಕೆಗೂ ಮುಖ್ಯ ಸ್ಥಾನವಿದೆ. ಗೃಹ ಕೈಗಾರಿಕೆಗಳಲ್ಲಿ ಶಿಕ್ಷಣವೀಯುವ ಮತ್ತು ಆಧುನಿಕ

ಸಲಕರಣೆಗಳ ಉಪಯೋಗವನ್ನು ಪ್ರದರ್ಶಿಸುವ ಕೇಂದ್ರಗಳನ್ನು ಹಲವು ಕಡೆಗಳಲ್ಲಿ ಸರಕಾರ ನಡೆಸುತ್ತಿದೆ.

ಖಾದಿಯನ್ನು ಸರಕಾರಿ ಕೈಗಾರಿಕೆಯನ್ನಾಗಿ ಆರಂಭಿಸಿದುದು ಮೈಸೂರಿನಲ್ಲಿಯೇ ಮೊದಲು. ಇಪ್ಪತ್ತೈದು ವರ್ಷಗಳಿಂದ ಈ ವೃತ್ತಿಗೆ ಸರಕಾರದ ಬೆಂಬಲ ದೊರೆಯುತ್ತಾ ಬಂದಿದೆ. ಖಾದಿ ಕೆಲಸಗಾರರಿಗೆ ಶಿಕ್ಷಣವೀಯುವ ಖಾದಿ ವಿದ್ಯಾಲಯವನ್ನೂ, ಚರಕಗಳು ಮತ್ತು ಇತರ ಸಲಕರಣೆಗಳನ್ನು ತಯಾರಿಸಲು ಒಂದು ವರ್ಕ್‌ಷಾಪನ್ನೂ ಸರಕಾರ ಸ್ಥಾಪಿಸಿದೆ. ಈ ಕೈಗಾರಿಕೆಯ ಅಭಿವೃದ್ಧಿಗಾಗಿ ಸಲಹೆಗಳನ್ನು ಕೊಡುವ ಸಲುವಾಗಿ 1949ರಲ್ಲಿ ಸರಕಾರ ಒಂದು ಸಮಿತಿಯನ್ನು ನೇಮಿಸಿತ್ತು.

ಕೈಮಗ್ಗದ ವೃತ್ತಿಯಲ್ಲಿ ತೊಡಗಿರುವವರಿಗೆ ಪ್ರೋತ್ಸಾಹವೀಯುವ ಸಲುವಾಗಿ 42 ಶಿಕ್ಷಣ ಮತ್ತು ಪ್ರದರ್ಶನ ಕೇಂದ್ರಗಳನ್ನು ಈಚೆಗೆ ಸ್ಥಾಪಿಸಿದೆ. ಸಂಸ್ಥಾನದಲ್ಲಿ 25 ಲಕ್ಷ ಸಂಸಾರಗಳು ಈ ವೃತ್ತಿಯನ್ನವಲಂಬಿಸಿವೆ.

ಅಮೇರಿಕಾಗೆ ಭಾರತದಿಂದ ರಫ್ತಾಗುವ ರತ್ನಗಂಬಳಿಗಳಲ್ಲಿ ಬಹು ಭಾಗ ಬೆಂಗಳೂರಿನಲ್ಲಿಯೇ ತಯಾರಾಗುವುದು. ಈಚೆಗೆ ಈ ಕೈಗಾರಿಕೆಯನ್ನು ಸುವ್ಯವಸ್ಥೆಗೊಳಿಸಿ ಉತ್ತಮವಾದ ನೂಲು ತಯಾರಿಸಲು ಏರ್ಪಾಟು ಮಾಡಬೇಕೆಂದು ಸರಕಾರ ಯುಕ್ತಕ್ರಮ ಕೈಗೊಂಡಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಆದಷ್ಟು ಬೇಗ ಅಭಿವೃದ್ಧಿಗೊಳಿಸಲು ಸರ್ ಎಂ. ವಿಶ್ವೇಶ್ವರಯ್ಯನವರ ಹಂಚಿಕೆಯನ್ನು ಹಲವು ಕಡೆ ಆಚರಣೆಗೆ ತರಲಾಗಿದೆ.

ಕೈಗಾರಿಕಾ ವಿದ್ಯಾಭ್ಯಾಸವನ್ನು ಬೆಳೆಸಲು ಮತ್ತು ವೃತ್ತಿ ಶಿಕ್ಷಣವನ್ನೀಯಲು ಸಂಸ್ಥಾನದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಶಾಲೆಯನ್ನೋ ಅಥವಾ ಶಿಕ್ಷಣ ಕೇಂದ್ರವನ್ನೋ ಸ್ಥಾಪಿಸುವ ಯೋಜನೆ ಕಾರ್ಯಗತವಾಗುತ್ತಿದೆ. ಇವಲ್ಲದೆ ಬೆಂಗಳೂರಿನಲ್ಲಿ ಕೃಷ್ಣರಾಜೇಂದ್ರ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್, ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್, ಮೈಸೂರಿನಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ದಾವಣಗೆರೆಯಲ್ಲಿ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಮತ್ತು ಭದ್ರಾವತಿಯಲ್ಲಿ ಟೆಕ್ನಿಕಲ್ ಶಾಲೆ ಹೀಗೆ ಕೆಲವು ಪ್ರೌಢಶಿಕ್ಷಣಶಾಲೆಗಳೂ ಇವೆ.

ಸಂಸ್ಥಾನದಲ್ಲಿ ಕೈಗಾರಿಕಾ ಬೆಳವಣಿಗೆ ಸುವ್ಯವಸ್ಥಿತವಾದ ಹಂಚಿಕೆಯಿಂದಲೇ ನಡೆದು ಬರುತ್ತಿದೆ. ಕೇಂದ್ರ ಸರ್ಕಾರದ ಸಲಹೆಯ ಮೇಲೆ 1950ರಲ್ಲಿ ಮೈಸೂರಿನಲ್ಲಿ

ವಿವಿಧ ಇಲಾಖೆಗಳ ಪರಸ್ಪರ ಸಹವರ್ತನೆಯ ಸಮಿತಿಯೊಂದನ್ನು ರಚಿಸಲಾಯಿತು. ಸಂಸ್ಥಾನದ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ಒಂದು ಭಾಗವಾಗಿ ಕೈಗಾರಿಕೆಯ ಅಭಿವೃದ್ಧಿಯನ್ನು ಕುರಿತು ಸಲಹೆಗಳನ್ನೀಯುವುದು ಈ ಸಮಿತಿಯ ಕೆಲಸ.

ಸರ್ಕಾರ ನೇರವಾಗಿ ನಡೆಸುತ್ತಿರುವ ಕೈಗಾರಿಕಾ ಸಂಸ್ಥೆಗಳಿವು: ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್, ಸಾಬೂನು ಕಾರ್ಖಾನೆ, ಪಿಂಗಾಣಿ ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ಎಲೆಕ್ಟ್ರಿಕ್ ಕಾರ್ಖಾನೆ, ಇಂಪ್ಲಿಮೆಂಟ್ಸ್ ಕಾರ್ಖಾನೆ, ಕ್ರೋಮೇಟ್ ಕಾರ್ಖಾನೆ, ಸಿಲ್ಕ್ ಫಿಲೇಚರ್ಸ್.

ಸರಕಾರ ಷೇರುಗಳನ್ನು ಪಡೆದಿರುವ ಇತರ ಖಾಸಗಿ ಕೈಗಾರಿಕಾ ಸಂಸ್ಥೆಗಳಿವು: ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್, ಬೆಂಗಳೂರು ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಲಿ. (ಬಿನ್ನಿ), ಮೈಸೂರು ಸ್ಪಿನ್ನಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂ. ಲಿ., ಮೈಸೂರು ವೆಜಿಟಬಲ್ ಆಯಿಲ್ ಪ್ರಾಡಕ್ಟ್ಸ ಲಿ., ಮೈಸೂರು ಸಕ್ಕರೆ ಕಂ., ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂ. ಲಿ., ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಲಿ., ಮೈಸೂರು ಸಿಲ್ಕ್ ಫಿಲೇಚರ್ಸ್ ಲಿ., ಮೈಸೂರು ಪೇಪರ್ ಮಿಲ್ಸ್ ಲಿ., ಮೈಸೂರು ಕ್ರೋಂ ಟ್ಯಾನಿಂಗ್ ಕಂ. ಲಿ., ಮೈಸೂರು ಸ್ಪನ್ ಸಿಲ್ಕ್ ಮಿಲ್ಸ್ ಲಿ., ಮೈಸೂರು ಟುಬ್ಯಾಕೊ ಕಂ, ಲಿ., ಮೈಸೂರು ಮ್ಯಾಚ್ ಕಂ. ಲಿ., ಮೈಸೂರು ಕಿರ್ಲೋಸ್ಕರ್, ಲಿ., ಮೈಸೂರು ಸ್ಟೋನ್‌ವೇರ್ ಪೈಪ್ಸ್ ಅಂಡ್ ಪಾಟರೀಸ್ ಲಿ., ಮೈಸೂರು ಲ್ಯಾಂಪ್ ವರ್ಕ್ಸ್, ಲಿ., ಹಿಂದೂಸ್ಥಾನ್ ಏರ್‌ಕ್ರಾಫ್ಟ್ಸ್, ಲಿ., ರೇಡಿಯೋ ಅಂಡ್ ಎಲೆಕ್ಟ್ರಿಕಲ್ಸ್ ಮ್ಯಾನುಫ್ಯಾಕ್ಚರಿಂಗ್ ಕಂ. ಲಿ., ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿ., ಮೈಸೂರು ವಾಟರ್‌ಪ್ರೂಫ್ಸ್, ಲಿ., ಮೈಸೂರು ಲ್ಯಾಕ್ ಅಂಡ್ ಪೆಯಿಂಟ್ ವರ್ಕ್ಸ್, ಲಿ., ಮತ್ತು ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್, ಲಿ.

ವಿದ್ಯಾಭ್ಯಾಸ

ಮೈಸೂರಿನಲ್ಲಿ ವಿದ್ಯಾಭ್ಯಾಸದ ಸರ್ವತೋಮುಖವಾದ ಅಭಿವೃದ್ಧಿ ತೀವ್ರತೆಯಿಂದ ಮುಂದುವರಿಯುತ್ತಿದೆ. ಆರಂಭದಲ್ಲಿ ವಿದ್ಯಾಭಿವೃದ್ಧಿಗಾಗಿ ಕೇವಲ ಒಂದು ಲಕ್ಷ ರೂ.ಗೂ ಮೀರದಷ್ಟು ಖರ್ಚು ಮಾಡುತ್ತಿದ್ದ ಮೈಸೂರು ಇಂದು ಅದಕ್ಕೆ ಮುನ್ನೂರರಷ್ಟು ಹಣವನ್ನು ವ್ಯಯ ಮಾಡುತ್ತಿದೆ. 1953-54ರ ಬಡ್ಜೆಟ್ಟಿನಲ್ಲಿ ವಿದ್ಯಾಭ್ಯಾಸಕ್ಕಾಗಿ 357,46,000ರೂ. ಖರ್ಚನ್ನು ನಿಗದಿ ಮಾಡಿದೆ.

ಸಂಸ್ಥಾನದಲ್ಲಿ ಶಾಲೆಗಳ ಸಂಖ್ಯೆ ಬೆಳೆಯುತ್ತಲೇ ಬಂದಿದೆ. ಕಳೆದ ಆರು ವರ್ಷಗಳಲ್ಲಿಂತೂ ಈ ಸಂಖ್ಯೆ ಒಂದೂವರೆಯಷ್ಟಾಗಿದೆ. 1946-47 ರಲ್ಲಿ ವಿದ್ಯಾಸಂಸ್ಥೆಗಳ ಸಂಖ್ಯೆ 10,449 ಇತ್ತು. ಈಗ 15,378 ಇದೆ. ಈ ಸಂಸ್ಥೆಗಳಲ್ಲಿ 9,97,211 ಮಂದಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕಾಲೇಜುಗಳ ಸಂಖ್ಯೆ 36, ಪ್ರೌಢಶಾಲೆಗಳು 206, ಮಾಧ್ಯಮಿಕ ಶಾಲೆಗಳು 710, ಪ್ರಾಥಮಿಕ ಶಾಲೆಗಳು 10,114 ಇವೆ. ಇವಲ್ಲದೆ ಆರು ವೃತ್ತಿ ಶಿಕ್ಷಣ ಶಾಲೆಗಳೂ ಇವೆ. ಇತರ ಸಂಸ್ಥೆಗಳ ಒಟ್ಟು ಸಂಖ್ಯೆ 4,306.

ವಿದ್ಯಾಭ್ಯಾಸ ಸರ್ಕಾರದ ನೇರವಾದ ಜವಾಬ್ದಾರಿಯಾದರೂ ಕೂಡ, ಪ್ರೌಢಶಾಲೆಗಳನ್ನು ಆರಂಭಿಸಿ ನಡೆಸಿಕೊಂಡು ಬರಲು 1949ರಲ್ಲಿ ಜಿಲ್ಲಾ ಬೋರ್ಡು ಗಳಿಗೆ ಅನುಮತಿ ಕೊಡಲಾಯಿತು. ಆಗಿನಿಂದ 15 ಅಂತಹ ಪ್ರೌಢಶಾಲೆಗಳು ಸ್ಥಾಪಿತವಾಗಿ, ನಡೆದು ಬರುತ್ತಿವೆ.

ಪ್ರೌಢಶಾಲೆಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಬೋಧಿಸುವಂತೆ ಆಜ್ಞೆ ಮಾಡಲಾಗಿದೆ. ಬಾಲಕಿಯರ ಕೆಲವು ಪ್ರೌಢಶಾಲೆಗಳಲ್ಲಿ ಗೃಹ ವಿಜ್ಞಾನವನ್ನು ಬೋಧಿಸಲು ಅನುಮತಿ ಕೊಡಲಾಗಿದೆ.

ವರ್ಷವರ್ಷವೂ ಹೆಚ್ಚು ಪ್ರಾಥಮಿಕ ಶಾಲೆಗಳನ್ನು ಹೊಸದಾಗಿ ಸ್ಥಾಪಿಸಲಾಗುತ್ತಿದೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಸರಕಾರ ವರ್ಷವರ್ಷವೂ ಸುಮಾರು 80 ಲಕ್ಷ ರೂ. ಖರ್ಚು ಮಾಡುತ್ತಿದೆ. ಇದಲ್ಲದೆ ಪ್ರಾಥಮಿಕ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ 53 ಲಕ್ಷ ರೂ. ಹೆಚ್ಚಾಗಿ ವಿನಿಯೋಗಿಸಬೇಕೆಂದು 1951-52ರಲ್ಲಿ ತೀರ್ಮಾನಿಸಿದೆ.

ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳ ಸಂಖ್ಯೆ ಬಹಳವಾಗಿ ಹೆಚ್ಚುತ್ತಿರುವುದರಿಂದ

ಹೊಸ ಪಕ್ಕಾ ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸಲಾಗುತ್ತಿರುವುದಲ್ಲದೆ, ಪ್ರಾಥಮಿಕ ಶಾಲೆಗಳನ್ನೇ ಹೊಸ ಮಾದರಿಯ ಮಾಧ್ಯಮಿಕ ಶಾಲೆಗಳನ್ನಾಗಿ ಪರಿವರ್ತಿಸ ಲಾಗುತ್ತಿದೆ.

ವಯಸ್ಕರ ವಿದ್ಯಾಭ್ಯಾಸಕ್ಕಾಗಿ ವರ್ಷವರ್ಷವೂ 5 ಲಕ್ಷ ರೂ.ಗಳನ್ನು ಸರ್ಕಾರ ವಿನಿಯೋಗಿಸುತ್ತಿದೆ. ನೈತಿಕ ಶಿಕ್ಷಣಕ್ಕಾಗಿ 5 ಲಕ್ಷ ರೂಪಾಯಿಗಳನ್ನು ವಿನಿಯೋಗಿಸ ಬೇಕೆಂದು 1953-54ರ ಬಡ್ಜೆಟ್ಟಿನಲ್ಲಿ ಆಲೋಚಿಸಲಾಗಿತ್ತು.

ಸಂಸ್ಥಾನದಲ್ಲಿ ಔದ್ಯೋಗಿಕ ವಿದ್ಯಾಭ್ಯಾಸವೂ ಚೆನ್ನಾಗಿ ಅಭಿವೃದ್ಧಿಯಾಗು ತ್ತಿದೆ. 1862ರಷ್ಟು ಮುಂಚೆಯೇ ಎಂಜನಿಯರಿಂಗ್ ಸ್ಕೂಲು ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಅನಂತರ 1889ರಲ್ಲಿ ಹಾಸನದಲ್ಲಿ ಒಂದು ಕೈಗಾರಿಕಾ ಶಾಲೆ ಆರಂಭವಾಯಿತು. 1903ರಲ್ಲಿ ಔದ್ಯೋಗಿಕ ವಿದ್ಯಾಭ್ಯಾಸದ ಪ್ರಗತಿಗಾಗಿ ಒಂದು ಹಂಚಿಕೆ ತಯಾರಾಯಿತು. 1915ರ ಹೊತ್ತಿಗೆ 29 ಕೈಗಾರಿಕಾ ಶಾಲೆಗಳು ಇದ್ದವು. ಕ್ರಮಕ್ರಮವಾಗಿ ಇವು ಬೆಳೆದು ಬಂದು ಈಗ ನಾಲ್ಕು ಎಂಜನಿಯರಿಂಗ್ ಕಾಲೇಜು ಗಳೂ, ಐದು ಔದ್ಯೋಗಿಕ ಶಾಲೆಗಳೂ, ಹಲವಾರು ಕೈಗಾರಿಕಾ ಶಾಲೆಗಳೂ ಸಂಸ್ಥಾ ನದ ಎಲ್ಲ ಕಡೆಗಳಲ್ಲಿಯೂ ಹಬ್ಬಿವೆ.

ವ್ಯವಸಾಯ ವಿದ್ಯಾಭ್ಯಾಸಕ್ಕೆ ಹೆಬ್ಬಾಳಿನಲ್ಲಿ 1913ರಲ್ಲಿ ಸ್ಥಾಪಿತವಾದ ವ್ಯವ ಸಾಯ ಶಾಲೆ 1946 ರಲ್ಲಿ ವ್ಯವಸಾಯ ಕಾಲೇಜಾಗಿ ಪರಿವರ್ತಿತವಾಯಿತು. ಇದಲ್ಲದೆ ಐದು ಲೋಯರ್ ವ್ಯವಸಾಯ ಶಾಲೆಗಳು ಸಂಸ್ಥಾನದ ನಾನಾ ಕಡೆಗಳಲ್ಲಿವೆ.

ವಾಣಿಜ್ಯ ವಿದ್ಯಾಭ್ಯಾಸವೀಯುವ 37 ಶಾಲೆಗಳು ಸಂಸ್ಥಾನದಲ್ಲಿವೆ. ಅಲ್ಲದೆ ಬೆಂಗಳೂರಿನಲ್ಲಿ ಬಿ. ಕಾಂ. ಪರೀಕ್ಷೆಗೆ ತರಬೇತು ಮಾಡುವ ಕಾಮರ್ಸ್ ಕಾಲೇಜೊಂದಿದೆ.

ವಿದ್ಯಾಭ್ಯಾಸಕ್ರಮದಲ್ಲಿ ಆಗಬೇಕಾದ ಸುಧಾರಣೆಗಳನ್ನು ಕುರಿತು ಪರಿಶೀಲಿಸಿ ಸರಕಾರಕ್ಕೆ ವರದಿಮಾಡಲು ತಜ್ಞರನ್ನೊಳಗೊಂಡ ಸಮಿತಿಯೊಂದನ್ನು ಮೈಸೂರು ಸರಕಾರ ನೇಮಿಸಿತ್ತು. ಆ ಸಮಿತಿಯ ವರದಿ ಸರಕಾರಕ್ಕೆ ಬಂದು ಅದರ ಮೇಲೆ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿದೆ. ಅದರ ಪ್ರಕಾರ ಈಗ ಮಿಡಲ್ ಸ್ಕೂಲ್ ಪರೀಕ್ಷೆಯನ್ನು 1954ರಿಂದ ರದ್ದು ಗೊಳಿಸಿದೆ. ವಿದ್ಯಾಭ್ಯಾಸದಲ್ಲಿ ಬೌದ್ಧಿಕ ಬೆಳವಣಿಗೆ ಹೇಗೆ ಅಗತ್ಯವೋ ಶಾರೀರಕ ಮತ್ತು ಕೈಕುಶಲತೆಯ ಬೆಳವಣಿಗೆಯೂ ಅಗತ್ಯವೆಂಬ ಅಂಶವನ್ನು ಆ ಸಮಿತಿ ಶಿಫಾರಸು ಮಾಡಿದೆ.

ಪ್ರಾಥಮಿಕ ವಿದ್ಯಾಭ್ಯಾಸ ಆರು ವರ್ಷಗಳ ಕಾಲ ನಡೆದು, ಅನಂತರ ನಾಲ್ಕು ವರ್ಷ ಜೂನಿಯರ್ ಸೆಕೆಂಡರಿ ವಿದ್ಯಾಭ್ಯಾಸವೂ (ಹೈಸ್ಕೂಲ್), ಎರಡು ವರ್ಷ ಸೀನಿಯರ್ ವಿದ್ಯಾಭ್ಯಾಸವೂ (ಇಂಟರ್‌ಮಿಡಿಯೆಟ್) ನಡೆಯಬೇಕೆಂದು ಸಮಿತಿಯ ಶಿಫಾರಸು. ಈ ಶಿಫಾರಿಸಿನ ಪ್ರಕಾರ ಇಂಟರ್‌ಮಿಡಿಯೆಟ್ ಪರೀಕ್ಷೆಯ ಎರಡು ವರ್ಷದ ವಿದ್ಯಾಭ್ಯಾಸವನ್ನು ವಿಶ್ವವಿದ್ಯಾನಿಲಯದ ಆಳ್ವಿಕೆಯಿಂದ ಬಿಡಿಸಿ, ವಿದ್ಯಾ ಇಲಾಖೆಗೇ ವಹಿಸಬೇಕಾಗುವುದು. ಅಲ್ಲದೆ ಹೈಸ್ಕೂಲು ಮತ್ತು ಇಂಟರ್‌ಮಿಡಿಯೆಟ್ ವಿದ್ಯಾಭ್ಯಾಸದ ಆಡಳಿತಕ್ಕಾಗಿ ಒಂದು ಬೋರ್ಡನ್ನು ನೇಮಿಸಬೇಕೆಂದೂ ಸಲಹೆ ಮಾಡಿದೆ.

ಈ ಸಮಿತಿಯ ಶಿಫಾರಿಸಿನ ಮುಖ್ಯ ಅಂಶಗಳನ್ನೆಲ್ಲ ಸರಕಾರ ಅಂಗೀರಿಸಿದೆ. ಕ್ರಮಕ್ರಮವಾಗಿ ಅವನ್ನೆಲ್ಲ ಜಾರಿಗೆ ತರಲು ತೀರ್ಮಾನಿಸಿದೆ. ಈ ಸಂಬಂಧದಲ್ಲಿ ಸರ್ಕಾರ ಒಂದು ವಿಶೇಷ ಸಮಿತಿಯನ್ನೂ ರಚಿಸಿದೆ. ವಿದ್ಯಾ ಇಲಾಖೆಯ ಡೈರೆಕ್ಟರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರು ಇಲಾಖೆಯ ಪುನರ್ರಚನೆಗಾಗಿ ನಾನಾ ಸಲಹೆಗಳನ್ನು ಕೂಡ ಮಾಡಿದ್ದಾರೆ. ಇವೂ ಸರ್ಕಾರದ ಗಮನದಲ್ಲಿವೆ.

ಸಂಸ್ಥಾನದ ಉಪಾಧ್ಯಾಯರು 1954ನೇ ಏಪ್ರಿಲ್‌ನಲ್ಲಿ ಬೆಂಗಳೂರಿನಲ್ಲಿ ತಮ್ಮ ಹಿತಸಾಧನೆಗಾಗಿ ಸಮ್ಮೇಳನ ನಡೆಸಿದರು. ಇದನ್ನು ಶ್ರೀ ಹುಮಾಯೂನ್ ಕಬೀರ್‌ರು ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಜೆ. ಬಿ. ಮಲ್ಲಾರಾಧ್ಯರು ಉಪಾಧ್ಯಾಯರ ಗುರುತರ ಕರ್ತವ್ಯವನ್ನು ಒತ್ತಿ ಹೇಳಿದರು. ಸಮ್ಮೇಳನದ ಅಂಗವಾಗಿ ಏರ್ಪಾಡಾಗಿದ್ದ ವಸ್ತುಪ್ರದರ್ಶನದ ಆರಂಭೋತ್ಸವವನ್ನು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆರವೇರಿಸಿದರು.

ವಿಶ್ವವಿದ್ಯಾಲಯ ಮೈಸೂರಿನಲ್ಲಿ 1916ರಲ್ಲಿ ಸ್ಥಾಪಿತವಾದಾಗ, ಮತ್ತಾವ ದೇಶೀಯ ಸಂಸ್ಥಾನದಲ್ಲೂ ವಿಶ್ವವಿದ್ಯಾನಿಲಯಗಳಿರಲಿಲ್ಲ. ಈ ವಿಶ್ವವಿದ್ಯಾನಿಲಯ ಕ್ರಮೇಣ ಬೆಳೆದುಬಂದು ಈಗ ಸರ್ವತೋಮುಖವಾದ ಬೆಳವಣಿಗೆ ಹೊಂದಿದೆ. ಆರಂಭದಲ್ಲಿ ಎರಡು ಕಾಲೇಜುಗಳು ಮಾತ್ರ ಇದ್ದು, ಈಗ ಕಾಲೇಜುಗಳ ಸಂಖ್ಯೆ 36ಕ್ಕೆ ಏರಿದೆ. ಕಾಲೇಜುಗಳಲ್ಲಿ ಒಟ್ಟು 16,000 ಮಂದಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

ಕಾಲೇಜುಗಳಲ್ಲಿ ಸೈನಿಕ ಶಿಕ್ಷಣವನ್ನು ಕೊಡುವುದಕ್ಕಾಗಿ 1949ರ ನವೆಂಬರಿನಲ್ಲಿ ನ್ಯಾಷನಲ್ ಕೇಡಟ್ ಕೋರಿನ ಹಂಚಿಕೆಯನ್ನು ಜಾರಿಗೆ ತಂದು, 315ಜನ ಕೇಡಟ್‌ಗಳನ್ನೊಳಗೊಂಡ ಇನ್‌ಫೆಂಟ್ರಿ ಪಡೆಯನ್ನೇರ್ಪಡಿಸಿದೆ.

ಸರ್ಕಾರದ ಆಯವ್ಯಯ

ಮೈಸೂರು ಸಂಸ್ಥಾನದ 1954–55ನೇ ಸಾಲಿನ ಆಯವ್ಯಯದ ಅಂದಾಜನ್ನು ಶಾಸನ ಸಭೆ 1954ನೇ ಮಾರ್ಚ್ ಏಪ್ರಿಲ್ ಅಧಿವೇಶನದಲ್ಲಿ ಒಪ್ಪಿತು. ಅಂದಾಜನ್ನು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮಾರ್ಚಿ 6ರಲ್ಲಿ ಮಂಡಿಸಿದರು. ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯ ಅಭಿವೃದ್ಧಿಯ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಬಾಬುಗಳಲ್ಲಿ ವೆಚ್ಚ ವರ್ಷವರ್ಷಕ್ಕೆ ಗಣನೀಯವಾದಷ್ಟು ಮಟ್ಟಿಗೆ ಹೆಚ್ಚುತ್ತಾ ಬಂದಿದೆ ಎಂಬುದನ್ನು ಅವರು ಸ್ಪಷ್ಟ ಪಡಿಸಿದರು.

ವಿದ್ಯಾಭ್ಯಾಸಕ್ಕೆ 1946–47ರಲ್ಲಿ ರೂ. 131 ಲಕ್ಷ ಖರ್ಚಾಗುತ್ತಿದ್ದುದು 1954–55ರಲ್ಲಿ ರೂ. 415 ಲಕ್ಷ ಖರ್ಚಿನ ಅಂದಾಜಾಗಿದೆ. ವೈದ್ಯ ಸಹಾಯ ಬಾಬಿನಲ್ಲಿ ರೂ. 33 ಲಕ್ಷ ಖರ್ಚಾಗುತ್ತಿದ್ದುದು ಈಗ ಆ ಖರ್ಚು ರೂ. 110 ಲಕ್ಷಕ್ಕೆ ಏರಿದೆ. ಜನಾರೋಗ್ಯ ರಕ್ಷಣೆಯ ಖರ್ಚು 7 ಲಕ್ಷ ರೂ. ನಿಂದ 40 ಲಕ್ಷ ರೂ. ಗೆ ಏರಿದೆ. ವ್ಯವಸಾಯದ ಬಾಬಿನಲ್ಲಿ 10 ಲಕ್ಷ ರೂ. ನಿಂದ 48 ಲಕ್ಷ ರೂ. ಗಳಿಗೆ, ಮತ್ತು ಸಾರ್ವಜನಿಕ ಕಟ್ಟಡಗಳು, ರಸ್ತೆಗಳು ಮುಂತಾದ ಕಾಮಗಾರಿಗಳಿಗೆ ಖರ್ಚು 102 ಲಕ್ಷ ರೂ.ಗಳಿಂದ 371 ಲಕ್ಷ ರೂ.ಗಳಿಗೆ ಹೆಚ್ಚಿದೆ.

ಶಾಶ್ವತ ಕಾರ್ಯಗಳಿಗಾಗಿಯೂ (ಬಂಡವಾಳದ ವೆಚ್ಚಕ್ಕಾಗಿ) ಧಾರಾಳವಾಗಿ ಹಣವನ್ನು ಒದಗಿಸಲಾಗುತ್ತಿದೆ. 1946–47ರಲ್ಲಿ 160. 44 ಲಕ್ಷ ರೂ.ಗಳನ್ನು ಈ ಬಾಬಿಗಾಗಿ ವಿನಿಯೋಗಿಸಲಾಗಿತ್ತು. 1954–55ರಲ್ಲಿ 773 ಲಕ್ಷ ರೂ.ಗಳನ್ನು ಇದಕ್ಕಾಗಿ ನಿಗದಿ ಮಾಡಲಾಗಿದೆ. ಇದರಲ್ಲಿ ವಿದ್ಯುಚ್ಛಕ್ತಿಯ ಯೋಜನೆಗಳಿಗೆ 220 ಲಕ್ಷ ರೂ. ನಿಗದಿಯಾಗಿದೆ. ನೀರಾವರಿ ಕಾಮಗಾರಿಗಳಲ್ಲಿ ಭದ್ರಾ ಅಣೆಕಟ್ಟಿಗೆ 45 ಲಕ್ಷ ರೂ. ಮತ್ತು ತುಂಗಭದ್ರಾ ಅಣೆಕಟ್ಟಿಗೆ 49. 5 ಲಕ್ಷ ರೂ. ಮೀಸಲಾಗಿಸಿದೆ. ಕೈಗಾರಿಕೆ ಸಂಸ್ಥೆಗಳ ಅಭಿವೃದ್ಧಿಗಾಗಿ 44 ಲಕ್ಷ ರೂ. ಬಂಡವಾಳದ ಗ್ರಾಂಟನ್ನು ಒದಗಿಸಲಾಗಿದೆ.

ಕೇಂದ್ರ ಸರಕಾರದ ಪ್ಲಾನಿಂಗ್ ಕಮಿಷನಿನ ಸೂಚನೆಯಂತೆ ಮೈಸೂರು ಸರಕಾರ ಪಂಚವಾರ್ಷಿಕ ಯೋಜನೆಯನ್ನು 36·60 ಕೋಟಿ ರೂ.ಗಳ ಅಂದಾಜಿನ ಮೇಲೆ ಸಿದ್ಧಗೊಳಿಸಿತು. ಆದರೆ ಆಮೇಲೆ ಪುನಃ ಪರಿಶೀಲನೆ ನಡೆಸಿ ಭಾರತ ಸರಕಾರದ ಸಲಹೆಯ ಮೇರೆ ಮಾರ್ಪಾಟು ಮಾಡಿ 48·57 ಕೋಟಿ ರೂ.ಗಳ ಮೊತ್ತವನ್ನು ಅಂದಾಜು ಮಾಡಲಾಯಿತು ಇದು 1955–56ನೇ ಸಾಲಿನ ಕೊನೆ

ಯೊಳಗೆ ಮುಗಿಯಬೇಕಾದ ಕೆಲಸ. ಈ ಯೋಜನೆಗಾಗಿ ಕಳೆದ ವರ್ಷ 3·36 ಕೋಟಿ ರೂ.ಗಳನ್ನು ಮಹಾಜನರಿಂದ ಸಾಲವಾಗಿ ಪಡೆಯಲಾಯಿತು. ಈಗಾಗಲೇ ವಿಧಿಸಿರುವ ತೆರಿಗೆಯ ಏರ್ಪಾಟಿನಿಂದ ಈ ಯೋಜನೆಯ ಅವಧಿಯಲ್ಲಿ 3 ಕೋಟಿ ರೂ.ಗಳ ವರಮಾನದ ನಿರೀಕ್ಷಣೆಯಿದೆ. ಈ ಯೋಜನೆ ಸಂಬಂಧದಲ್ಲಿ 1954-55ರಲ್ಲಿ 3 ಕೋಟಿ ರೂ.ಗಳ ಎರಡನೆಯ ಸಾಲವನ್ನು ಎತ್ತಬೇಕೆಂದು ಸರ್ಕಾರ ಉದ್ದೇಶಿಸಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ತಯಾರಿಸುವ ಕೆಲಸ ಈಗಾಗಲೇ ಪ್ರಾರಂಭವಾಗಿದೆ.

1954-55ರಲ್ಲಿ ಸಂಸ್ಥಾನದ ಸರಕಾರ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿ 300.33 ಲಕ್ಷ ರೂಗಳಷ್ಟು ಕೊರತೆ ಬೀಳುವ ಅಂದಾಜು ಮಾಡಿದೆ. ಈ ಕೊರತೆಯಲ್ಲಿ 41 ಲಕ್ಷ ರೂ.ಗಳ ಕೊರತೆ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿದುದರಿಂದ ಉಂಟಾದುದು. ಕೊರತೆ ಬೀಳುವ ಮೊಬಲಗು ಬಹು ಭಾರಿ ಮೊತ್ತವಾದ್ದರಿಂದ ಅದನ್ನು ಸರಿ ತೂಗಿಸಲು ಕೆಲವು ತೆರಿಗೆಗಳನ್ನು ವಿಧಿಸಲಾಗಿದೆ. 1953ರಲ್ಲಿ ಸುದೈವದಿಂದ ಯಥೇಚ್ಛವಾಗಿ ಮಳೆ ಬಿದ್ದು ದೇಶದಲ್ಲಿ ಸುಭಿಕ್ಷವುಂಟಾಗಿದೆ. ಇದರಿಂದ ಆಹಾರ ಧಾನ್ಯಗಳ ಹತೋಟಿಯನ್ನು ರದ್ದು ಪಡಿಸಲು ಅನುಕೂಲವಾಯಿತು. 1953ನೇ ಜುಲೈ ತಿಂಗಳಲ್ಲಿ ಬಟ್ಟೆ ಮತ್ತು ನೂಲುಗಳ ಮೇಲಿನ ಹತೋಟಿಯನ್ನು ತೆಗೆದು ಹಾಕಲಾಯಿತು. ಈ ರೀತಿ ಹತೋಟಿಗಳನ್ನು ಸಡಿಲಗೊಳಿಸಿರುವುದರಿಂದ ಆಹಾರ ಸರಬರಾಯಿ ಮತ್ತು ಸಿವಿಲ್ ಸರಬರಾಯಿ ಇಲಾಖೆಗಳ ಸಿಬ್ಬಂದಿಗಳಿಗಾಗಿ ತಗಲುತ್ತಿದ್ದ ವೆಚ್ಚದಲ್ಲಿ 12.25 ಲಕ್ಷ ರೂ.ಗಳಷ್ಟು ಉಳಿತಾಯವಾಯಿತು. 1953-54ನೇ ಸಾಲಿನಲ್ಲಿ ಅಂದಾಜಾದ ಹುಟ್ಟುವಳಿ ರೂ. 2062.25 ಲಕ್ಷ. ಮತ್ತು ವೆಚ್ಚ ರೂ. 2219.58 ಲಕ್ಷ. ಇದರಿಂದ ರೂ. 157.33 ಲಕ್ಷ ಕೊರತೆ ಅಂದಾಜಾಯಿತು. ವರ್ಷದ ಮಧ್ಯದಲ್ಲಿ ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರಿತು. ಇದರಿಂದ ಆಯವ್ಯಯದಲ್ಲಿ ವ್ಯತ್ಯಾಸವಾಗಬೇಕಾಯಿತು. ಅಲ್ಲದೆ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೂ ಹೆಚ್ಚಿನ ವೆಚ್ಚ ವಹಿಸಬೇಕಾಯಿತು. ಇದರಿಂದ ಬದಲಾವಣೆ ಹೊಂದಿದ ಆಯವ್ಯಯ ಪಟ್ಟಿಯಲ್ಲಿ ರೂ. 1966·08 ಲಕ್ಷ ಹುಟ್ಟುವಳಿಯೂ, ರೂ. 22040·5 ಲಕ್ಷ ಖರ್ಚೂ ಸೂಚಿತವಾಗಿದೆ. ಅಂದಮೇಲೆ ರೂ. 237·97 ಲಕ್ಷ ಕೊರತೆ ಬೀಳುವುದು. ಈ ವರ್ಷದಲ್ಲಿ ಬಂಡವಾಳದ ಖರ್ಚಿಗಾಗಿ ರೂ. 587 ಲಕ್ಷ ಒದಗಿಸಲಾಯಿತು. ವರ್ಷದ ಕೊನೆಯಲ್ಲಿ ರೂ. 241 ಲಕ್ಷ ಶಿಲ್ಕು ಉಳಿಯಬಹುದೆಂಬ ನಿರೀಕ್ಷಣೆಯಿದೆ.

ಕಾರ್ಮಿಕ ಹಿತರಕ್ಷಣೆ

ಕಾರ್ಮಿಕರಿಗೂ ಮಾಲೀಕರಿಗೂ ಸೌಹಾರ್ದವೂ ಸಮರಸವೂ ಬೆಳೆದು ಬರುವಂತೆ ಸೂಕ್ತ ವಾತಾವರಣವನ್ನು ಕಲ್ಪಿಸುವುದೇ ಮೈಸೂರು ಸರಕಾರದ ಕಾರ್ಮಿಕ ನೀತಿ. ರಾಷ್ಟ್ರದ ಸಂಪತ್ತನ್ನು ಉತ್ಪತ್ತಿಮಾಡುವ ಮತ್ತು ರಾಷ್ಟ್ರೀಯ ಸೇವಾಕ್ಷೇತ್ರಗಳನ್ನು ಸುಭದ್ರಗೊಳಿಸಿಕೊಂಡು ಬರುವ ಮಹತ್ಕಾರ್ಯದಲ್ಲಿ ಕಾರ್ಮಿಕ ವರ್ಗ ಬಂಡವಾಳಗಾರರಿಗೆ ಸರಿಸಮಾನಸ್ಕಂದರಾದ ಭಾಗಿದಾರರು ಎಂಬ ತತ್ವವೇ ಸರಕಾರದ ನೀತಿಯ ನಿಲುಗಟ್ಟಾಗಿದೆ. ಈ ದೃಷ್ಟಿಯಿಂದ ಸರಕಾರ ಈಗಾಗಲೇ 30 ಕಾನೂನುಗಳನ್ನು ರಚಿಸಿದೆ. ಕಾರ್ಖಾನೆಗಳ ಆಕ್ಟಿನ ವ್ಯಾಪ್ತಿಗೆ ಸೇರಿದ ಕಾರ್ಖಾನೆಗಳು ಸಂಸ್ಥಾನದಲ್ಲಿ ಒಟ್ಟು 632 ಇವೆ, ಅವುಗಳಲ್ಲಿ 81,400 ಜನ ಕೆಲಸಗಾರರಿದ್ದಾರೆ. 1947ರಲ್ಲಿ ಜನಾನುರಾಗಿ ಸರಕಾರ ಸ್ಥಾಪಿತವಾದ ಕೂಡಲೇ ಕಾರ್ಮಿಕ ಶಾಖೆಯ ಪ್ರತ್ಯೇಕ ಸೆಕ್ರೆಟೇರಿಯಟ್ಟನ್ನು ಏರ್ಪಡಿಸಲಾಯಿತು. ಲೇಬರ್ ಕಮಿಷನರಿಗೆ ಹಲವು ಸಹಾಯಕ ವರ್ಗಗಳನ್ನು ನಿರ್ಮಿಸಲಾಗಿದೆ. ಮಹಿಳಾ ಕಾರ್ಮಿಕರ ಹಿತರಕ್ಷಣೆಗಾಗಿ ಒಬ್ಬ ಲೇಡಿ ಅಸಿಸ್ಟೆಂಟ್ ಕೂಡ ಇದ್ದಾರೆ.

ಸರ್ಕಾರಿ ಮಾಲೀಕತ್ವಕ್ಕೆ ಸೇರಿರುವ ಮತ್ತು ಸರ್ಕಾರಿ ಸಹಾಯವನ್ನು ಪಡೆದಿರುವ ಕೈಗಾರಿಕಾ ಸಂಸ್ಥೆಗಳಿಗೆ ಸರ್ಕಾರದವರು ಲೇಬರ್ ವೆಲ್‌ಫೇರ್ ಆಫೀಸರುಗಳೆಂಬ ಕಾರ್ಮಿಕ ಹಿತರಕ್ಷಣೆಯ ಅಧಿಕಾರಿಗಳನ್ನು ನೇಮಿಸಿದ್ದಾರೆ. ಉದ್ಯೋಗ ಬೇಕಾಗಿರುವಂತಹ ಕಾರ್ಮಿಕರಿಗೆ ಎಂಪ್ಲಾಯ್‌ಮೆಂಟ್ ಎಕ್ಸ್ಛೇಂಜಿನ ಮೂಲಕ ಉದ್ಯೋಗ ಕಲ್ಪಿಸುವ ಏರ್ಪಾಟಿದೆ. ಕಾರ್ಖಾನೆ (ತಿದ್ದುಪಡಿ) ಕಾನೂನು, ಕಾರ್ಮಿಕ ಗೃಹ ನಿರ್ಮಾಣ ಕಾನೂನು ಇವೇ ಮುಂತಾದ ಕಾನೂನುಗಳನ್ನು ಕಾರ್ಮಿಕರ ಹಿತ ಸಾಧನೆಗಾಗಿ ಸರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಜಾರಿಗೆ ತಂದಿದೆ. ವ್ಯವಸಾಯ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತು ಸರಕಾರ ವಿಚಾರಣೆಯನ್ನೇರ್ಪಡಿಸಿತ್ತು. ಈ ದಿಕ್ಕಿನಲ್ಲಿ ಕಾರ್ಯಕ್ರಮ ಬಹುಮಟ್ಟಿಗೆ ಮುಂದುವರಿದಿದೆ. ಪ್ಲಾಂಟೇಷನ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸ್ಥಿತಿಯನ್ನು ಕುರಿತು ವಿಚಾರಣೆ ನಡೆದಿದೆ. ಕೈಗಾರಿಕಾ ವಿವಾದಗಳ ಸಂಬಂಧದಲ್ಲಿ ಕೇಂದ್ರ ಸರಕಾರ ಜಾರಿಗೆ ತಂದಿರುವ ಕಾನೂನನ್ನು ಮೈಸೂರಿಗೂ ಅನ್ವಯಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಟ್ರಿಬ್ಯೂನಲ್ಲನ್ನೂ ಮಧ್ಯಸ್ಥಿಕೆ ಅಧಿಕಾರಿಗಳನ್ನೂ ನೇಮಕ ಮಾಡಿದೆ.

ವೈದ್ಯ ಸೌಲಭ್ಯ

ಜನಾರೋಗ್ಯ ಮತ್ತು ವೈದ್ಯ ಸಹಾಯದಲ್ಲಿ ಮೈಸೂರು ಭಾರತದ ಇತರ ಭಾಗಗಳಿಗಿಂತ ಮುಂದಿದೆ. ಇಲ್ಲಿ ಪ್ರತಿ 58.9 ಚದರ ಮೈಲಿಗೂ, ಪ್ರತಿ 18.341 ಪ್ರಜೆಗೂ ಒಂದೊಂದು ವೈದ್ಯಕೀಯ ಸಂಸ್ಥೆ ಇದೆ. ಸಂಸ್ಥಾನದಲ್ಲೆಲ್ಲಾ ಒಟ್ಟು 493 ವೈದ್ಯಕೀಯ ಸಂಸ್ಥೆಗಳಿವೆ.

ಮಲೇರಿಯಾ ರೋಗವನ್ನು ತಡೆಗಟ್ಟುವುದಕ್ಕಾಗಿ ಪರಿಹಾರ ಕಾರ್ಯಕ್ರಮಗಳನ್ನು ವಿಸ್ತರಿಸುವ ಯೋಜನೆ ತೀವ್ರವಾಗಿ ಕಾರ್ಯಗತವಾಗುತ್ತಿದೆ. ರೋಗ ಬರುವ ಮುನ್ನವೇ ಅದನ್ನು ತಡೆಗಟ್ಟುವ ಮತ್ತು ರೋಗ ಬಂದ ಮೇಲೆ ಅದನ್ನು ವಾಸಿ ಮಾಡುವ ಕಾರ್ಯಕ್ರಮಗಳು ಪರಸ್ಪರ ಹೊಂದಿಕೊಂಡು ಜನತೆಯ ಆರೋಗ್ಯವನ್ನು ಉತ್ತಮಗೊಳಿಸಲು ಪಣತೊಟ್ಟು ಸೇವೆ ಸಲ್ಲಿಸುತ್ತಿವೆ. ಸಂಸ್ಥಾನದಲ್ಲಿ 120 ಆರೋಗ್ಯ ಕೇಂದ್ರಗಳಿವೆ. ಮಲೇರಿಯಾ ನಿವಾರಣಾಕ್ರಮವಲ್ಲದೆ ಕ್ಷಯ ರೋಗ ನಿವಾರಣಾ ಕ್ರಮವನ್ನೂ ಚುರುಕಿನಿಂದ ಸಾಗಿಸಲಾಗುತ್ತಿದೆ.ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿ ಹೊರ ಬಂದಂತಹ ಕ್ಷಯರೋಗಿಗಳಿಗೆ ಅಗತ್ಯವಾದ ಉಪಚಾರ ಸೌಕರ್ಯ ಒದಗಿಸಲು ನಿಲಯಗಳನ್ನು ಏರ್ಪಡಿಸಲು ಆಲೋಚಿಸಲಾಗುತ್ತಿದೆ.

ವೈದ್ಯಕೀಯ ಸೇವೆಯನ್ನು ವಿಸ್ತಾರಗೊಳಿಸುವ ಕಾರ್ಯಕ್ರಮದಲ್ಲಿ ಹೊಸ ಹೊಸ ಆಸ್ಪತ್ರೆಗಳ ಸ್ಥಾಪನೆ, ಹೆರಿಗೆ ಆಸ್ಪತ್ರೆಗಳ ಸ್ಥಾಪನೆ, ಈಗಿರುವ ಆಸ್ಪತ್ರೆಗಳ ವ್ಯಾಪ್ತಿಯನ್ನು ಹೆಚ್ಚಿಸುವುದು, ಗ್ರಾಮಾಂತರ ಭಾಗಗಳಲ್ಲಿ ವೈದ್ಯಕೀಯ ಸೌಲಭ್ಯ ಸುಲಭವಾಗಿ ದೊರೆಯುವಂತೆ ವೈದ್ಯರುಗಳಿಗೆ ಗ್ರ್ಯಾಂಟುಗಳನ್ನು ಕೊಟ್ಟು ಗ್ರಾಮಾಂತರಗಳಲ್ಲಿ ನೆಲಸಲು ಪ್ರೋತ್ಸಾಹ ನೀಡುವುದು, ಇವೇ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ ನೀತಿಗನುಗುಣವಾಗಿ ಈಚೆಗೆ ಶಿವಮೊಗ್ಗಾದಲ್ಲಿಯ ಆಸ್ಪತ್ರೆಯನ್ನು ದೊಡ್ಡಾಸ್ಪತ್ರೆಯನ್ನಾಗಿ (ಜನರಲ್ ಆಸ್ಪತ್ರೆ) ಪರಿವರ್ತಿಸಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ಮತ್ತು ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗಳಂತೆ ಅಲ್ಲಿಯೂ ಸೌಲಭ್ಯಗಳು ಒದಗುವಂತೆ ಮಾಡಿದೆ. ಇದೇ ರೀತಿ ಹಾಸನ ಮತ್ತು ಚಿಕ್ಕಮಗಳೂರು ಆಸ್ಪತ್ರೆಗಳೂ ಬದಲಾವಣೆಯಾಗುತ್ತಿವೆ. ಬೆಂಗಳೂರಿನಲ್ಲಿರುವ ಹುಚ್ಚಾಸ್ಪತ್ರೆಯನ್ನು ಉತ್ತಮಪಡಿಸಲೂ ಪ್ರಯತ್ನ ನಡೆಯುತ್ತಿದೆ. ಸಂಸ್ಥಾನದಲ್ಲಿ ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಗಳಿಗೂ ಪುರಸ್ಕಾರವಿದೆ.

ಸರ್ಕಾರ

ರಾಜಪ್ರಮುಖ:

ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.

ಮಂತ್ರಿ ಮಂಡಲ:

ಶ್ರೀ ಕೆ. ಹನುಮಂತಯ್ಯ, ಬಿ.ಎ., ಎಲೆಲ್.ಬಿ., ಮುಖ್ಯ ಮಂತ್ರಿ.
ಶ್ರೀ ಎ. ಜಿ. ರಾಮಚಂದ್ರರಾವ್, ಬಿ.ಎ., ಎಲೆಲ್.ಬಿ., ನ್ಯಾಯ ಮತ್ತು ವಿದ್ಯಾ ಮಂತ್ರಿ.
ಶ್ರೀ ಟಿ. ಚನ್ನಯ್ಯ, ಬಿ.ಎಸ್ಸಿ., ಆರೋಗ್ಯ ಮತ್ತು ಸ್ಥಳೀಯ ಆಡಳಿತ ಮಂತ್ರಿ.
ಶ್ರೀ ಕಡಿದಾಳ್ ಮಂಜಪ್ಪ, ಬಿ.ಎ., ಎಲೆಲ್.ಬಿ., ರೆವಿನ್ಯೂ ಮತ್ತು ಮುರಾಮತ್ ಮಂತ್ರಿ.
ಶ್ರೀ ಹೆಚ್. ಸಿದ್ದವೀರಪ್ಪ, ಬಿ.ಎ., ಎಲೆಲ್.ಬಿ., ಒಳಾಡಳಿತ ಮತ್ತು ಕೈಗಾರಿಕೆ ಮಂತ್ರಿ.
ಡಾ॥ ಆರ್. ನಾಗನಗೌಡ, ಎಂ.ಎಸ್ಸಿ., ಪಿ.ಹೆಚ್‌ಡಿ. (ಯು.ಎಸ್.ಎ.), ವ್ಯವಸಾಯ ಮಂತ್ರಿ.

ಶಾಸನ ಸಭೆ

ವಿಧಾನ ಸಭೆಯ ಸ್ಪೀಕರ್.
ಶ್ರೀ ಆರ್. ಚೆನ್ನಿಗರಾಮಯ್ಯ, ವಿಧಾನ ಸಭೆಯ ಡೆಪ್ಯುಟಿ ಸ್ಪೀಕರ್.
ಶ್ರೀ ಕೆ. ಟಿ. ಭಾಷ್ಯಂ, ಬಿ.ಎ., ಬಿ.ಎಲ್., ವಿಧಾನ ಪರಿಷತ್ತಿನ ಅಧ್ಯಕ್ಷ.
ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿ, ಬಿ.ಎ., ಬಿ.ಎಲ್., ವಿಧಾನ ಪರಿಷತ್ತಿನ ಉಪಾಧ್ಯಕ್ಷ.
ಶ್ರೀ ಜಿ. ಎಸ್. ವೆಂಕಟರಮಣಯ್ಯರ್, ಬಿ.ಎಸ್ಸಿ., ಎಂ.ಎಲ್., ಕಾರ್ಯದರ್ಶಿ.

ಹೈ ಕೋರ್ಟ್

ಶ್ರೀ ಪಿ. ಮೇದಪ್ಪ, ಬಿ.ಎ., ಬಿ.ಎಲ್., ಚೀಫ್ ಜಸ್ಟಿಸ್.
ಶ್ರೀ ಆರ್. ವೆಂಕಟರಾಮಯ್ಯ, ಎಂ.ಎ., ಎಲೆಲ್.ಬಿ., ಜಡ್ಜ್.
ಶ್ರೀ ಎನ್. ಬಾಲಕೃಷ್ಣಯ್ಯ, ಬಿ.ಎ., ಎಲೆಲ್.ಬಿ., ಜಡ್ಜ್.
ಶ್ರೀ ಟಿ. ಎನ್. ಮಲ್ಲಪ್ಪ, ಬಿ.ಎ., ಎಲೆಲ್.ಬಿ., ಜಡ್ಜ್.
ಶ್ರೀ ಬಿ. ವಾಸುದೇವಮೂರ್ತಿ, ಬಿ.ಎ., ಎಲೆಲ್.ಬಿ., ಜಡ್ಜ್.
ಶ್ರೀ ನಿಟ್ಟೂರ್ ಶ್ರೀನಿವಾಸರಾವ್, ಬಿ.ಎಸ್ಸಿ., ಬಿ.ಎಲ್., ಅಡ್ವೊಕೇಟ್ ಜನರಲ್.
ಶ್ರೀ ಜಿ. ಚನ್ನಪ್ಪ, ಬಿ.ಎ., ಎಲೆಲ್.ಬಿ., ಅಸಿಸ್ಟೆಂಟ್ ಅಡ್ವೊಕೇಟ್ ಜನರಲ್.
ಶ್ರೀ ಆರ್. ಬಿ. ವಾಸುದೇವ್, ಬಿ.ಎ., ಎಲೆಲ್.ಬಿ., ರಿಜಿಸ್ಟ್ರಾರ್.

ಪಬ್ಲಿಕ್ ಸರ್ವಿಸ್ ಕಮಿಷನ್

ರಾಜಮಂತ್ರಪ್ರವೀಣ ಶ್ರೀ ಹೆಚ್. ಬಿ. ಗುಂಡಪ್ಪಗೌಡ, ಬಿ.ಎ., ಬಿ.ಎಲ್., ಅಧ್ಯಕ್ಷ.
ಶ್ರೀ ಜಾರ್ಜ್ ಮ್ಯಾಥ್ಯೂ, ಬಿ.ಎಸ್ಸಿ., ಸದಸ್ಯ.
ಶ್ರೀ ಹೆಚ್. ಎಂ. ಮಲ್ಲಿಕಾರ್ಜುನಪ್ಪ, ಬಿ.ಎ., ಎಲೆಲ್.ಬಿ., ಸದಸ್ಯ.

ಅರಮನೆ

ಶ್ರೀ ಸಫಿದಾರಾಷ, ಐ.ಎ.ಎಸ್., ರಾಜಪ್ರಮುಖರ ಪ್ರೈವೇಟ್ ಸೆಕ್ರೆಟರಿ.

ಶ್ರೀ ಹೆಚ್. ಎಸ್. ಪಾಳೇಗಾರ್, ಐ.ಎ.ಎಸ್., ರಾಜಪ್ರಮುಖರ ಮಿಲಿಟರಿ ಸೆಕ್ರೆಟರಿ.

ವಿಶ್ವವಿದ್ಯಾನಿಲಯ

ಶ್ರೀ ವಿ. ಎಲ್. ಡಿಸೌಜ, ಬಿ.ಎ., ಬಿ.ಕಾಂ., ವೈಸ್‌ಛಾನ್ಸಲರ್

ಶ್ರೀ ಎಫ್. ಜೆ. ನೊರೋನ್ಹ, ಎಂ.ಎ. (ಲಂಡನ್), ರಿಜಿಸ್ಟ್ರಾರ್.

ಸರ್ಕಾರದ ಸೆಕ್ರೆಟರಿಗಳು

ಶ್ರೀ ಎನ್. ಪುಟ್ಟರಂಗಸ್ವಾಮಿ, ಐ.ಎ.ಎಸ್., ಚೀಫ್ ಸೆಕ್ರೆಟರಿ.

ಶ್ರೀ ಎಸ್. ಮಾಧವರಾವ್, ಐ.ಎ.ಎಸ್., ಫೈನಾನ್ಷಿಯಲ್ ಸೆಕ್ರೆಟರಿ.

ಶ್ರೀ ಕೆ. ಮಹಮ್ಮದ್ ಅಷ್ರಫ್, ಐ.ಎ.ಎಸ್., ರೆವಿನ್ಯು ಸೆಕ್ರೆಟರಿ.

ಶ್ರೀ ಬಿ. ಕೆ. ಶ್ರೀನಿವಾಸಾಚಾರ್, ಪಬ್ಲಿಕ್ ವರ್ಕ್ಸ್ ಮತ್ತು ಎಲೆಕ್ಟ್ರಿಕಲ್ ಸೆಕ್ರೆಟರಿ.

ಶ್ರೀ ಜಿ. ವೆಂಕಟಕೃಷ್ಣರಾವ್, ಸ್ಥಳೀಯ ಆಡಳಿತ ಮತ್ತು ಪ್ಲಾನಿಂಗ್ ಸೆಕ್ರೆಟರಿ.

ಶ್ರೀ ಬಿ. ಜೆ. ಬಾಳರಾಜ್, ಒಳಾಡಳಿತ, ವ್ಯವಸಾಯ ಮತ್ತು ಅರಣ್ಯ ಸೆಕ್ರೆಟರಿ.

ಶ್ರೀ ಆರ್. ಜೆ. ರಿಗೋ, ಐ.ಎ.ಎಸ್., ಡೆವಲಪ್‌ಮೆಂಟ್ ಸೆಕ್ರೆಟರಿ.

ಶ್ರೀ ಸಿ. ಬಿ. ಚನ್ನಪ್ಪ, ಬಿ.ಎ., ಬಿ.ಎಲ್., ಲಾ ಸೆಕ್ರೆಟರಿ.

ಶ್ರೀ ಬಿ. ಎಂ. ಕೃಷ್ಣನ್, ಐ.ಎ.ಎಸ್., ವಿದ್ಯಾ ಸೆಕ್ರೆಟರಿ.

ಶ್ರೀ ಎಂ. ಸದಾಶಿವಯ್ಯ, ಬಿ.ಎ., ಬಿ.ಎಲ್., ಅಡಿಷನಲ್ ಸೆಕ್ರೆಟರಿ.

ಶ್ರೀ ಎಂ. ಕೆ. ವರದರಾಜನ್, ಎಂ.ಎ., ಬಿ.ಎಲ್., ಚೀಫ್ ಎಲೆಕ್ಟೋರಲ್ ಆಫೀಸರ್ ಮತ್ತು ಜಾಯಿಂಟ್ ಸೆಕ್ರೆಟರಿ.

ಇಲಾಖೆಗಳ ಮುಖ್ಯಾಧಿಕಾರಿಗಳು

ಶ್ರೀ ಜಿ. ಎಸ್. ನಾಗರಾಜರಾವ್, ಐ.ಎ.ಎಸ್., ರೆವಿನ್ಯು ಕಮಿಷನರ್.

ಶ್ರೀ ಇ. ಪಿ. ಗಣಪತಿ ಅಯ್ಯರ್, ಐ.ಎ.ಎಸ್., ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್.

ಶ್ರೀ ಎ. ಸಿ. ದಿವಾಕರೇಗೌಡ, ಐ.ಎ.ಎಸ್., ಎಕ್ಸೈಜ್ ಕಮಿಷನರ್.

ಶ್ರೀ ಕೆ. ಪಿ. ರಾಮನಾಥಯ್ಯ. ಐ.ಎ.ಎಸ್., ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್, ಕಮಿಷನರ್ ಫಾರ್ ಡಿಸ್ಟ್ರೆಸ್ ರಿಲೀಫ್ ಅಂಡ್ ಇನ್ಸ್‌ಪೆಕ್ಟರ್-ಜನರಲ್ ಆಫ್ ಪ್ರಿಸನ್ಸ್.

ಶ್ರೀ ಎನ್. ಎಸ್. ಹಿರಣ್ಣಯ್ಯ, ಐ.ಎ.ಎಸ್., ಕಮಿಷನರ್ ಫಾರ್ ಲೋಕಲ್ ಸೆಲ್ಫ್—ಗೌರ್ನ್‌ಮೆಂಟ್.

ಶ್ರೀ ಜೆ. ಬಿ. ಮಲ್ಲಾರಾಧ್ಯ, ಐ.ಎ.ಎಸ್., ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್.

ಶ್ರೀ ಎಂ. ಕೆ. ಅಪ್ಪಾಜಪ್ಪ, ಐ.ಎ.ಎಸ್., ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅಂಡ್ ಫುಡ್ ಪ್ರೊಡಕ್ಷನ್ ಕಮಿಷನರ್.

ಶ್ರೀ ಜೆ. ಅಪ್ಪಾಜಿಗೌಡ, ಬಿ.ಎ. (ಆನರ್ಸ್), ಎಫಿಷಿಯನ್ಸಿ ಆಡಿಟ್ ಸ್ಪೆಷಲ್ ಆಫೀಸರ್

ಮತ್ತು ಸರ್ಕಾರಿ ಜೀವವಿಮೆ ಇಲಾಖೆಯ ಜನರಲ್ ಮ್ಯಾನೇಜರ್.

ಶ್ರೀ ಜಿ. ರಾಜಪ್ಪ, ಬಿ. ಎ., ಡಿಪ್ರೆಸ್ಡ್ ಕ್ಲಾಸಸ್ ಕಮಿಷನರ್.

ಶ್ರೀ ಟಿ. ಎಸ್. ಕೃಷ್ಣಸ್ವಾಮಿ, ಬಿ.ಎ., ಬಿ.ಎಲ್., ಲೇಬರ್ ಕಮಿಷನರ್.

ಶ್ರೀ ಎಂ. ಎ. ಮುತ್ತಣ್ಣ, ಬಿ.ಎಸ್‌ಸಿ., ಐ.ಎಫ್.ಎಸ್., ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ಶ್ರೀ ಜಾರ್ಜ್ ಚಾಂಡಿ, ಎಂ.ಎಸ್.ಇ.ಇ., ಚೀಫ್ ಎಲೆಕ್ಟ್ರಿಕಲ್ ಇಂಜನೀಯರ್.

ಡಾ॥ ಪಿ. ಎಂ. ನಾರಾಯಣಸ್ವಾಮಿ ನಾಯಿಡು, ಬಿ.ಎಸ್‌ಸಿ., ಎಲ್.ವಿ.ಪಿ., ಎಸ್‌ಸಿ.ಡಿ. (ಜರ್ಮನಿ), ಎಫ್.ಎಫ್.ಎ.ಎಸ್. (ಫ್ರಾನ್ಸ್), ವೆಟರಿನರಿ ಮತ್ತು ಅನಿಮಲ್ ಹಸ್ಬೆಂಡ್ರಿ ಸರ್ವೀಸಸ್ ಡೈರೆಕ್ಟರ್.

ಡಾ॥ ಚಾರ್ಲ್ಸ್ ಎಸ್. ಪಿಚಮುತ್ತು, ಡಿ.ಎಸ್‌ಸಿ. (ಗ್ಲಾಸ್ಗೊ), ಪಿ.ಹೆಚ್‌ಡಿ., ಜಿಯಾಲಜಿ ಡೈರೆಕ್ಟರ್.

ಡಾ॥ ಟಿ. ಚಂದ್ರಶೇಖರಯ್ಯ, ಬಿ.ಎ., ಎಂ.ಬಿ.ಬಿ.ಎಸ್., ಎಂ.ಪಿ.ಹೆಚ್., ಪಬ್ಲಿಕ್ ಹೆಲ್ತ್ ಡೈರೆಕ್ಟರ್.

ಡಾ॥ ಜಿ. ಆರ್. ರಾಮಲಿಂಗರೆಡ್ಡಿ, ಎಲ್.ಆರ್.ಸಿ.ಪಿ., ಎಂ.ಆರ್.ಸಿ.ಎಸ್., ಮೆಡಿಕಲ್ ಸರ್ವೀಸಸ್ ಡೈರೆಕ್ಟರ್.

ಶ್ರೀ ಕೆ. ಎಸ್. ಗಂಗಾಧರ, ಬಿ.ಇ., ಚೀಫ್ ಇಂಜನೀಯರ್.

ಶ್ರೀ ಹೆಚ್. ಅನಂತಾಚಾರ್, ಬಿ.ಇ., ಎ.ಎಂ.ಐ.ಇ., ಸ್ಪೆಷಲ್ ಚೀಫ್ ಇಂಜನೀಯರ್.

ಶ್ರೀ ಸಿ. ನರಸಿಂಹಮೂರ್ತಿ, ಐ.ಎ.ಎಸ್., ಜೀವವಿಮೆ ಇಲಾಖೆಯ ಸೆಕ್ರೆಟರಿ.

ಶ್ರೀ ಸಿ. ಬಿ. ಶಂಕರಯ್ಯರ್, ಬಿ.ಎಸ್‌ಸಿ., ಜೀವವಿಮೆ ಇಲಾಖೆಯ ಜಾಯಿಂಟ್ ಸೆಕ್ರೆಟರಿ.

ಶ್ರೀ ಕೆ. ತಿಪ್ಪೇರುದ್ರಯ್ಯ, ರೂರಲ್ ಇಂಡಸ್ಟ್ರಿಯಲೈಜೇಷನ್ ಸ್ಪೆಷಲ್ ಆಫೀಸರ್.

ಶ್ರೀ ಬಿ.ಎನ್. ಶ್ರೀಸತ್ಯನ್, ಬಿ.ಎ. (ಆನರ್ಸ್), ಪ್ರಿನ್ಸಿಪಲ್ ಇನ್‌ಫರ್ಮೇಷನ್ ಆಫೀಸರ್.

ಶ್ರೀ ಡಿ. ಎಸ್. ಗುರುಬಸವಪ್ಪ, ಬಿ.ಎಸ್‌ಸಿ., ಪ್ರಿಂಟಿಂಗ್, ಸ್ಟೇಷನರಿ ಮತ್ತು ಪಬ್ಲಿಕೇಷನ್ಸ್ ಡೈರೆಕ್ಟರ್.

ಶ್ರೀ ಕೆ. ನಾರಾಯಣಯ್ಯಂಗಾರ್, ಎಂ.ಎ., ಡೈರೆಕ್ಟರ್ ಆಫ್ ಆರ್ಕಿಯಾಲಜಿ.

ಶ್ರೀ ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ., ಡೈರೆಕ್ಟರ್ ಆಫ್ ಕಲ್ಚರಲ್ ಅಂಡ್ ಲಿಟರರಿ ಡೆವಲಪ್‌ಮೆಂಟ್.

ಶ್ರೀ ಎ. ವಿಶ್ವನಾಥ್, ಬಿ.ಎಸ್‌ಸಿ., ಬಿ.ಎಲ್., ಸರ್ಕಾರಿ ರೋಡ್ ಟ್ರಾನ್ಸ್‌ಪೋರ್ಟ್ ಸರ್ವೀಸಸ್ ಜನರಲ್ ಮ್ಯಾನೇಜರ್.

ಶ್ರೀ ಮಹಮದ್ ರಹ್ಮತುಲ್ಲಾ, ಎಂ.ಎ., ಎಲ್‌ಎಲ್.ಬಿ., ಸ್ಟೇಟ್ ಅಕೌಂಟ್ಸ್ ಇಲಾಖೆಯ ಕಂಟ್ರೋಲರ್.

ಶ್ರೀ ಹೆಚ್. ಎಸ್. ವೆಂಕಟರಾವ್, ಬಿ.ಎಸ್‌ಸಿ., ಸೆರಿಕಲ್ಚರ್ ಡೈರೆಕ್ಟರ್.

ಡಾ॥ ಎಂ. ಹೆಚ್. ಮರಿಗೌಡ, ಎಂ.ಎಸ್‌ಸಿ., ಪಿ.ಹೆಚ್‌ಡಿ. (ಹಾರ್ವರ್ಡ್), ಹಾರ್ಟಿಕಲ್ಚರ್ ಸೂಪರಿಂಟೆಂಡೆಂಟ್.

ಭಾಗ 3

ಮೈಸೂರಿನಲ್ಲಿ ಯಾರು - ಯಾರು

ಅನಂತರಾಮಯ್ಯ, ಆರ್., ಜನನ 1915. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮತ್ತು ಬೆಳಗಾಂ ಲಾ ಕಾಲೇಜಿನಲ್ಲಿ ವಿದ್ಯಾಭ್ಯಾಸ. 1943ರಲ್ಲಿ ವಕೀಲರಾಗಿ ಪ್ರವೇಶ. 1947ರ ಮೈಸೂರು ರಾಜಕೀಯ ಚಳುವಳಿಯಲ್ಲಿ ಬಂಧನ. ಬೆಂಗಳೂರು ಪೌರಸಭೆಯ ಸದಸ್ಯರು 1947-49. ಬೆಂಗಳೂರು ಕಾರ್ಪೊರೇಷನ್ ಸದಸ್ಯರು 1950-53. ಬೆಂಗಳೂರು ಮೇಯರು 1951. ಮೈಸೂರು ಅಸೆಂಬ್ಲಿ ಸದಸ್ಯರು, 1952ರಿಂದ. ನಿವಾಸ: ಚಾಮರಾಜಪೇಟೆ, ಬೆಂಗಳೂರು-2.

ಅಪ್ಪಾಜಪ್ಪ, ಎಂ. ಕೆ., ಬಿ.ಎ., ಮೈಸೂರು ಸರ್ಕಾರದ ವ್ಯವಸಾಯ ಇಲಾಖೆಯ ಡೈರೆಕ್ಟರು ಮತ್ತು ಆಹಾರೋತ್ಪನ್ನ ಕಮಿಷನರು. 1905ರಲ್ಲಿ ಜನನ. ವಿದ್ಯಾಭ್ಯಾಸವಾದಮೇಲೆ 1929 ರಲ್ಲಿ ಸರ್ಕಾರಿ ಸರ್ವಿಸ್ ಸೇರಿದರು. ವಾಸ: ಗವಿಪುರ, ಬೆಂಗಳೂರು.

ಅಪ್ಪಾಜಿ, ವೈ., ಮೈಸೂರು ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರು(1950 ರಿಂದ) ; ಜನನ 1904. 1936 ರಲ್ಲಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಲೆಕ್ಚರರಾಗಿ ಪ್ರವೇಶ. ಶರೀರ ಶಾಸ್ತ್ರದ ವಿಷಯದಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ದಾಮೋದರದಾಸ್ ಸ್ಕಾಲರ್‌ಷಿಪ್ ಪಡೆದು ಲಂಡನ್ನಿಗೆ ಹೋಗಿದ್ದರು. 1937ರಲ್ಲಿ ಅನಾಟಮಿಯ ಪ್ರೊಫೆಸರಾದರು. ಮೆಡಿಕಲ್ ಕಾಲೇಜು ಹಾಸ್ಟಲಿನ ವಾರ್ಡನ್ 1939-42. ನಿವಾಸ: ಮೆಡಿಕಲ್ ಕಾಲೇಜು, ಮೈಸೂರು.

ಅಪ್ಪಾಜಿ ಗೌಡ, ಜೆ., ರಾಜಕಾರ್ಯಪ್ರವೀಣ (1947), ಆಂಟಿಕರಪ್ಷನ್ ಮತ್ತು ಎಫಿಷಿಯನ್ಸಿ ಆಡಿಟ್ ಇಲಾಖೆಯ ಡೈರೆಕ್ಟರು. ಜನನ 1892. 1917 ರಲ್ಲಿ ಕೈಗಾರಿಕಾ ಇಲಾಖೆಯಲ್ಲಿ ಪ್ರೊಬೇಷನರಾಗಿ ಮೈಸೂರು ಸರ್ವಿಸಿಗೆ ಪ್ರವೇಶ. ಎಜುಕೇಷನ್ ಬೋರ್ಡ್ ಸೆಕ್ರೆಟರಿ 1922. ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡ್ ಸೆಕ್ರೆಟರಿ 1925. ಸರಕಾರದ ಡೆವಲಪ್‌ಮೆಂಟ್ ಸೆಕ್ರೆಟರಿ 1939 ; ಚೀಫ್ ಸೆಕ್ರೆಟರಿ 1943; ಮೈಸೂರು ಮಂತ್ರಿಯಾಗಿ 1943ರ ಏಪ್ರಿಲ್‌ನಲ್ಲಿ ನೇಮಕ, 1947ರಲ್ಲಿ ಮಂತ್ರಿಸ್ಥಾನದಿಂದ ನಿವೃತ್ತಿ. ನಿವಾಸ: ಕೇಂಬ್ರಿಜ್ ರೋಡ್, ಅಲಸೂರ್, ಬೆಂಗಳೂರು-1.

ಅಬ್ದುಲ್ ಘನಿ, ಸಿ., ಬಿ.ಎ., ಬಿ.ಎಲ್., ಮೈಸೂರು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರು. 1886ರಲ್ಲಿ ಜನನ. ವಿದ್ಯಾಭ್ಯಾಸವಾದಮೇಲೆ 1915 ರಲ್ಲಿ ಮುನ್ಸೀಫರಾಗಿ ಸರ್ಕಾರಿ ಸರ್ವಿಸ್ ಸೇರಿದರು. 1928ರಲ್ಲಿ ಸಬಾರ್ಡಿನೇಟ್ ಜಡ್ಜರಾಗಿಯೂ, 1935ರಲ್ಲಿ ಜಿಲ್ಲಾ ಜಡ್ಜರಾಗಿಯೂ ಬಡ್ತಿ ಹೊಂದಿದರು. 1936ರಲ್ಲಿ ಹೈಕೋರ್ಟ್ ಜಡ್ಜರಾಗಿ 1943 ರಲ್ಲಿ ನಿವೃತ್ತರಾದರು. ನಿವಾಸ: ಬಸವನಗುಡಿ, ಬೆಂಗಳೂರು-4.

ಅಬ್ದುಲ್ ಜಬ್ಬಾರ್, ಸಿ., ಬಿ. ಎ., ಮೈಸೂರು ಸರ್ಕಾರದ ನಿವೃತ್ತ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್. 1889ರಲ್ಲಿ ಹುಟ್ಟಿದ್ದು. 1916ರಲ್ಲಿ ಸರ್ಕಾರಿ ಅರಣ್ಯ ಶಾಖೆಯಲ್ಲಿ ಅಸಿಸ್ಟೆಂಟ್ ಕನ್ಸರ್ವೇಟರಾಗಿ

ಕೆಲಸಕ್ಕೆ ಸೇರಿದರು. 1946ರಲ್ಲಿ ಸರ್ಕಾರಿ ಕೆಲಸದಿಂದ ನಿವೃತ್ತಿ. ನಿವಾಸ: ಬಸವನಗುಡಿ, ಬೆಂಗಳೂರು-4.

ಅಬ್ದುಲ್ ವಾಜಿದ್, ಎಸ್., ಬಿ. ಎ., ನಿವೃತ್ತ ರೆವೆನ್ಯು ಕಮಿಷನರ್ (ಮೈಸೂರು). 1887 ರಲ್ಲಿ ಜನನ. ವ್ಯಾಸಂಗವಾದಮೇಲೆ ಅಸಿಸ್ಟೆಂಟ್ ಕಮಿಷನರಾಗಿ ಸರ್ಕಾರಿ ಹುದ್ದೆ 1910ರಲ್ಲಿ ಸೇರಿದರು. 1926ರಲ್ಲಿ ಡೆಪ್ಯುಟಿ ಕಮಿಷನರಾದರು. ಏಷಿಯಾಟಿಕ್ ಅಷ್ಯೂರೆನ್ಸ್ ಕಂಪೆನಿಯ ಅಧ್ಯಕ್ಷರಾಗಿದ್ದರು. 1939 ರಲ್ಲಿ ಮೈಸೂರು ಮಹಾರಾಜರು "ರುಕ್ನ್-ಉಲ್-ಮುಲ್ಕ್" ಎಂಬ ಬಿರುದನ್ನು ಕೊಟ್ಟರು. ಮೈಸೂರು ಫಿಲ್ಮ್ ಚೇಂಬರ್ ಅಧ್ಯಕ್ಷರಾಗಿದ್ದರು. ನಿವಾಸ: ಬಸವನಗುಡಿ, ಬೆಂಗಳೂರು-4.

ಆಚಾರ್ಯ, ಜಿ. ಎ., ಜನನ 1900. ಮಾಲೀಕರು, ಬೆಂಗಾಲ್ ಎಲೆಕ್ಟ್ರಿಕಲ್ ಕಂ., ಬೆಂಗಳೂರು; ಡೈರೆಕ್ಟರ್, ಬೆಂಗಾಲ್ ಎಲೆಕ್ಟ್ರಿಕ್ ಲ್ಯಾಂಪ್ ವರ್ಕ್ಸ್ ಲಿ., ಕಲ್ಕತ್ತಾ. ಅಧ್ಯಕ್ಷರು, ಮೈಸೂರು ವಾಣಿಜ್ಯ ಸಂಸ್ಥೆ, 1949. ಮೈಸೂರು ರಾಜ್ಯಾಂಗ ಸಭೆಯ ಸದಸ್ಯರು 1948-49. ಮೈಸೂರು ಅಸೆಂಬ್ಲಿ ಸದಸ್ಯರು 1950-51. 1952ರಲ್ಲಿ ಜಪಾನಿನಲ್ಲಿ ಅಲ್ಲಿಯ ಕೈಗಾರಿಕೆ ಅಭಿವೃದ್ಧಿಯನ್ನು ಅಭ್ಯಸಿಸಲು ಪ್ರವಾಸ ಮಾಡಿದರು. ವಿಳಾಸ: 'ಇಂಡಿಯಾ ಹೌಸ್', 17ನೇ ಕ್ರಾಸ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3. ಫೋನ್ 2995.

ಆಲ್‌ಬುಕರ್ಕ್, ಮೇರಿ ಕ್ಲೇರ್, ಜನನ ಜೂನ್ 12, 1891; ಮೆಟರ್ನಿಟಿ ಆಸ್ಪತ್ರೆಗೆ ಆಸಿಸ್ಟೆಂಟ್ ಸರ್ಜನರಾಗಿ ಸೇರಿದ್ದು 1919ರಲ್ಲಿ. ಮೆಡಿಕಲ್ ಕಾಲೇಜಿನಲ್ಲಿ ಮಿಡ್‌ವೈಫರಿ ಪ್ರೊಫೆಸರಾದುದು 1927ರಲ್ಲಿ. ಮೆಡಿಕಲ್ ಸ್ಕೂಲಿನ ಪ್ರಿನ್ಸಿಪಾಲರಾದುದು 1939ರಲ್ಲಿ. ಮಹಿಳಾ ಆಸ್ಪತ್ರೆಗಳ ಚೀಫ್ ಮೆಡಿಕಲ್ ಆಫೀಸರು 1941. ಮೂರಾವರ್ತಿ ಕೈಸರ್ ಇ ಹಿಂದ್ ಪದಕ ದೊರೆತಿವೆ. 1946ರಲ್ಲಿ ಶಸ್ತ್ರ ವೈದ್ಯ ಪ್ರವೀಣೆಯೆಂಬ ಬಿರುದು. 1948ರಲ್ಲಿ ಸರಕಾರಿ ಹುದ್ದೆಯಿಂದ ನಿವೃತ್ತಿ. ಅನಂತರ ಧನ್ವಂತರಿ ನರ್ಸಿಂಗ್ ಹೋಂ ಸ್ಥಾಪನೆ. ವಿಳಾಸ: ಕಲಾಸಿಪಾಳ್ಯಂ, ಬೆಂಗಳೂರು-2; ಫೋನ್-3089.

ಈಶ್ವರಿ ಪ್ರಸಾದ್, ಕೆ., ಬೆಂಗಳೂರಿನ ಬೊಂಬಾಯಿ ಆನಂದ ಭವನದ ಮಾಲೀಕರು. ಜನ್ಮ 1922; ವಿದ್ಯಾಭ್ಯಾಸಾನಂತರ 1941 ರಲ್ಲಿ ವ್ಯಾಪಾರ ಪ್ರವೇಶಿಸಿದರು; ನಿವಾಸ: ಕಾನಕಾನಹಳ್ಳಿ ರಸ್ತೆ, ಬಸವನಗುಡಿ, ಬೆಂಗಳೂರು-4.

ಐಯ್ಯಂಗಾರ್, ಎನ್.ಎ., ಮೈಸೂರಿನ ನಿವೃತ್ತ ಸೀನಿಯರ್ ಸರ್ಜನ್; ಜನ್ಮ 1894; ವಿದ್ಯಾಭ್ಯಾಸಾನಂತರ 1923ರಲ್ಲಿ ಆಸಿಸ್ಟೆಂಟ್ ಸರ್ಜನರಾಗಿ ಮೈಸೂರು ಸರ್ವಿಸಿಗೆ ಪ್ರವೇಶ; 1933ರಲ್ಲಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ಬಡ್ತಿ; 1948 ರಿಂದ 49ರವರೆಗೆ ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರ್.

ಕರಿಬಸಪ್ಪ ಅಲ್ಲಂ, ಪ್ರಮುಖ ಹತ್ತಿ ವ್ಯಾಪಾರಿ. ವರ್ತಕ ಸಂಸ್ಥೆಯ ಕಾರ್ಯದರ್ಶಿ. ಕರ್ನಾಟಕ ಕ್ರಿಯಾಸಮಿತಿ ಮುಖ್ಯ

ಸದಸ್ಯರಲ್ಲೊಬ್ಬರು. ಧರ್ಮಿಷ್ಠರು. ವಿಳಾಸ: ಬಳ್ಳಾರಿ.

ಕರಿಬಸವಶಾಸ್ತ್ರಿ, ಕೆ. ಎಂ., ಕವಿಗಳು, ಕನ್ನಡ ಮತ್ತು ತೆಲಗು ಸಾಹಿತ್ಯ ಪಂಡಿತರು. ಪತ್ರಿಕೋದ್ಯಮಿಗಳು. ಅಧ್ಯಾಪಕರು. 1882ರಲ್ಲಿ ಜನನ. ತಂದೆ ವಿದ್ವಾನ್ ಶಿವಲಿಂಗ ಮೂರ್ತಿ. ತಂದೆಯವರಲ್ಲಿಯೂ ರಾಘವ ಶಾಸ್ತ್ರಿಗಳಲ್ಲಿಯೂ ವ್ಯಾಸಂಗ ಮಾಡಿದರು. ವಿಳಾಸ : ಬಳ್ಳಾರಿ.

ಕಲ್ಯಾಣಮ್ಮ ಶ್ರೀಮತಿ ಆರ್., ಸರಸ್ವತಿ ಮಾಸಪತ್ರಿಕೆಯ ಸಂಪಾದಕಿ ; ವ್ಯವಸ್ಥಾಪಕರು, ಅಖಿಲ ಕರ್ಣಾಟಕ ಮಕ್ಕಳ ಕೂಟ; ಸಮಾಜ ಸುಧಾರಣಾ ಕೆಲಸಗಾರರು. ಬೆಂಗಳೂರು ನಗರ ಸಭೆಯ ಮತ್ತು ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ವಿಳಾಸ: 30, ಶಂಕರಮಠ ರಸ್ತೆ, ಶಂಕರಪುರ, ಬೆಂಗಳೂರು-4.

ಕಸ್ತೂರಿರಂಗ ಶೆಟ್ಟಿ, ಮಾಲೀಕರು, ಶ್ರೀ ಕೃಷ್ಣಾ ಫ್ಲೋರ್ ಮಿಲ್ಸ್, ಹಳೆತರಗುಪೇಟೆ, ಬೆಂಗಳೂರು ಸಿಟಿ. ವಿದ್ಯಾಭ್ಯಾಸವಾದ ಮೇಲೆ ವ್ಯಾಪಾರಕ್ಕೆ ತೊಡಗಿದರು. 1952ರಲ್ಲಿ ಜಪಾನಿಗೆ ಅಲ್ಲಿಯ ವ್ಯಾಪಾರ ಸ್ಥಿತಿಯನ್ನು ಅಭ್ಯಸಿಸಲು ವಾಣಿಜ್ಯ ಸಂಘದ ನಿಯೋಗದ ಸದಸ್ಯರಾಗಿ ಹೋಗಿದ್ದರು.

ಕಸ್ತೂರಿರಾಜಶೆಟ್ಟಿ, ಆರ್., ಜನ್ಮ 1896, ವಿದ್ಯಾಭ್ಯಾಸವಾದ ಮೇಲೆ ಹಾಸನದ ಸರಕಾರಿ ಹೈಸ್ಕೂಲು ಹೆಡ್ ಮಾಸ್ಟರಾಗಿ ಸೇರಿದುದು 1926ರಲ್ಲಿ ; ಅನಂತರ ಮೈಸೂರು ಮಹಾರಾಜಾ ಹೈಸ್ಕೂಲು, ತುಮಕೂರು ಹೈಸ್ಕೂಲು ಮುಂತಾದ ಕಡೆ ಹೆಡ್ ಮಾಸ್ಟರಾಗಿದ್ದು, 1938ರಲ್ಲಿ ಬೆಂಗಳೂರು ಜಿಲ್ಲಾ ವಿದ್ಯಾಧಿಕಾರಿಯಾದರು ; 1939ರಲ್ಲಿ ವಿದ್ಯಾ ಇಲಾಖೆ ಡೆಪ್ಯುಟಿ ಡೈರೆಕ್ಟರು ; 1948 ರಲ್ಲಿ ವಿದ್ಯಾ ಇಲಾಖೆ ಡೈರೆಕ್ಟರು; ಮೈಸೂರು ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಆಗಿ 1950ರಲ್ಲಿ ನಿವೃತ್ತರಾದರು.

ಕುಪ್ಪುಸ್ವಾಮಿ ನಾಯ್ಡು, ಕೆ., ರಾವ್ ಬಹದ್ದೂರ್; ಮೈಸೂರು ವಾಣಿಜ್ಯ ಸಂಘದ ಅಧ್ಯಕ್ಷರು 1952; ಜನ್ಮ 1908; 1929ರಲ್ಲಿ ವ್ಯಾಪಾರಕ್ಕೆ ಪ್ರವೇಶ; ಮೈಸೂರು ನ್ಯಾಯವಿಧಾಯಕಸಭೆ ಸದಸ್ಯರು 1945-49; 1949ರಲ್ಲಿ ಬ್ರಿಟನ್ ಮತ್ತು ಯೂರೋಪಿನಲ್ಲಿ ಪ್ರವಾಸ; ಹಲವು ವ್ಯಾಪಾರಿ ಸಂಸ್ಥೆಗಳ ಡೈರೆಕ್ಟರು; ವಿಳಾಸ: ಬ್ರಂಟನ್ ರಸ್ತೆ, ಸಿವಿಲ್ ಏರಿಯಾ, ಬೆಂಗಳೂರು-1.

ಕೃಷ್ಣಪ್ಪ, ಎಂ.ವಿ., ಕೇಂದ್ರ ಸರ್ಕಾರದಲ್ಲಿ ಆಹಾರ ಇಲಾಖೆಯ ಉಪಮಂತ್ರಿ; ಜನ್ಮ 1918; ವಿದ್ಯಾಭ್ಯಾಸಾನಂತರ ಕಾಂಗ್ರೆಸ್ ಚಳುವಳಿ ಸೇರಿದರು; 1945-49 ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು; 1948-49ರಲ್ಲಿ ಮೈಸೂರು ರಾಜ್ಯಾಂಗಸಭೆ ಸದಸ್ಯರು; 1950-51ರಲ್ಲಿ ಮೈಸೂರು ವಿಧಾನ ಸಭೆ ಸದಸ್ಯರು; 1952ರ ಜುಲೈ-ಆಗಸ್ಟ್‌ನಲ್ಲಿ ಭಾರತ ಸರ್ಕಾರದ ಆಹಾರ ಇಲಾಖಾ ಮಂತ್ರಿಯ ಪಾರ್ಲಿಮೆಂಟರಿ ಸೆಕ್ರೆಟರಿ. ವಾಸ : ಹೊಸ ಡೆಲ್ಲಿ.

ಕೃಷ್ಣಮೂರ್ತಿ, ಎಂ. ವಿ., ಕಮಿಷರ್ಷ ಅಂಡ್ ಜನರಲ್ ಏಜನ್ಸಿಯ ಮಾಲೀಕರು;

ಮೈಸೂರು ವಾಣಿಜ್ಯ ಸಂಘದ ಅಧ್ಯಕ್ಷರು; ಜನ್ಮ 1907; ವಿದ್ಯಾಭ್ಯಾಸಾನಂತರ ವ್ಯಾಪಾರಕ್ಕಿಳಿದರು; 1947-48ರಲ್ಲಿ ರೈಲ್ವೆ ಅಡ್ವೈಸರಿ ಬೋರ್ಡಿನಲ್ಲಿ ಮೈಸೂರು ವಾಣಿಜ್ಯ ಸಂಘದ ಪ್ರತಿನಿಧಿ; 1942ರಲ್ಲಿ ವಾಣಿಜ್ಯ ಸಂಬಂಧವಾಗಿ ಯೂರೋಪು ಮತ್ತು ಬ್ರಿಟನ್ನಿನಲ್ಲಿ ಪ್ರವಾಸ; ವಿಳಾಸ: ಶ್ರೀ ನರಸಿಂಹರಾಜರಸ್ತೆ, ಬೆಂಗಳೂರು-2.

ಕೃಷ್ಣಮೂರ್ತಿರಾವ್, ಎಸ್. ವಿ., ಕೇಂದ್ರ ರಾಜ್ಯ ಪರಿಷತ್ತಿನ ಉಪಾಧ್ಯಕ್ಷರು; ಜನ್ಮ 1902; ವಿದ್ಯಾಭ್ಯಾಸಾನಂತರ ಅಡ್ವೋಕೇಟರಾದರು ಮತ್ತು ಕಾಂಗ್ರೆಸ್ಸಿಗೆ ಸೇರಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು; 1945-48ರಲ್ಲಿ ಮೈಸೂರು ಪ್ರಜಾಪ್ರತಿನಿಧಿಸಭೆ ಕಾಂಗ್ರೆಸ್ ಪಕ್ಷದ ಉಪನಾಯಕರು; 1947-52 ಭಾರತ ರಾಜ್ಯಾಂಗ ಸಭಾ ಸದಸ್ಯರು ಮತ್ತು ಹಂಗಾಮಿ ಪಾರ್ಲಿಮೆಂಟ್ ಸದಸ್ಯರು; 1948ರಲ್ಲಿ ಬ್ರಿಟನ್ನಿಗೆ ಹೋದ ಪಾರ್ಲಿಮೆಂಟರಿ ನಿಯೋಗದ ಸದಸ್ಯರು; ಪಂ॥ ಜವಾಹರ್‌ಲಾಲ್ ನೆಹ್ರೂರವರ "ಭಾರತ ದರ್ಶನ"ದ ಕನ್ನಡ ಅನುವಾದ ಮಾಡಿದ್ದಾರೆ.

ಕೃಷ್ಣಯ್ಯಶೆಟ್ಟಿ, ಡಿ. ಎನ್., ಲೋಕಸೇವಾನಿರತ; ಜನ್ಮ 1913, ಡಿಂಕ್‌ಸರ್ ಅಂಡ್ ಕಂಪನಿಯ ಮಾಲೀಕರು; ಗ್ರಾಮಾಫೋನ್ ಮತ್ತು ಇತರ ವ್ಯಾಪಾರ; ಹಲವು ಸರಕಾರಿ ಸಮಿತಿಗಳ ಸದಸ್ಯರು, ಸಾರ್ವಜನಿಕ ಸೇವಕರು; ಧರ್ಮಿಷ್ಠರು. ವಿಳಾಸ. ಅವೆನ್ಯೂ ರಸ್ತೆ, ಬೆಂಗಳೂರು-2. ಫೋನ್: 2781.

ಕೃಷ್ಣರಾವ್, ಎ. ಎನ್., ಕಾದಂಬರಿಕಾರರು ಮತ್ತು ನಾಟಕಕಾರರು; ಜನ್ಮ 1908; ಇಂಟರ್‌ಮೀಡಿಯೆಟ್ ವರೆಗೆ ವ್ಯಾಸಂಗ ಮಾಡಿ ಶಾಂತಿನಿಕೇತನಕ್ಕೆ ಹೋಗಿ ಅಲ್ಲಿ ಕೆಲ ಕಾಲ ವ್ಯಾಸಂಗ ಮಾಡಿದರು; 1928ರಲ್ಲಿ ಕಥಾಂಜಲಿ ಮಾಸಪತ್ರಿಕೆ ಸಂಪಾದಕರು; 1936 ರಲ್ಲಿ ವಿಶ್ವವಾಣಿ ಮಾಸಪತ್ರಿಕೆ ಸಂಪಾದಕರು; 1939 ರಲ್ಲಿ ಕನ್ನಡ ನುಡಿ ವಾರಪತ್ರಿಕೆ ಸಂಪಾದಕರು; 1944 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂಪಾದಕರು; ಅನೇಕ ಕಾದಂಬರಿಗಳು, ನಾಟಕಗಳು, ಜೀವನಚರಿತ್ರೆಗಳು, ಪ್ರಬಂಧಗಳು ಮುಂತಾದವುಗಳ ಲೇಖಕರು; ನಿವಾಸ: ಅನ್ನಪೂರ್ಣ, ವಿಶ್ವೇಶ್ವರಪುರ, ಬೆಂಗಳೂರು-2.

ಕೃಷ್ಣರಾವ್ ಸರ್ ಎಂ. ಎನ್., ದಿವಾನ್ ಬಹದ್ದೂರ್ (1924), ರಾಜಕಾರ್ಯಪ್ರಸಕ್ತ (1922), ಮೈಸೂರು ಸರ್ಕಾರದ ನಿವೃತ್ತಿ ಕೌನ್ಸಿಲರ್; ಜನ್ಮ 1877; ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವಿದ್ಯಾಭ್ಯಾಸ; ಮೈಸೂರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ; ಫೈನಾನ್ಷಿಯಲ್ ಸೆಕ್ರೆಟರಿ; ಮೈಸೂರು ಕಬ್ಬಿಣ ಕಾರ್ಖಾನೆಯ ಅಧ್ಯಕ್ಷರು, ಮೈಸೂರು ಎಗ್ಸಿಕ್ಯುಟಿವ್ ಕೌನ್ಸಿಲಿನ ಸದಸ್ಯರು, ಅನಂತರ ಹಂಗಾಮಿ ದಿವಾನರೂ ಆಗಿದ್ದರು. ನಿವಾಸ: ಬಸವನಗುಡಿ, ಬೆಂಗಳೂರು-4.

ಕೃಷ್ಣರಾವ್, ಪಿ. ಎಚ್., ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್ಸ್‌ಟಿಟ್ಯೂಟಿನ ಸೂಪರಿಂಟೆಂಡೆಂಟ್: ಜನಸಂಖ್ಯೆ

ಬಗ್ಗೆ ವಿಶ್ವಸಂಸ್ಥೆಯ ಆಫೀಸರ್ ಆಗಿದ್ದರು. ಜನ್ಮ 1892; ವಿದ್ಯಾಭ್ಯಾಸಾನಂತರ 1916 ರಲ್ಲಿ ಮೈಸೂರು ಸರಕಾರದ ಸರ್ವಿಸ್ ಪ್ರವೇಶ; 1931ರಲ್ಲಿ ಬೆಂಗಳೂರು ಮುನಿಸಿಪಲ್ ಕಮಿಷನರ್; 1937ರಲ್ಲಿ ಸರಕಾರದ ಸ್ಥಳೀಯ ಸಂಸ್ಥೆಗಳ ಇಲಾಖೆ ಸೆಕ್ರೆಟರಿ; 1940-42 ಮೈಸೂರಿನಲ್ಲಿ ಸೇಲ್ಸ್ ಸೂಪರಿಂಟೆಂಡೆಂಟರು; 1944-45 ಆರ್ಥಿಕ ಅಭಿವೃದ್ಧಿಯ ಅಧಿಕಾರಿ; 1944-46 ಭಾರತ ಸರ್ಕಾರದ ಸಿವಿಲ್ ಸಪ್ಲೈಸ್ ಡೆಪ್ಯುಟಿ ಕಂಟ್ರೋಲರ್ ಜನರಲ್; 1947-50 ಹೈದರಾಬಾದಿನ ಮಂತ್ರಿ.

ಕೃಷ್ಣಸ್ವಾಮಿಶೆಟ್ಟಿ, ಬಿ., ಮೈಸೂರು ಸರ್ಕಾರದ ಪ್ರಿಂಟಿಂಗ್, ಸ್ಟೇಷನರಿ ಮತ್ತು ಪಬ್ಲಿಕೇಷನ್ಸ್ ಡೈರೆಕ್ಟರಾಗಿದ್ದರು; ಜನ್ಮ 1898; 1924ರಲ್ಲಿ ಮೈಸೂರು ಸರ್ಕಾರದ ಸರ್ವಿಸ್ ಪ್ರವೇಶ; 1939ರಲ್ಲಿ ಬೆಂಗಳೂರಿನಲ್ಲಿ ಗವರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರಾದರು.

ಕೇಶವಯ್ಯಂಗಾರ್, ಎಸ್., ಅಡ್ವೊಕೇಟ್ ಮತ್ತು ಪಾರ್ಲಿಮೆಂಟಿನ ಸದಸ್ಯರು; ಜನ್ಮ 1903; 1926ರಲ್ಲಿ ಹೈಕೋರ್ಟು ಅಡ್ವೊಕೇಟರಾದರು; ಕಾಂಗ್ರೆಸಿಗೆ ಸೇರಿ ಕೆಲವು ಸಾರಿ ಸೆರೆಮನೆವಾಸ ಅನುಭವಿಸಿದರು; 1950ರಲ್ಲಿ ಬೆಂಗಳೂರು ಮೇಯರ್; 1952ರಲ್ಲಿ ಬೆಂಗಳೂರು ಸಿಟಿ ಕಾಂಗ್ರೆಸ್ ಅಧ್ಯಕ್ಷರು; ನಿವಾಸ: ಬಳೇಪೇಟೆ, ಬೆಂಗಳೂರು-2.

ಕೇಶವಯ್ಯಂಗಾರ್, ಬಿ.ಟಿ., ಮೈಸೂರು ಸರಕಾರದ ನಿವೃತ್ತ ಚೀಫ್ ಸೆಕ್ರೆಟರಿ; ಜನ್ಮ 1888; 1910ರಲ್ಲಿ ಮೈಸೂರು ಸಿವಿಲ್ ಸರ್ವಿಸ್‌ಗೆ ಪ್ರವೇಶ; 1926ರಲ್ಲಿ ಬೆಂಗಳೂರು ಮುನಿಸಿಪಲ್ ಕಮಿಷನರಾದರು; ಅನಂತರ ಶಿವಮೊಗ್ಗ ಡೆಪ್ಯುಟಿ ಕಮಿಷನರಾದರು; ಮೈಸೂರು ಮಹಾರಾಜರಿಂದ ರಾಜಸೇವಾಪ್ರಸಕ್ತ ಬಿರುದು ಬಂದಿದೆ; ನಿವಾಸ: ಬಸವನಗುಡಿ, ಬೆಂಗಳೂರು-4.

ಕೋಟಾ ಕಾಮಾಕ್ಷಯ್ಯಶೆಟ್ಟಿ, ಪ್ರಸಿದ್ಧ ವ್ಯಾಪಾರಿಗಳು, ಮೈಸೂರು ರಸ್ತೆ, ಬೆಂಗಳೂರು ಸಿಟಿ. ಬೆಂಗಳೂರು ನಗರ ಸಭೆ ಮತ್ತು ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದರು. ಮೈಸೂರು ವಾಣಿಜ್ಯ ಸಂಸ್ಥೆಯ ಸದಸ್ಯರು. ಧರ್ಮಿಷ್ಠರು.

ಕೋಟಾ ರಾಮಯ್ಯಶೆಟ್ಟಿ, ವ್ಯಾಪಾರಿಗಳು, ಮೈಸೂರು ರಸ್ತೆ, ಬೆಂಗಳೂರು ಸಿಟಿ. ಬೆಂಗಳೂರು ಕಾರ್ಪೊರೇಷನ್ನಿಗೆ ಮೈಸೂರು ವಾಣಿಜ್ಯ ಸಂಸ್ಥೆಯಿಂದ 1953ರಲ್ಲಿ ಚುನಾಯಿತರಾದರು. 1952ರಲ್ಲಿ ವಾಣಿಜ್ಯಸಂಸ್ಥೆ ನಿಯೋಗದ ಸದಸ್ಯರಾಗಿ ಜಪಾನಿನಲ್ಲಿ ಕೈಗಾರಿಕೆ ಮತ್ತು ವ್ಯಾಪಾರ ಪರಿಸ್ಥಿತಿ ಪರಿಶೀಲನೆಗಾಗಿ ಪ್ರವಾಸ ಮಾಡಿದರು.

ಕೋದಂಡರಾವ್, ಪಿ., ಎಂ. ಎ. (ಆನರ್ಸ್), ಜನ್ಮ 1889; ಬೆಂಗಳೂರು ಸೆಂಟ್ರಲ್ ಕಾಲೇಜು ಲೆಕ್ಚರರ್ 1915-21; ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೆ ಪ್ರವೇಶ 1921; 'ಸರ್ವೆಂಟ್ ಆಫ್ ಇಂಡಿಯಾ' ಪತ್ರಿಕೆ ಸಂಪಾದಕರಾಗಿದ್ದರು; ರೈ॥ ಆ॥ ವಿ. ಎಸ್. ಶ್ರೀನಿವಾಸ

ಶಾಸ್ತ್ರಿಯವರಿಗೆ ಆಪ್ತ ಕಾರ್ಯದರ್ಶಿ 1922 ರಿಂದ 1932ರವರೆಗೆ; ಕೆನ್ಯಾ, ಉಗಾಂಡಾ, ಟಾಂಗನೀಕಕ್ಕೆ ಭೇಟಿ 1929; ಅಸ್ಪೃಶ್ಯತಾ ನಿವಾರಣಾ ಚಳುವಳಿಯಲ್ಲಿ ಗಾಂಧೀಜಿಗೆ ನೆರವು 1932; ಹೊರದೇಶಗಳಲ್ಲಿ ಭಾರತೀಯರ ಸ್ಥಿತಿಗತಿ ಬಗ್ಗೆ ಪರಿಶೀಲನೆಗಾಗಿ 1935 ರಿಂದ 37ರವರೆಗೆ ವಿದೇಶಗಳಲ್ಲಿ ಪ್ರವಾಸ; ಮಲಯಕ್ಕೆ ಭಾರತ ಸರ್ಕಾರದ ನಿಯೋಗಕ್ಕೆ ಸದಸ್ಯರು 1946; ವಿಳಾಸ: ಬಸವನಗುಡಿ, ಬೆಂಗಳೂರು-4.

ಖಲೀಲ್, ಎ. ಎಸ್., ಮೈಸೂರು ಸರ್ಕಾರದ ಸ್ಥಳೀಯ ಸಂಸ್ಥೆ ಇಲಾಖೆಯ ಸೆಕ್ರೆಟರಿ; ಜನ್ಮ 1902; 1929 ರಲ್ಲಿ ರೆವಿನ್ಯೂ ಪ್ರೊಬೇಷನರಾಗಿ ಮೈಸೂರು ಸರ್ವಿಸಿಗೆ ಪ್ರವೇಶ; 1945 ರಲ್ಲಿ ಡೆಪ್ಯುಟಿ ಕಮಿಷನರಾಗಿ ಬಡ್ತಿ, 1946ರಲ್ಲಿ ಸಿವಿಲ್ ಸಪ್ಲೈಸಿನ ಅಡಿಷನಲ್ ಕಂಟ್ರೋಲರ್.

ಗಣಪತಿ ಐಯ್ಯರ್ ಇ. ವಿ., ಜನನ 1899. ಮೈಸೂರಿನ ಸರ್ಕಾರಿ ಅಸಿಸ್ಟೆಂಟ್ ಕಮಿಷನರ್‌ರಾಗಿ 1920 ರಲ್ಲಿ ಸೇರಿದರು. 1940-44ರಲ್ಲಿ ಸರಕಾರಿ ಕೈಗಾರಿಕಾ ಸಂಸ್ಥೆಗಳ ಡೈರೆಕ್ಟರು. 1944-46 ಸಿವಿಲ್ ಸಪ್ಲೈಸ್ ಕಂಟ್ರೋಲರು. ಕೆಲ ಕಾಲ ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ, ಈಗ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖಾ ಡೈರೆಕ್ಟರು ಮತ್ತು ಆರ್ಥಿಕಾಭಿವೃದ್ಧಿ ಯೋಜನೆಗಳ ಕಮಿಷನರ್. 1953ರಲ್ಲಿ ಜಪಾನಿನಲ್ಲಿ ಅಲ್ಲಿಯ ವಿದ್ಯುತ್ ಮತ್ತು ಇತರ ಕೈಗಾರಿಕೆಗಳ ಪರಿಶೀಲನೆಗಾಗಿ ಪ್ರವಾಸ ಮಾಡಿದರು.

ಗವಿಯಪ್ಪ, ಹೆಚ್. ಆರ್., ಜಮೀನ್ದಾರ್, ಮರ್ಚೆಂಟ್, ಗಣಿ ಮಾಲೀಕರು. ಜನನ 1911. ಹಲವು ವರ್ಷಗಳವರೆಗೆ ಅಬ್ಕಾರಿ ಕಂಟ್ರಾಕ್ಟರು. ವಿಳಾಸ: ಬಳ್ಳಾರಿ.

ಗಾದಿಲಿಂಗಪ್ಪ ಜಂತಕಲ್, ಪ್ರಮುಖ ಬಟ್ಟೆ ವ್ಯಾಪಾರಿ. ಕರ್ನಾಟಕ ಕ್ರಿಯಾ ಸಮಿತಿ ಅಧ್ಯಕ್ಷ. ವೀರಶೈವ ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷ. ಬಟ್ಟೆ ವ್ಯಾಪಾರಿ ಸಂಘದ ಅಧ್ಯಕ್ಷ. ವಿಳಾಸ: ಬಳ್ಳಾರಿ.

ಗುಂಡಪ್ಪ, ಎಲ್., ಜನನ 1908. ವಿದ್ಯಾಭ್ಯಾಸ ಮೈಸೂರು ಮಹಾರಾಜಾ ಕಾಲೇಜಿನಲ್ಲಿ. ಕನ್ನಡ ಎಂ. ಎ. ಪದವಿಯನ್ನು 1930ರಲ್ಲಿ ಪಡೆದರು. ವಿಶ್ವವಿದ್ಯಾಲಯದ ಇಂಗ್ಲಿಷ್ ಕನ್ನಡ ನಿಘಂಟಿನ ಕಚೇರಿಯ ಮ್ಯಾನೇಜರಾಗಿ 10 ವರ್ಷ ಕಾಲ ಸೇವೆ ಸಲ್ಲಿಸಿದರು. ಅನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಲೆಕ್ಚರರು. ಕನ್ನಡ ಸಾಹಿತ್ಯದಲ್ಲಿ ಅಧಿಕ ಆಸಕ್ತಿ ಮತ್ತು ಪ್ರಾವೀಣ್ಯತೆ. ಸಂಸ್ಕೃತ ಗ್ರಂಥಗಳ ಭಾಷಾಂತರ ಮತ್ತು ಹಲವು ಸ್ವಂತ ಕೃತಿಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಇವರು ಬರೆದ ಕೆಲವು ಪುಸ್ತಕಗಳು ತಮಿಳಿಗೂ ತರ್ಜುಮೆಯಾಗಿವೆ. ವಿಳಾಸ: 76, ನರಸಿಂಹರಾಜಾ ಕಾಲೊನಿ, ಬೆಂಗಳೂರು-4.

ಗುಂಡಪ್ಪ, ಡಿ. ವಿ., ಗ್ರಂಥಕರ್ತೃಗಳು ಮತ್ತು ಲೇಖಕರು. ವಿದ್ಯಾಭ್ಯಾಸ ಮುಗಿಸಿಕೊಂಡು 'ಕರ್ನಾಟಕ' ಎಂಬ ಇಂಗ್ಲಿಷ್ ಮಾಸಪತ್ರಿಕೆ ಸಂಪಾದಕರಾದರು. 1932ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. 1933-38ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ

ಉಪಾಧ್ಯಕ್ಷರು. ಮೈಸೂರು ನ್ಯಾಯ ವಿಧಾಯಕ ಸಭೆ, ವಿಶ್ವವಿದ್ಯಾಲಯ ಸೆನೆಟ್ ಮತ್ತು ಮೈಸೂರು ರಾಜ್ಯಾಂಗ ಸಭೆ ಸದಸ್ಯರಾಗಿದ್ದರು. ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ (1940) ಮತ್ತು ಸಂಘದ ಅಧ್ಯಕ್ಷರಾಗಿದ್ದರು. ಗೋಖಲೆ ಇನ್ಸ್ಟಿಟ್ಯೂಟಿನ ಸ್ಥಾಪಕರು. ಕೃತಿಗಳು: ಗೋಖಲೆ, ರಂಗಾಚಾರ್ಲು, ವಿದ್ಯಾರಣ್ಯ ವಿಜಯ, ನಿವೇದನ, ಮ್ಯಾಕ್ಬೆತ್, ಮಂಕುತಿಮ್ಮನ ಕಗ್ಗ, ಉಮರನ ಒಸಗೆ, ಸಂಸ್ಕೃತಿ, ಉಪನಿಷತ್, ಅಂತಃಪುರ ಗೀತೆ, ರಾಜ್ಯಶಾಸ್ತ್ರ ಮುಂತಾದವು. ನಿವಾಸ: ನಾಗಸಂದ್ರ ರಸ್ತೆ, ಬಸವನಗುಡಿ, ಬೆಂಗಳೂರು.

ಗುಂಡಪ್ಪಗೌಡ, ಎಚ್. ಬಿ., ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನಿನ ಅಧ್ಯಕ್ಷರು. ಜನನ 1898. ವಿದ್ಯಾಭ್ಯಾಸವಾದ ಮೇಲೆ 1927ರಲ್ಲಿ ಅಡ್ವೊಕೇಟರಾದರು. 1927-49 ರವರೆಗೆ ಮೈಸೂರು ನ್ಯಾಯವಿಧಾಯಕ ಸಭೆ ಸದಸ್ಯರು. 1927-36ರ ವರೆಗೆ ಪ್ರಜಾ ಪ್ರತಿನಿಧಿ ಸಭಾ ಸದಸ್ಯರು. 1948-49ರಲ್ಲಿ ಮೈಸೂರು ರಾಜ್ಯಾಂಗ ಸಭೆ ಸದಸ್ಯರು. 1938ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರು. ಹಲವು ವರ್ಷಗಳ ಕಾಲ ಹಾಸನ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದರು. 1941-45 ರಲ್ಲಿ ಮೈಸೂರು ಮಂತ್ರಿ, 1945-49ರಲ್ಲಿ ಮೈಸೂರು ನ್ಯಾಯವಿಧಾಯಕ ಸಭಾಧ್ಯಕ್ಷರು. ನಿವಾಸ: ಬಸವನಗುಡಿ, ಬೆಂಗಳೂರು.

ಗುಂಡೂರಾವ್ ದೊಡ್ಡಿ, ಬಿ. ಎ., ಬಿ. ಎಲ್., ಅಡ್ವೊಕೇಟ್. ಜನನ 1915ರಲ್ಲಿ. ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ. ಹಿಂದೂಸ್ಥಾನ ಸ್ಕೌಟ್ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿದ್ದರು. ಕರ್ನಾಟಕ ಕ್ರಿಯಾಸಮಿತಿಯ ಮುಖ್ಯ ಸದಸ್ಯರಲ್ಲೊಬ್ಬರು. ವಿಳಾಸ: ಬಳ್ಳಾರಿ.

ಗುಪ್ತ, ಬಿ. ಎನ್., ಪತ್ರಿಕೋದ್ಯೋಗಿ ಮತ್ತು ವ್ಯಾಪಾರಿ. ಜನ್ಮ 1896. ವಿದ್ಯಾಭ್ಯಾಸಾನಂತರ ಪತ್ರಿಕೋದ್ಯೋಗಕ್ಕೆ ಪ್ರವೇಶ. 1930ರಲ್ಲಿ 'ಪ್ರಜಾಮತ' ಕನ್ನಡವಾರ ಪತ್ರಿಕೆ ಆರಂಭಿಸಿದರು. 1932ರಲ್ಲಿ 'ಜನವಾಣಿ' ದಿನ ಪತ್ರಿಕೆ ಆರಂಭಿಸಿದರು. 1937ರಲ್ಲಿ ರಾಜಕೀಯ ಕಾರಣಕ್ಕಾಗಿ ಮೈಸೂರಿನಿಂದ ಗಡೀಪಾರು ಮಾಡಲ್ಪಟ್ಟಿದ್ದು, 1939ರಲ್ಲಿ ಪುನಃ ಬರಲವಕಾಶವಾಯಿತು. ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಕಾಂಗ್ರೆಸ್ ಪಾರ್ಟಿಗೆ ಉಪನಾಯಕರಾಗಿದ್ದರು. 1949-51ರಲ್ಲಿ ಮೈಸೂರು ಬ್ಯಾಂಕಿನ ಡೈರೆಕ್ಟರು. 1952ರಲ್ಲಿ ಜಪಾನಿನಲ್ಲಿ ಪ್ರವಾಸ ಮಾಡಿಬಂದರು. 1953 ರಲ್ಲಿ ಯೂರೋಪಿಗೆ ಹೋಗಿದ್ದರು. ವಿಳಾಸ: ಜಯಚಾಮರಾಜರಸ್ತೆ, ಬೆಂಗಳೂರು-2

ಗುರುದತ್, ಕೆ., ಬಿ. ಎ., ಐ. ಎ. ಎಸ್., ಜನನ 1897; ಮೈಸೂರು ಸರ್ಕಾರಿ ಸರ್ವಿಸಿಗೆ ಸೇರಿದ್ದು ಪ್ರೊಬೇಷನರಿ ಅಸಿಸ್ಟೆಂಟ್ ಕಮೀಷನರಾಗಿ 1920ರಲ್ಲಿ. ಮೈಸೂರು ರಾಜ್ಯಾಂಗ ಸುಧಾರಣಾ ಸಮಿತಿಯ ಕಾರ್ಯದರ್ಶಿ 1938-39. ಮೈಸೂರು ಮಹಾರಾಜರವರ ಪರ್ಸನಲ್ ಸೆಕ್ರೆಟರಿ 1941-43. ಆಹಾರ ಇಲಾಖಾ ಡೈರೆಕ್ಟರು 1946. ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರಾಗಿದ್ದು ನಿವೃತ್ತರಾದರು. 'ಹಿಂದೂ ಸಂಸ್ಕೃತಿ' ಎಂಬ ಇಂಗ್ಲಿಷ್ ಪುಸ್ತಕದ ಕರ್ತೃ.

ಗುರುಪಾದಸ್ವಾಮಿ, ಎಂ. ಎಸ್., ಲೋಕಸಭೆ ಸದಸ್ಯರು; 'ಪ್ರಜಾಮತ' ಪತ್ರಿಕಾ ಸಂಪಾದಕರಾಗಿದ್ದರು. ಜನನ 1913. ವಿದ್ಯಾಭ್ಯಾಸಾ ನಂತರ ಅಡ್ವೋಕೇಟರಾದರು. 1947ರಲ್ಲಿ ಪ್ರಜಾಮತ ಪತ್ರಿಕಾ ಕಚೇರಿ ಸೇರಿದರು. ಮೈಸೂರು ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರು 1951; ಮೈಸೂರು ಪ್ರಜಾ-ಸೋಷಲಿಸ್ಟ್ ಪಾರ್ಟಿಯ ಕಾರ್ಯ ಸಮಿತಿ ಸದಸ್ಯರು. ವಾಸ: ಮೈಸೂರು.

ಗುರುರಾಜಾಚಾರ್, ಕೆ., ಬೆಂಗಳೂರು ನಿಯೋ ಮೈಸೂರು ಕೆಫೆಯ ಮಾಲೀಕರು. ಜನನ 1903. 1916ರಲ್ಲಿ ವ್ಯಾಪಾರ ಆರಂಭಿಸಿದರು. ಮದ್ರಾಸಿನಲ್ಲಿ ಮಾಡರ್ನ್ ಕೆಫೆ ಮತ್ತು ಮೈಸೂರು ಕೆಫೆ ಸ್ಥಾಪಿಸಿದರು. ವಿಳಾಸ: ಗಂಗಾ ನಿವಾಸ, ನೆಹ್ರೂನಗರ, ಬೆಂಗಳೂರು.

ಗುರುಲಿಂಗಯ್ಯ, ಎಸ್.ಆರ್., ಬಿ.ಎ., 1913ರಲ್ಲಿ ಹುಟ್ಟಿದ್ದು. ಮೈಸೂರು ವಿಧಾನ ಪರಿಷತ್ತಿನ ಸದಸ್ಯರು. ಭಾರತ ಸೇವಾದಳದ ಕಾರ್ಯದರ್ಶಿ. ಮೈಸೂರು ರಾಜ್ಯಾಂಗ ಸಭೆ ಮತ್ತು ಅಸೆಂಬ್ಲಿ ಸದಸ್ಯರಾಗಿದ್ದರು. 1930 ರಿಂದ ಕಾಂಗ್ರೆಸ್ ಸದಸ್ಯರು. ವಯಸ್ಕ ಶಿಕ್ಷಣ ಸಮಿತಿಯ ಸದಸ್ಯರಾಗಿದ್ದರು. ವಿಳಾಸ: ದೊಡ್ಡಬಳ್ಳಾಪುರ.

ಗುರುವಾರೆಡ್ಡಿ, ಎಚ್. ಆರ್., ಬೆಂಗಳೂರು ಜಿಲ್ಲಾ ಬೋರ್ಡ್ ಅಧ್ಯಕ್ಷರು. ಜನನ 1896. 1925ರಲ್ಲಿ ಅಡ್ವೋಕೇಟರಾದರು. 1937ರಲ್ಲಿ ಕಾಂಗ್ರೆಸ್ ಸೇರಿದರು. ಬೆಂಗಳೂರು ನಗರಸಭೆ, ಮೈಸೂರು ನ್ಯಾಯ ವಿಧಾಯಕ ಸಭೆ ಮತ್ತು ಭಾರತ ರಾಜ್ಯಾಂಗ ಸಭೆ ಸದಸ್ಯರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯ ಸೆನೆಟ್, ಅಕೆಡೆಮಿ ಕೌನ್ಸಿಲ್ ಮತ್ತು ಕಾರ್ಯಸಮಿತಿ ಸದಸ್ಯರಾಗಿದ್ದರು.

ಗುರುಸ್ವಾಮಿ, ಕೆ. ಎಲ್., ಎಕ್ಸೈಜ್ ಕಂಟ್ರಾಕ್ಟರು. ಜನನ 1901. ರಾವ್ ಸಾಹೇಬ್ ಕೆ. ನೆಟ್ಟಕಲ್ಲಪ್ಪನವರ ಪುತ್ರರು. ಬೆಂಗಳೂರು ಸೆಯಿಂಟ್ ಜೋಸೆಫ್ ಕಾಲೇಜಿನಲ್ಲಿ ವಿದ್ಯಾಭ್ಯಾಸ. 1928 ರಿಂದಲೇ ವ್ಯಾಪಾರ ವ್ಯವಹಾರಗಳ ಜವಾಬ್ದಾರಿ ವಹಿಸಿದರು. ಈಗ ಪ್ರಿಂಟರ್ಸ್ ಲಿಮಿಟೆಡ್ (ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಮಾಲೀಕರು) ಗವರ್ನಿಂಗ್ ಡೈರೆಕ್ಟರು. ಮೈಸೂರು ಸಂಸ್ಥಾನದ ಎಕ್ಸೈಸ್ ಕಂಟ್ರಾಕ್ಟರುಗಳ ಸಂಘದ ಅಧ್ಯಕ್ಷರು. ಆರ್ಯ ಈಡಿಗರ ಸಂಘದ ಹಾಸ್ಟಲಿನ ಅಧ್ಯಕ್ಷರು. ಹಲವಾರು ಧರ್ಮ ಕಾರ್ಯ ಮಾಡಿದ್ದಾರೆ. ನಿವಾಸ ಮತ್ತು ಕಚೇರಿ: ಸುಬ್ಬರಾಮಚೆಟ್ಟಿ ರಸ್ತೆ, ಬಸವನಗುಡಿ, ಬೆಂಗಳೂರು-4. ಫೋನ್ 2339.

ಗೋಪಾಲಕೃಷ್ಣಶೆಟ್ಟಿ, ಯಾದಾಳಂ ಎಸ್., ಶ್ರೀ ಕೃಷ್ಣ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್, ರಾವ-ಕುಮಾರ್ ಮಿಲ್ಸ್ ಮುಂತಾದ ಸಂಸ್ಥೆಗಳ ಯಾಜಮಾನ್ಯದಲ್ಲಿ ಭಾಗಿಗಳು. ಯಾದಾಳಂ ಬ್ರದರ್ಸ್ ಡೈರೆಕ್ಟರು. ವೈಶ್ಯ ಬ್ಯಾಂಕ್, ಮೈಸೂರು ಮಿಷಿನರೀಸ್ ಮುಂತಾದ ಸಂಸ್ಥೆಗಳ ಡೈರೆಕ್ಟರಾಗಿದ್ದರು. 1949-50ರಲ್ಲಿ ಮೈಸೂರು ವಾಣಿಜ್ಯ ಸಂಸ್ಥೆಯ ಅಧ್ಯಕ್ಷರಾಗಿದ್ದರು.

ಗೋಪಾಲಸ್ವಾಮಿ, ಡಾ|| ಎಂ. ವಿ., ಮೈಸೂರು ಮಹಾರಾಜ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರು. ಜನನ 1896. ವಿದ್ಯಾವ್ಯಾಸಂಗ ಮುಗಿದ ನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಮನಶ್ಶಾಸ್ತ್ರ ಮತ್ತು ತರ್ಕಶಾಸ್ತ್ರದ ಪ್ರೊಫೆಸರಾಗಿ 1924ರಲ್ಲಿ ಪ್ರವೇಶ. 1926ರಲ್ಲಿ ಹಾಲೆಂಡಿನಲ್ಲಿ ನಡೆದ ಮನಶ್ಶಾಸ್ತ್ರ ಸಮ್ಮೇಳನಕ್ಕೆ ಹೋಗಿದ್ದರು. 1944ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕ.

ಗೋಪಾಲಸ್ವಾಮಿ ಐಯ್ಯಂಗಾರ್, ಎಂ. ಎ., ಬೆಂಗಳೂರು ಲಾ ಕಾಲೇಜಿನಲ್ಲಿ ಹಿಂದೂ ಲಾ ಪ್ರೊಫೆಸರು ಮತ್ತು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಖಾಯಂ ಕಾರ್ಯದರ್ಶಿ. ಜನನ 1899. 1924ರಲ್ಲಿ ಅಡ್ವೊಕೇಟರಾದರು. ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ. ಮೈಸೂರು ಪ್ರಜಾ ಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಯಲ್ಲಿ ಸದಸ್ಯರಾಗಿದ್ದರು. 1945ರಲ್ಲಿ ಬೆಂಗಳೂರು ಪೌರಸಭಾಧ್ಯಕ್ಷರು. ರಾಜಕೀಯವನ್ನು ಕುರಿತು ಕೆಲವು ಗ್ರಂಥಗಳನ್ನು ಬರೆದಿದ್ದಾರೆ. ವಿಳಾಸ: ಮೂರನೇ ಕ್ರಾಸ್, ಶಂಕರಪುರ, ಬೆಂಗಳೂರು-4

ಗೋವಿಂದರೆಡ್ಡಿ, ಎಂ., ಕೇಂದ್ರ ರಾಜ್ಯ ಪರಿಷತ್ತಿನ ಸದಸ್ಯರು. ಜನನ 1907. 1935ರಿಂದ ಅಡ್ವೊಕೇಟರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ತುರಂಗವಾಸ ಅನುಭವಿಸಿದರು; ಮೈಸೂರು ರಾಜ್ಯಾಂಗ ಸಭೆ ಮತ್ತು ವಿಧಾನ ಸಭೆ ಸದಸ್ಯರಾಗಿದ್ದರು. ಇಂಡಿಯ ಪಬ್ಲಿಕೇಷನ್ಸ್ ಲಿಮಿಟೆಡ್‌ನ ಡೈರೆಕ್ಟರು. ನಿವಾಸ: ಚಿತ್ರದುರ್ಗ.

ಚನ್ನಪ್ಪ ಬೆಲ್ಲದ, ಭಾರಿ ವ್ಯಾಪಾರಿಗಳು. ಕಾಂಗ್ರೆಸ್ಸಿನವರು. ಸ್ವರಾಜ್ಯಕ್ಕಾಗಿ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದಾರೆ. ವಿಳಾಸ: ಹೊಸಪೇಟೆ, ಬಳ್ಳಾರಿ ಜಿಲ್ಲೆ.

ಚನ್ನಬಸಪ್ಪ, ಎಚ್. ಎಂ., ಅಧ್ಯಕ್ಷರು, ಮೈಸೂರು ಜಿಲ್ಲಾ ಬೋರ್ಡು. ಮೈಸೂರು ವಿಧಾನ ಸಭೆ ಸದಸ್ಯರು 1950-51. ಮೈಸೂರು ರಾಜ್ಯಾಂಗ ಸಭೆ ಸದಸ್ಯರು 1948-49. ಮೈಸೂರು ನ್ಯಾಯವಿಧಾಯಕ ಸಭೆ ಸದಸ್ಯರು 1945-49. ಪ್ರಮುಖ ಕಾಂಗ್ರೆಸ್‌ನವರು. ವಿಳಾಸ: ವಾಣಿವಿಲಾಸ ಪುರಂ, ಮೈಸೂರು.

ಚನ್ನಯ್ಯ, ಎಸ್., ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಮತ್ತು ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರು. ವಿದ್ಯಾಭ್ಯಾಸಾನಂತರ ಸಾರ್ವಜನಿಕ ಜೀವನ ಪ್ರವೇಶಿಸಿ, ಕಾಂಗ್ರೆಸ್ ಸೇರಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ, ಅನೇಕಾವರ್ತಿ ತುರಂಗವಾಸ ಅನುಭವಿಸಿದರು. ವಿಳಾಸ: ನಜರ್ ಬಾದ್, ಮೈಸೂರು ನಗರ.

ಚನ್ನಯ್ಯ, ಟಿ., ಮೈಸೂರಿನ ಸ್ಥಳೀಯ ಸಂಸ್ಥೆಗಳ ಮಂತ್ರಿ. ಜನ್ಮ 1912. ಸೆಂಟ್ರಲ್ ಕಾಲೇಜಿನಲ್ಲಿ ಪದವೀಧರರಾಗಿ ಸರಕಾರಿ ಸರ್ವಿಸ್ ಸೇರಿದರು. ಆದರೆ 1944ರಲ್ಲಿ ಸರ್ವಿಸಿಗೆ ರಾಜೀನಾಮೆಯಿತ್ತು ಸಾರ್ವಜನಿಕ ಜೀವನ ಪ್ರವೇಶಿಸಿದರು. ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದ

ಸ್ಯರು 1945-47. ಭಾರತ ರಾಜ್ಯಾಂಗ ಸಭೆಯ ಸದಸ್ಯರು 1947-49. ಪಾರ್ಲಿಮೆಂಟಿನ ಸದಸ್ಯರು 1950-51. 1947ರಲ್ಲಿ ಕಾಂಗ್ರೆಸಿಗೆ ಪ್ರವೇಶ. 1952ರಲ್ಲಿ ಮೈಸೂರು ವಿಧಾನ ಸಭೆಗೆ ಚುನಾಯಿತರಾದರು. ನಿವಾಸ: ಹೈ ಗ್ರೌಂಡ್ಸ್, ಬೆಂಗಳೂರು.

ಚನ್ನಿಗರಾಮಯ್ಯ, ಆರ್., ಮೈಸೂರು ವಿಧಾನ ಸಭೆಯ ಉಪಾಧ್ಯಕ್ಷರು. ಜನ್ಮ 1911. ವಿದ್ಯಾಭ್ಯಾಸಾನಂತರ 1932ರಲ್ಲಿ ಸಾರ್ವಜನಿಕ ಜೀವನ ಪ್ರವೇಶ. 12 ವರ್ಷ ಕಾಲ ತುಮಕೂರು ಜಿಲ್ಲಾ ಬೋರ್ಡು ಸದಸ್ಯರು. ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು 1934-37. ಮೈಸೂರು ನ್ಯಾಯ ವಿಧಾಯಕ ಸಭೆ ಸದಸ್ಯರು 1938-49. ಮೈಸೂರು ರಾಜ್ಯಾಂಗ ಸಭೆ ಸದಸ್ಯರು 1948-49. 1940ರಲ್ಲಿ ಕಾಂಗ್ರೆಸ್ ಪ್ರವೇಶ. ಸತ್ಯಾಗ್ರಹ ಚಳುವಳಿಯಲ್ಲಿ ತುರಂಗವಾಸ. 1947-52 ರಲ್ಲಿ ಮೈಸೂರು ಸ್ಥಳೀಯ ಸಂಸ್ಥೆಗಳ ಮಂತ್ರಿ. ವಿಳಾಸ: ಕೊರಟಗೆರೆ, ತುಮಕೂರು ಜಿಲ್ಲೆ.

ಚಂದ್ರಶೇಖರ ಐಯ್ಯರ್, ಕೆ. ಎಸ್., ನಿವೃತ್ತ ಚೀಫ್ ಜಸ್ಟಿಸರು. ಜನ್ಮ 1869. 1892ರಲ್ಲಿ ಅಸಿಸ್ಟೆಂಟ್ ಕಮೀಷನರಾಗಿ ಮೈಸೂರು ಸರ್ಕಾರದ ಸರ್ವಿಸಿಗೆ ಪ್ರವೇಶ. 1904 ರಲ್ಲಿ ಬೆಂಗಳೂರು ಸೆಷನ್ಸ್ ಜಡ್ಜರಾದರು. 1907ರಲ್ಲಿ ಮೈಸೂರು ಹೈಕೋರ್ಟ್ ಜಡ್ಜರು, ಅನಂತರ ಚೀಫ್ ಜಸ್ಟಿಸರಾಗಿ ನಿವೃತ್ತರಾದರು. ರಾಜಧರ್ಮ ಪ್ರವೀಣ ಮತ್ತು ದಿವಾನ್ ಬಹದ್ದೂರ್ ಬಿರುದುಗಳು ಬಂದಿವೆ. ಸರ್ಕಾರ ನೇಮಿಸಿದ ಸಹಕಾರ ಮತ್ತು ಜೈಲು ಸುಧಾರಣೆ ಸಮಿತಿಗಳ ಅಧ್ಯಕ್ಷರಾಗಿದ್ದರು.

ಚಂದ್ರಶೇಖರ ಭಾರತಿ, ಜಗದ್ಗುರು, ಶೃಂಗೇರಿ ಮಠ. ಜನನ ಶೃಂಗೇರಿಯಲ್ಲಿ 1892ರಲ್ಲಿ. ಶೃಂಗೇರಿಯಲ್ಲಿಯೇ ಪ್ರಾಚೀನ ಸಾಹಿತ್ಯ, ತರ್ಕ ಮತ್ತು ತತ್ವಶಾಸ್ತ್ರಗಳ ವಿದ್ಯಾಭ್ಯಾಸ. 1912ರಲ್ಲಿ ಶೃಂಗೇರಿ ಮಠಾಧೀಶರಾದರು. 1924-27ರಲ್ಲಿ ಭಾರತದ ಪ್ರವಾಸ.

ಚಂದ್ರಶೇಖರಯ್ಯ, ಡಿ. ಎಚ್., ಜಿಲ್ಲಾ ಬೋರ್ಡುಗಳ ಭವಿಷ್ಯ ನಿರ್ಧರಿಸಲು ಮೈಸೂರು ಸರ್ಕಾರ 1953ರಲ್ಲಿ ನೇಮಿಸಿದ ಕಮಿಟಿಯ ಅಧ್ಯಕ್ಷರು. ಜನ್ಮ 1896. 1923ರಲ್ಲಿ ಅಡ್ವೊಕೇಟರಾದರು. 1924 ರಿಂದ 41ರ ವರೆಗೆ ಮೈಸೂರು ನ್ಯಾಯ ವಿಧಾಯಕ ಸಭಾ ಸದಸ್ಯರು. 1941-45 ಮೈಸೂರು ನ್ಯಾ. ವಿ. ಸಭೆ ಅಧ್ಯಕ್ಷರು. 1947-49 ಮೈಸೂರು ವಿದ್ಯಾಮಂತ್ರಿ. 1951 ರಿಂದ ಮೈಸೂರು ಬ್ಯಾಂಕ್ ವಕೀಲಿ ಸಲಹೆಗಾರರು.

ಚಂದ್ರಶೇಖರಯ್ಯ, ಟಿ., ಬಿ. ಎ., ಎಂ. ಬಿ. ಬಿ. ಎಸ್., ಎಂ. ಸಿ. ಹೆಚ್., ಮೈಸೂರು ಸರ್ಕಾರದ ಆರೋಗ್ಯ ಇಲಾಖೆಯ ಡೈರೆಕ್ಟರು. 1900ರಲ್ಲಿ ಹುಟ್ಟಿದ್ದು. ವ್ಯಾಸಂಗ ಮುಗಿಸಿಕೊಂಡು ಸರ್ಕಾರಿ ಕೆಲಸವನ್ನು ಹೆಲ್ತ್ ಆಫೀಸರಾಗಿ 1928ರಲ್ಲಿ ಸೇರಿದರು. 1946 ರಲ್ಲಿ ಡೆಪ್ಯುಟಿ ಡೈರೆಕ್ಟರಾಗಿ ಬಡ್ತಿ ಹೊಂದಿದರು. 1948ರಲ್ಲಿ ಡೈರೆಕ್ಟರಾದರು.

ಚಾಂಡಿ ಜಾರ್ಜ್, ಎಂ. ಎಸ್. ಇ. ಇ., ಮೈಸೂರು ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನೀಯರ್. 1904ರಲ್ಲಿ ಹುಟ್ಟಿದ್ದು. ವ್ಯಾಸಂಗ ಮುಗಿಸಿ 1932ರಲ್ಲಿ ಸರ್ಕಾರಿ ಕೆಲಸ ಸೇರಿದರು. ಲೈನ್ಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್. ಅನಂತರ ಬಿ.ಪಿ.ಎಲ್. ಸೂಪರಿಂಟೆಂಡೆಂಟ್ ಆಗಿದ್ದರು. ಶಿವಸಮುದ್ರದಲ್ಲಿ ಜನರೇಷನ್ ಸೂಪರಿಂಟೆಂಡೆಂಟಾಗಿದ್ದರು.

ಚೌಡಯ್ಯ, ಟಿ., ಸಂಗೀತರತ್ನ ; ಸಂಗೀತಗಾರರು ಮತ್ತು ಮೈಸೂರು ವಿಧಾನ ಮಂಡಲಿಯ ಸದಸ್ಯರು. ಗಾನವಿಶಾರದ ಬಿಡಾರ ಕೃಷ್ಣಪ್ಪನವರ ಶಿಷ್ಯರು. 'ವಾಣಿ' ಕನ್ನಡ ಚಿತ್ರದಲ್ಲಿ ಪಾತ್ರ ವಹಿಸಿದ್ದಾರೆ. ಬೆಂಗಳೂರಿನಲ್ಲಿ ಅಯ್ಯನಾರ್ ಸಂಗೀತ ಕಲಾಶಾಲೆಯ ಸ್ಥಾಪಕರು; ವಿಳಾಸ : ಮೈಸೂರು.

ಜಯಂತಿಲಾಲ್ ಥಾಕುರ್, ಮಾಲೀಕರು, ಬೆಂಗಳೂರು ಫೇಮಸ್ ಪಿಕ್ಚರ್ಸ್ ಮತ್ತು ಪ್ರಭಾತ್ ಟಾಕೀಸ್ ; ಜನ್ಮ 1899; ವಿದ್ಯಾಭ್ಯಾಸ ಮುಗಿಸಿಕೊಂಡು ಬೊಂಬಾಯಿಯಲ್ಲಿ ಪಾತೆ (ಇಂಡಿಯಾ) ಮತ್ತು ಯೂನಿವರ್ಸಲ್ ಪಿಕ್ಚರ್ ಕಾರ್ಪೊರೇಷನ್ (ಅಮೆರಿಕಾ) ಈ ಸಂಸ್ಥೆಯನ್ನು 1928ರಲ್ಲಿ ಪ್ರವೇಶಿಸಿದರು ; 1929ರಲ್ಲಿ ಫೇಮಸ್ ಪಿಕ್ಚರ್ಸ್ ಸ್ಥಾಪಿಸಿದರು ; 1940ರಲ್ಲಿ ಬೆಂಗಳೂರು ಪ್ರಭಾತ್ ಟಾಕೀಸ್ ಸ್ಥಾಪನೆ ; ವಿಳಾಸ: ಕೆಂಪೇಗೌಡ ರಸ್ತೆ, ಬೆಂಗಳೂರು-2.

ಜಯಚಾಮರಾಜ ಒಡೆಯರ್ ಬಹದ್ದೂರ್ ; ಜಿ.ಸಿ.ಬಿ., ಜಿ.ಸಿ.ಎಸ್.ಐ., ಮೈಸೂರಿನ ರಾಜಪ್ರಮುಖರು ; ಜನನ 1919 ; ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವಿದ್ಯಾಭ್ಯಾಸ ; 1938ರಲ್ಲಿ ಬಿ. ಎ. ಪದವೀಧರರು ; 1940ರ ಆಗಸ್ಟಿನಲ್ಲಿ ಮೈಸೂರಿನ ರಾಜಗದ್ದುಗೆಯನ್ನೇರಿದರು ; 1940ರ ಸೆಪ್ಟೆಂಬರಿನಿಂದ ಪೂರ್ಣ ಆಡಳಿತಾಧಿಕಾರ ವಹಿಸಿಕೊಂಡರು ; ದೂರ ಪ್ರಾಚ್ಯ ಮತ್ತು ಯೂರೋಪಿನಲ್ಲಿ ಪ್ರವಾಸ ಮಾಡಿದ್ದಾರೆ ; ಸಂಗೀತಗಾರರು ಮತ್ತು ಅಶ್ವಾರೋಹಿಗಳು ; ಮೈಸೂರು ರಾಜಪ್ರಮುಖರಾಗಿ 1950ರಲ್ಲಿ ನೇಮಿತರಾದರು ; ಭಾರತದಲ್ಲಿ ವನ್ಯ ಮೃಗಗಳ ರಕ್ಷಣೆಗಾಗಿ ಭಾರತ ಸರಕಾರ ರಚಿಸಿರುವ ಸಮಿತಿಗೆ ಅಧ್ಯಕ್ಷರು; ವಿಳಾಸ : ಅರಮನೆ, ಮೈಸೂರು.

ಜಾರ್ಜ್ ಮ್ಯಥ್ಯ, ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನಿನ ಸದಸ್ಯರು; ಜನ್ಮ 1901; 1927ರಲ್ಲಿ ಮೈಸೂರಿನ ರೆವಿನ್ಯೂ ಪ್ರೊಬೇಷನರಾದರು, 1950-51ರಲ್ಲಿ ಮೈಸೂರು ಸರ್ಕಾರದ ವಿದ್ಯಾ ಇಲಾಖಾ ಸೆಕ್ರೆಟರಿ.

ಜೀನಭಾಯಿ ದೇವಿದಾಸ್, ಮಾಲೀಕರು ದೇವಿದಾಸ್ ಅಂಡ್ ಕಂಪೆನಿ, ಮತ್ತು ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನಿನ ಸದಸ್ಯರು ; ಜನ್ಮ 1914; 1936ರಲ್ಲಿ ವ್ಯಾಪಾರಕ್ಕಿಳಿದರು; ಬೆಂಗಳೂರು ಹೋಲ್ ಸೇಲ್ ವ್ಯಾಪಾರಿಗಳ ಸಂಘದ ಅಧ್ಯಕ್ಷರು 1943 ರಿಂದ; ಮೈಸೂರು ವಾಣಿಜ್ಯ ಸಂಘದ ಕಾರ್ಯಸಮಿತಿ ಸದಸ್ಯರು 1947ರಿಂದ ; ನಿವಾಸ : 10 ಅಲಸೂರು ರಸ್ತೆ, ಬೆಂಗಳೂರು 1 ; ಕಚೇರಿ : ಚಿಕ್ಕಪೇಟೆ, ಬೆಂಗಳೂರು-2.

ಜೀವಣ್ಣರಾವ್ ಕೆ., ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷರು 1950 ರಿಂದ; 'ಸತ್ಯ' ಪತ್ರಿಕೆ ಸಂಪಾದಕರು 1953 ರಿಂದ; ವಿದ್ಯಾಭ್ಯಾಸ ಮುಗಿಸಿಕೊಂಡು ಪತ್ರಿಕೋದ್ಯೋಗ ಪ್ರವೇಶಿಸಿದರು; 'ತಾಯಿನಾಡು' ಉಪ ಸಂಪಾದಕರು, ಜನವಾಣಿ ಮತ್ತು ಪ್ರಜಾಮತ ಪತ್ರಿಕೆಗಳ ಸಂಪಾದಕರಾಗಿದ್ದರು; 'ಕಾಲಚಕ್ರ' ವಾರಪತ್ರಿಕೆ ಸ್ಥಾಪಿಸಿ ಸ್ವಲ್ಪ ಕಾಲ ನಡೆಸಿದರು; ಮೈಸೂರು ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರಾಗಿದ್ದರು; ವಿಳಾಸ: ಮಾವಳ್ಳಿ, ಬೆಂಗಳೂರು-2.

ಜೋಳದರಾಶಿ ದೊಡ್ಡನಗೌಡ, ನಟ, ಸಂಗೀತಗಾರ, ಗಮಕಿ. ಟಿ. ರಾಘವರ ಪಟ್ಟ ಶಿಷ್ಯರಾಗಿದ್ದರು. ರಸವರ್ಷ ಎಂಬ ಕವನ ಸಂಗ್ರಹ ಪ್ರಕಟಿಸಿದ್ದಾರೆ. ವಿಳಾಸ: ಬಳ್ಳಾರಿ.

ದಾಸಪ್ಪ, ಎಚ್.ಸಿ., ಮೈಸೂರಿನ ಮಾಜಿ ಮಂತ್ರಿ; ಜನ್ಮ 1894; ವಿದ್ಯಾಭ್ಯಾಸ ಮುಗಿಸಿಕೊಂಡು 1919ರಲ್ಲಿ ಅಡ್ವೊಕೇಟರಾದರು; ಪ್ರಜಾಪ್ರತಿನಿಧಿ ಸಭೆ ಸದಸ್ಯರು 1922; ನ್ಯಾಯ ವಿಧಾಯಕ ಸಭೆ ಸದಸ್ಯರು 1922–38; 1937ರಲ್ಲಿ ಕಾಂಗ್ರೆಸ್ ಸೇರಿದರು; 1939ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರು; ಮಹಾತ್ಮಾ ಗಾಂಧಿಯವರ ಆಹ್ವಾನದ ಮೇಲೆ ಸೇವಾ ಗ್ರಾಮಕ್ಕೆ ಎರಡು ಸಾರಿ ಹೋಗಿದ್ದರು; ಮೈಸೂರು ಹಣಕಾಸು ಮತ್ತು ಕೈಗಾರಿಕಾ ಮಂತ್ರಿ 1947-52; ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು 1952.

ದ್ಯಾವೇಗೌಡ, ಎಂ.ಎಸ್., ಲೋಕಸೇವಾನಿರತ; ಕಾಫಿ ಪ್ಲಾಂಟರು ಮತ್ತು ಶಂಕರ್ ಮೋಟಾರ್ ಕಂ. ಮಾಲೀಕರು; ಜನ್ಮ 1900; ಮೈಸೂರು ಪ್ರಜಾ ಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆ ಸದಸ್ಯರಾಗಿದ್ದರು: ಹಲವು ವ್ಯಾಪಾರಿ ಸಂಸ್ಥೆಗಳ ಡೈರೆಕ್ಟರು; ದಾನ ಶೀಲರು, ಒಂದು ಲಕ್ಷ ರೂ. ಗಿಂತ ಹೆಚ್ಚು ದಾನ ಮಾಡಿದ್ದಾರೆ; ವಿಳಾಸ: ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.

ದೇವನಾಥ್, ಸಿ. ಜೆ., ಅಡ್ವೊಕೇಟ್ ಮತ್ತು ಮೈಸೂರು ವಿಧಾನ ಪರಿಷತ್ತಿನ ಸದಸ್ಯರು. 1921ರಲ್ಲಿ ಜನನ. 1942ರಲ್ಲಿ ಬಿ. ಎ. ಮಾಡಿದರು. ಅನಂತರ ಎಲ್ಎಲ್. ಬಿ. ಮಾಡಿದರು. 1945ರಲ್ಲಿ ಅಡ್ವೊಕೇಟರಾದರು. ಕಾರ್ಮಿಕ ಕ್ಷೇತ್ರದಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ಸಂಸ್ಥಾನದ ಆಟೊಮೊಬೈಲ್ ವರ್ಕರ್ಸ್ ಸಂಘದ ಅಧ್ಯಕ್ಷರು. ಐ ಎನ್. ಟಿ. ಯು. ಸಿ. ಮೈಸೂರು ಶಾಖೆಯ ಉಪಾಧ್ಯಕ್ಷರು. ರೈತರ ಏಳಿಗೆಗಾಗಿಯೂ ದುಡಿಯುತ್ತಿದ್ದಾರೆ. ಮೈಸೂರು ಜಿಲ್ಲಾ ರೈತ ಸಂಘದ ಸ್ಥಾಪಕರಲ್ಲೊಬ್ಬರು. ವಾಸ: ಒಂಟಿಕೊಪ್ಪಲು, ಮೈಸೂರು.

ದೇವುಡು ನರಸಿಂಹ ಶಾಸ್ತ್ರಿ, ಜನ್ಮ 1896; ಎಂ. ಎ. ಪರೀಕ್ಷೆ ಆದ ಮೇಲೆ ಬೆಂಗಳೂರು ಶಂಕರ ಮಠ ಕಾಲೇಜಿನಲ್ಲಿ ಪೂರ್ವ ಮೀಮಾಂಸವನ್ನು ಸಿ. ಸುಬ್ಬರಾವ್ ರೀಸರ್ಚ್ ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡಿದರು; ಶಿಕ್ಷಣ ಮತ್ತು ಪತ್ರಿಕೋದ್ಯೋಗ ಪ್ರವೇಶಿಸಿದರು; ಕೆಲವು ನಾಟಕ

ಗಳಲ್ಲೂ ಚಲನ ಚಿತ್ರಗಳಲ್ಲೂ ಪಾತ್ರವಹಿಸಿದ್ದಾರೆ; ಕನ್ನಡದಲ್ಲಿ ಹಲವು ಪುಸ್ತಕಗಳನ್ನು ರಚಿಸಿದ್ದಾರೆ; 1936ರಲ್ಲಿ 'ನಮ್ಮ ಪುಸ್ತಕ' ಎಂಬ ಮಕ್ಕಳ ಮಾಸಿಕ ಆರಂಭಿಸಿದರು; 1940ರಲ್ಲಿ ಗಾಂಧಿನಗರ ಹೈಸ್ಕೂಲ್ ಸ್ಥಾಪಿಸಿದರು; ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯರು 1944-45, ಅಖಿಲ ಕರ್ನಾಟಕ ಕಾದಂಬರಿಕಾರರ ಸಮ್ಮೇಳನಾಧ್ಯಕ್ಷರು 1952; ವಿಳಾಸ: 4, ಶಂಕರಮಠ, ಶಂಕರಪುರ, ಬೆಂಗಳೂರು-4.

ಧರ್ಮಪ್ಪ, ವೈ., ಅಡ್ವೊಕೇಟ್ ಮತ್ತು ಹಾಸನ ಜಿಲ್ಲಾ ಬೋರ್ಡಿನ ಅಧ್ಯಕ್ಷರು; ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಸದಸ್ಯರು; ಜನ್ಮ 1904; ವಿದ್ಯಾಭ್ಯಾಸ ಮುಗಿಸಿಕೊಂಡು 1928ರಲ್ಲಿ ಅಡ್ವೊಕೇಟರಾದರು; ಹಾಸನ ಜಿಲ್ಲಾ ಬೋರ್ಡಿನ ಅಧ್ಯಕ್ಷರು 1940-44; ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯರು 1940-49; ಪ್ರಜಾಸೋಷಲಿಸ್ಟ್ ಪಾರ್ಟಿಯ ಪ್ರಮುಖ ಸದಸ್ಯರು; ವಿಳಾಸ: ಹಾಸನ.

ಧೋಂಡೂಸ, ಎಸ್., ಕೈಗಾರಿಕೋದ್ಯಮಿ ಮತ್ತು ಅಬ್ಕಾರಿ ಕಂಟ್ರಾಕ್ಟರು. 1894ರಲ್ಲಿ ಜನನ. ಧೊಂಡೂಸ ಗೋಲ್ಡ್ ಥ್ರೆಡ್ ಅಂಡ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ ಸ್ಥಾಪಕರು. ಪ್ರಿಂಟರ್ಸ್ ಲಿಮಿಟೆಡ್ ಡೈರೆಕ್ಟರು. ವಿಳಾಸ: ಸುಬೇದಾರ್ ಛತ್ರ ರಸ್ತೆ, ಬೆಂಗಳೂರು.

ನಂದಿಬಸಪ್ಪ, ಕೆ., ವ್ಯಾಪಾರಿ ಮತ್ತು ಅಬ್ಕಾರಿ ಕಂಟ್ರಾಕ್ಟರು. 1892ರಲ್ಲಿ ಹುಟ್ಟಿದ್ದು. ಮೈಸೂರು ವರ್ತಕ ಸಂಘದ ಅಧ್ಯಕ್ಷರಾಗಿದ್ದರು. ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಮತ್ತು ಮೈಸೂರು ನಗರ ಸಭೆಯ ಸದಸ್ಯರಾಗಿದ್ದರು. ಅನೇಕ ಧರ್ಮಕಾರ್ಯ ಮಾಡಿದ್ದಾರೆ. 1946ರಲ್ಲಿ ಮೈಸೂರು ಮಹಾರಾಜರು ಧರ್ಮರತ್ನಾಕರ ಎಂಬ ಬಿರುದನ್ನು ಕೊಟ್ಟು ಗೌರವಿಸಿದರು. ಕುಸ್ತಿ ಮತ್ತು ಕಾಲ್ಚೆಂಡಿನಲ್ಲಿ ಆಸಕ್ತಿ. ವಿಳಾಸ: ಸಂತೆಪೇಟೆ, ಮೈಸೂರು.

ನರಸಿಂಗರಾವ್, ಸಿ. ಎಸ್., ಅಡ್ವೊಕೇಟ್; ಜನ್ಮ 1896; ವಿದ್ಯಾಭ್ಯಾಸ ಮುಗಿಸಿ ಅಡ್ವೊಕೇಟರಾದರು; ಮೈಸೂರು ಪ್ರಜಾ ಪ್ರತಿನಿಧಿ ಸಭೆ ಮತ್ತು ಬೆಂಗಳೂರು ಪುರಸಭೆ ಸದಸ್ಯರಾಗಿದ್ದರು; ಬೆಂಗಳೂರು ಪೌರಸಭೆ ಅಧ್ಯಕ್ಷರೂ ಆಗಿದ್ದರು; ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಅಧ್ಯಕ್ಷರು 1946-52; ನಿವಾಸ: ಚಾಮರಾಜಪೇಟೆ ಬೆಂಗಳೂರು-2

ನರಸಿಂಹಮೂರ್ತಿ, ಸಿ., ಮೈಸೂರು ಸರಕಾರದ ಜೀವವಿಮೆ ಇಲಾಖೆ ಸೆಕ್ರೆಟರಿ. ಕೊಡಗು ಸರಕಾರದ ಚೀಫ್ ಸೆಕ್ರೆಟರಿ 1952; ಜನ್ಮ 1911; 1937ರಲ್ಲಿ ಮೈಸೂರು ಸಿವಿಲ್ ಸರ್ವೀಸಿಗೆ ಪ್ರವೇಶ; ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರಾಗಿಯೂ ದಿವಾನರ ಪ್ರೈವೇಟ್ ಸೆಕ್ರೆಟರಿಯಾಗಿಯೂ ಮೈಸೂರು ಮುನಿಸಿಪಲ್ ಕಮಿಷನರ್‌ರಾಗಿಯೂ ಇದ್ದರು.

ನರಸಿಂಹಯ್ಯಂಗಾರ್, ಟಿ., ಬಿ. ಎ., ಬಿ. ಎಲ್., ಅಡ್ವೊಕೇಟ್ ಮತ್ತು ಮೈಸೂರು ಲ್ಯಾಕ್ ಅಂಡ್ ಪೆಯಿಂಟ್ ವರ್ಕ್ಸ್ ಅಧ್ಯ

ಕ್ಷರು. ಮೈಸೂರು ನಗರ ಸಭೆ ಅಧ್ಯಕ್ಷ ರಾಗಿದ್ದರು. ಮೈಸೂರು ಸಿಟಿ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದರು.

ನಾಗಣ್ಣ, ಕೆ. ಎಂ., ಬೆಂಗಳೂರು ಶಿವಾಜಿ ಟಾಕೀಸ್ ಮತ್ತು ನಂದಿ ಫಿಲಮ್ ಸರ್ಕ್ಯುಟ್ ಮಾಲೀಕರು; ಜನ್ಮ 1903; ವಿದ್ಯಾಭ್ಯಾಸಾ ನಂತರ 1918ರಲ್ಲಿ ವ್ಯಾಪಾರ ಪ್ರಾರಂಭಿಸಿದರು; ಬೆಂಗಳೂರು ಪೌರಸಭೆ ಸದಸ್ಯರು 1937-40 ಮತ್ತು 1944-47; ಬೆಂಗಳೂರು ಕಾರ್ಪೊರೇಷನಿನ ಯುನೈಟೆಡ್ ಸಿವಿಕ್ ಪಾರ್ಟಿಯ ನಾಯಕರು 1950-53; ನಿವಾಸ: ಕಬ್ಬನ್‌ಪೇಟೆ, ಬೆಂಗಳೂರು-2

ನಾಗನಗೌಡ, ಡಾ|| ಆರ್., ಎಂ. ಎಸ್‌ಸಿ. ಪಿಎಚ್. ಡಿ., ಮೈಸೂರು ಸರಕಾರದ ವ್ಯವಸಾಯ ಮಂತ್ರಿ 1953ನೇ ಅಕ್ಟೋಬರಿಂದ. ಮೈಸೂರು ಅಸೆಂಬ್ಲಿಯ ಸದಸ್ಯರು. ಹಿಂದೆ ಮದ್ರಾಸ್ ಅಸೆಂಬ್ಲಿಯ ಸದಸ್ಯರಾಗಿಯೂ ಮಂತ್ರಿಯಾಗಿಯೂ ಇದ್ದರು. 11 ವರ್ಷ ಅಮೆರಿಕಾದಲ್ಲಿ ವ್ಯವಸಾಯ ಶಾಸ್ತ್ರವನ್ನು ವ್ಯಾಸಂಗ ಮಾಡಿ ಬಂದು, 1927ರಲ್ಲಿ ಹೊಸಪೇಟೆಯಲ್ಲಿ ನೆಲೆಸಿದರು. ಹೊಸಪೇಟೆಯ ಪೌರಸಭಾಧ್ಯಕ್ಷರಾಗಿದ್ದರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಸ್ವರಾಜ್ಯಕ್ಕಾಗಿ ಕಾರಾಗೃಹಕ್ಕೆ ಹೋಗಿದ್ದರು. ಸಹಕಾರ ಚಳುವಳಿಯಲ್ಲಿ ವಿಶೇಷ ಪಾತ್ರ ವಹಿಸಿದ್ದಾರೆ. ನಿವಾಸ: ಹೈ ಗ್ರೌಂಡ್ಸ್, ಬೆಂಗಳೂರು.

ನಾಗರಾಜರಾವ್, ಜಿ. ಎಲ್., ಮೈಸೂರು ಸರಕಾರದ ಹೋಂ ಸೆಕ್ರೆಟರಿ; ಜನ್ಮ 1905; ವಿದ್ಯಾಭ್ಯಾಸಾ ನಂತರ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿ ಮೈಸೂರು ಸರ್ಕಾರದ ಸರ್ವಿಸ್ 1928ರಲ್ಲಿ ಪ್ರವೇಶ; 1942ರಲ್ಲಿ ಆದಾಯ ತೆರಿಗೆಯ ಸ್ಪೆಷಲ್ ಡೆಪ್ಯುಟಿ ಕಮಿಷನರು; ಮೈಸೂರು ಜಿಲ್ಲಾಧಿಕಾರಿಯಾಗಿದ್ದರು; 1950-51ರಲ್ಲಿ ಮೈಸೂರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್; ನಿವಾಸ: ವಿಶ್ವೇಶ್ವರಪುರಂ, ಬೆಂಗಳೂರು-2

ನಾಗೇಶಶಾಸ್ತ್ರಿ, ವೈ., ಕನ್ನಡ ಮತ್ತು ಸಂಸ್ಕೃತ ಪಂಡಿತರು. 1934ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1892ರಲ್ಲಿ ಜನನ. 15ನೇ ವಯಸ್ಸಿನಲ್ಲೇ ಶಿಕ್ಷಕರಾದರು. ಹಲವಾರು ವಿದ್ಯಾ ಸಂಸ್ಥೆಗಳಲ್ಲಿ ದುಡಿದಿದ್ದಾರೆ. ಈಗ ಬಳ್ಳಾರಿ ವೀರಶೈವ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು.

ನಾರಾಯಣರಾವ್, ಎಸ್., ಜನ್ಮ 20-2-1894, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮತ್ತು ಮದ್ರಾಸು ಲಾ ಕಾಲೇಜಿನಲ್ಲಿ ವಿದ್ಯಾಭ್ಯಾಸ. 1921ರಲ್ಲಿ ವಕೀಲರಾಗಿ ಪ್ರವೇಶ; 1920ರಿಂದ ಕಾಂಗ್ರೆಸ್ ಸದಸ್ಯರು; ಮೈಸೂರು ಲೆ|| ಕೌನ್ಸಿಲ್ ಸದಸ್ಯರು 1941-45; ಎಂ.ಪಿ.ಸಿ.ಸಿ ಯ ಕಾರ್ಯ ಸಮಿತಿಯ ಸದಸ್ಯರಾಗಿಯೂ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿಯೂ ಇದ್ದರು: 1947ರ ಚಳುವಳಿಯಲ್ಲಿ ಬಂಧಿತರಾಗಿದ್ದರು. ನಂಜನಗೂಡು ಟೆನಿಸ್ ಕ್ಲಬ್ಬಿನ ಅಧ್ಯಕ್ಷರು. ನಿವಾಸ: ನಂಜನಗೂಡು.

ನಾರಾಯಣರಾವ್, ಎಂ., ಮೈಸೂರು ಸರಕಾರಿ ಲಾ ಕಾಲೇಜಿನ ಪ್ರಿನ್ಸಿಪಾಲರು;

ಜನ್ಮ 1898; ಲಾ ಪದವೀಧರರಾದ ಮೇಲೆ ಅಡ್ವೊಕೇಟರಾದರು; 1948ರಲ್ಲಿ ಲಾ ಕಾಲೇಜು ಪ್ರಿನ್ಸಿಪಾಲರಾದರು. ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಮತ್ತು ಅಕೆಡೆಮಿಕ್ ಕೌನ್ಸಿಲಿನ ಸದಸ್ಯರು.

ನಾರಾಯಣರಾವ್, ಬಿ. ಕೆ., ರಾಜಸೇವಾಸಕ್ತ (1946). ನಿವೃತ್ತ ಸೀನಿಯರ್ ಸರ್ಜನ್; ಜನ್ಮ ಮಾರ್ಚಿ 13, 1884; 1916ರಲ್ಲಿ ಅಸಿಸ್ಟೆಂಟ್ ಸರ್ಜನ್ ಆಗಿ ಮೈಸೂರು ವೈದ್ಯ ಇಲಾಖೆಗೆ ಪ್ರವೇಶ; 1918ರಲ್ಲಿ ಸರ್ಜನರಾದರು; 1922ರಲ್ಲಿ ಮಿಂಟೋ ಆಸ್ಪತ್ರೆ ಸೂಪರಿಂಟೆಂಡೆಂಟರು; ಮೆಡಿಕಲ್ ಸ್ಕೂಲಿನ ಪ್ರಿನ್ಸಿಪಾಲರಾಗಿದ್ದರು; ನಿವೃತ್ತರಾದ ಮೇಲೆ ಸ್ಥಾಪಕರು, ಪ್ರಭಾ ಐ ಕ್ಲಿನಿಕ್, ವಿಶ್ವೇಶ್ವರಪುರ, ಬೆಂಗಳೂರು.

ನಾರಾಯಣರಾವ್, ವಿ. ಎಸ್., ಮುದ್ರಕರು, ಪ್ರಕಾಶಕರು, ಪತ್ರಿಕೋದ್ಯಮಿ ಮತ್ತು ಗ್ರಂಥಕರ್ತರು. ಇಂಡಿಯನ್ ಪ್ರೆಸ್ಸಿನ ಮಾಲೀಕರು; ವಿಚಾರ ಸಾಹಿತ್ಯ ಲಿಮಿಟೆಡ್‌ನ ಮ್ಯಾನೇಜಿಂಗ್ ಡೈರೆಕ್ಟರು. ಮೈಸೂರು ಮುದ್ರಣಕಾರರ ಸಂಘದ ಉಪಾಧ್ಯಕ್ಷರು; ಜನ್ಮ 1905; ವಿದ್ಯಾಭ್ಯಾಸ ಮುಗಿದ ಮೇಲೆ ಕಾಂಗ್ರೆಸಿಗೆ ಸೇರಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು; ಅನೇಕಾವರ್ತಿ ಸೆರೆಮನೆವಾಸ ಅನುಭವಿಸಿದರು; ಮೈಸೂರು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯಾಗಿದ್ದರು; ಮೈಸೂರು ವಿಧಾನ ಸಭೆಯ ಸದಸ್ಯರಾಗಿದ್ದರು; ವಿಳಾಸ: ಬಳೇಪೇಟೆ, ಬೆಂಗಳೂರು-2.

ನಾರಾಯಣರೆಡ್ಡಿ, ಬಿ. ವಿ., ಮೈಸೂರು ಬ್ಯಾಂಕಿನ ಜನರಲ್ ಮ್ಯಾನೇಜರ್; ಜನ್ಮ 1900; ವಿದ್ಯಾಭ್ಯಾಸಾನಂತರ 1925ರಲ್ಲಿ ಮೈಸೂರು ಸರ್ಕಾರದ ಅಕೌಂಟ್ಸ್ ಪ್ರೊಬೇಷನರಾಗಿ ನೇಮಕ; ಅಸಿಸ್ಟೆಂಟ್ ಕಂಟ್ರೋಲರ್ ಮತ್ತು ಡೆಪ್ಯುಟಿ ಕಂಟ್ರೋಲರಾಗಿ ಬಡ್ತಿ ಹೊಂದಿ 1942ರಲ್ಲಿ ಮೈಸೂರು ಬ್ಯಾಂಕಿಗೆ ಮ್ಯಾನೇಜರಾಗಿ ವರ್ಗ; ವಿಳಾಸ ಮೈಸೂರು ಬ್ಯಾಂಕ್ ಕಟ್ಟಡ, ಅವಿನ್ಯೂ ರೋಡ್, ಬೆಂಗಳೂರು-2

ನಾಯಕ್, ನಾರಾಯಣರಾವ್ ಜಿ., ಮ್ಯಾನೇಜಿಂಗ್ ಡೈರೆಕ್ಟರ್, ಶ್ರೀರಾಮ ಸಿಲ್ಕ್ ಮಿಲ್ಸ್ ಲಿಮಿಟೆಡ್; ಕೇಂದ್ರ ಸಿಲ್ಕ್ ಬೋರ್ಡಿನ ಸದಸ್ಯರು; ಜನ್ಮ 1893, 15 ನೇ ವಯಸ್ಸಿನಲ್ಲಿ ವ್ಯಾಪಾರ ಆರಂಭಿಸಿದರು; 1936 ಮತ್ತು 47ರಲ್ಲಿ ಜಪಾನಿಗೆ ಭೇಟಿ: ಮೈಸೂರು ವಾಣಿಜ್ಯ ಸಂಘದ ಅಧ್ಯಕ್ಷರು 1939; ಮೈಸೂರು ಪ್ರಜಾ ಪ್ರತಿನಿಧಿ ಸಭಾ ಸದಸ್ಯರು 1936-44; ವಿಳಾಸ: ಶ್ರೀರಾಮ ಬಾಗ್, ಬೆಂಗಳೂರು-4

ನಿಜಲಿಂಗಪ್ಪ, ಸಿದ್ದವನಹಳ್ಳಿ; ಭಾರತ ಪಾರ್ಲಿಮೆಂಟಿನ ಸದಸ್ಯರು, ಕರ್ಣಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು; ಜನ್ಮ ಡಿಸೆಂಬರ್ 19, 1902; ಲಾ ಪದವೀಧರರಾದ ಮೇಲೆ 1926ರಲ್ಲಿ ಮೈಸೂರು ಹೈಕೋರ್ಟಿನ ಅಡ್ವೊಕೇಟರಾದರು; 1937ರಲ್ಲಿ ಕಾಂಗ್ರೆಸಿಗೆ ಪ್ರವೇಶ; ಹಲವು ಸಾರಿ ಜೈಲುವಾಸ ಮಾಡಿದರು; ಮೈಸೂರು ಕಾಂಗ್ರೆಸಿಗೆ ಅಧ್ಯಕ್ಷರು 1945-46; ಭಾರತ ರಾಜ್ಯಾಂಗಸಭೆ ಮತ್ತು ಮೈಸೂರು

ರಾಜ್ಯಾಂಗ ಸಭೆ ಸದಸ್ಯರಾಗಿದ್ದರು. ಗೋಪಾಲರಾವ್ ಸಮಿತಿಯ ಸದಸ್ಯರಾಗಿದ್ದರು (1948 50). ನಿವಾಸ: ವೆಂಕಟೇಶಪುರ ಬಡಾವಣೆ, ಚಿತ್ರದುರ್ಗ.

ನಿರ್ವಾಣಿಗೌಡ, ಎ. ಸಿ., ಮೈಸೂರು ಎಕ್ಸೈಸ್ ಕಮಿಷನರ್; ಜನ್ಮ ಮಾರ್ಚಿ 6, 1906; ಮೈಸೂರು ಸಿವಿಲ್ ಸರ್ವಿಸಿಗೆ 1928ರಲ್ಲಿ ಪ್ರವೇಶ; 1943ರಲ್ಲಿ ಪಬ್ಲಿಕ್ ವರ್ಕ್ಸ್ ಮತ್ತು ರೈಲ್ವೆ ಇಲಾಖೆಯಲ್ಲಿ ಸರಕಾರದ ಸೆಕ್ರೆಟರಿ; ಅನಂತರ ಚಿತ್ರದುರ್ಗದ ಡೆಪ್ಯುಟಿ ಕಮಿಷನರು; ಸರಕಾರದ ವಿದ್ಯಾ ಇಲಾಖೆ ಸೆಕ್ರೆಟರಿಯಾಗಿಯೂ ಇದ್ದರು.

ಪಟ್ಟಾಭಿರಾಮಯ್ಯ ಕೆ., ಅಡ್ವೊಕೇಟ್ ಮತ್ತು ಮೈಸೂರು ವಿಧಾನ ಸಭೆ ಸದಸ್ಯರು; ಜನ್ಮ 1903; 1930ರಲ್ಲಿ ಅಡ್ವೊಕೇಟರಾದರು; 1937ರಲ್ಲಿ ಕಾಂಗ್ರೆಸಿಗೆ ಪ್ರವೇಶ; 1951ರಲ್ಲಿ ಕಾಂಗ್ರೆಸ್ ನೀತಿ ವಿರೋಧಿಸಿ ಕಾಂಗ್ರೆಸ್‌ಗೆ ರಾಜೀನಾಮೆ; ಮೈಸೂರು ಕಾಂಗ್ರೆಸಿಗೆ ಪಬ್ಲಿಸಿಟಿ ಆಫೀಸರು 1939-40ರಲ್ಲಿ ಮತ್ತು ಪ್ರಧಾನ ಕಾರ್ಯದರ್ಶಿ 1940-42ರಲ್ಲಿ; ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ನಾಲ್ಕು ಸಾರಿ ತುರಂಗವಾಸ; ವಿಳಾಸ: ಕೋಲಾರ.

ಪರಮಶಿವಯ್ಯ ಜಿ., ನಿವೃತ್ತ ಚೀಫ್‌ಜಸ್ಟಿಸರು; ವಿದ್ಯಾಭ್ಯಾಸಾ ನಂತರ 1917ರಲ್ಲಿ ವಕೀಲರಾಗಿ ಪ್ರವೇಶ; ರಾಜಕೀಯ ಕ್ಷೇತ್ರದಲ್ಲಿಯೂ ಪ್ರವೇಶ; ಕೆಲ ಕಾಲ ಶಾಸನ ಸಭಾ ಸದಸ್ಯರು; 1927ರಲ್ಲಿ ಸಬಾರ್ಡಿನೇಟ್ ಜಡ್ಜರಾಗಿ ಸರ್ಕಾರಿ ಹುದ್ದೆ; 1944ರಲ್ಲಿ ಹೈಕೋರ್ಟ್ ಜಡ್ಜರಾದರು. 1949ರಲ್ಲಿ ಚೀಫ್‌ಜಸ್ಟಿಸರಾಗಿ ನಿವೃತ್ತಿ. ಭಾರತೀಯ ಜನಸಂಘದ (ಕರ್ನಾಟಕ ಪ್ರಾಂತ) ಅಧ್ಯಕ್ಷರು 1952; ನಿವಾಸ: ಹೈಗ್ರೌಂಡ್ಸ್, ಬೆಂಗಳೂರು–1.

ಪಾಳೇಗಾರ್, ಎಚ್. ಎಲ್., ಮೈಸೂರು ಮಹಾರಾಜರ ಹುಜೂರ್ ಸೆಕ್ರೆಟರಿ; ಜನ್ಮ ಜುಲೈ 17, 1907; ವಿದ್ಯಾಭ್ಯಾಸ ಮುಗಿದ ಮೇಲೆ ರೆವಿನ್ಯೂ ಪ್ರೊಬೇಷನರಾಗಿ ಮೈಸೂರು ಸರಕಾರದ ಸರ್ವಿಸಿಗೆ ಪ್ರವೇಶ, 1928; 1945ರಲ್ಲಿ ಡೆಪ್ಯುಟಿ ಕಮಿಷನರ್ ಸ್ಥಾನಕ್ಕೆ ಬಂದರು.

ಪುಟ್ಟಪ್ಪ, ಕೆ. ವಿ., ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರೊಫೆಸರ್; ಜನ್ಮ ಡಿಸೆಂಬರ್ 29, 1904; ವಿದ್ಯಾಭ್ಯಾಸ ಮುಗಿಸಿಕೊಂಡು ಕನ್ನಡ ಲೆಕ್ಚರರಾಗಿ 1929ರಲ್ಲಿ ವಿಶ್ವವಿದ್ಯಾಲಯ ಸೇರಿದರು; 1939ರಲ್ಲಿ ಅಸಿಸ್ಟೆಂಟ್ ಪ್ರೊಫೆಸರಾಗಿ ಬಡ್ತಿ; 1945ರಿಂದ ಪ್ರೊಫೆಸರ್. ಕನ್ನಡದಲ್ಲಿ ಪ್ರಸಿದ್ಧ ಕವಿ, ಕಥೆಗಾರರು ಮತ್ತು ನಾಟಕಕಾರರು. ಇವರ ಕೃತಿಗಳು: ಶ್ರೀ ರಾಮಾಯಣ ದರ್ಶನಂ, ಜನಪ್ರಿಯ ರಾಮಾಯಣ, ಕಾನೂರು ಸುಬ್ಬಮ್ಮ ಹೆಗ್ಗಡಿತಿ, ನನ್ನ ದೇವರು, ಸನ್ಯಾಸಿ, ಮಲೆನಾಡಿನ ಚಿತ್ರಗಳು, ವಿವೇಕಾನಂದ, ರಾಮಕೃಷ್ಣ ಪರಮಹಂಸ, ಕೊಳಲು, ಪ್ರೇಮ ಕಾಶ್ಮೀರ. ಚಿತ್ರಾಂಗದಾ. ರಕ್ತಾಕ್ಷಿ, ಯಮನ ಸೋಲು. ಅಗ್ನಿಹಂಸ ಮುಂತಾದವು. ಕಾವ್ಯನಾಮ: ಕುವೆಂಪು. ವಿಳಾಸ: ಮಹಾರಾಜಾ ಕಾಲೇಜು, ಮೈಸೂರು.

ಪುಟ್ಟಸ್ವಾಮಿ .ಬಿ. ಎಸ್., ಮೈಸೂರು ಲೇಬರ್ ಕಮಿಷನರ್ ; ಜನ್ಮ ಡಿಸೆಂಬರ್ 11, 1897 ; ಲಾ ಪದವೀಧರರಾದ ಮೇಲೆ ಅಡ್ವೊಕೇಟರಾದರು. ಮೈಸೂರು ಪ್ರಜಾ ಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳಲ್ಲಿ ಹಲವು ವರ್ಷ ಕಾಲ ಸದಸ್ಯರು ; 1943ರಲ್ಲಿ ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನರಾಗಿ ಸೇರಿದರು, 1948-50ರಲ್ಲಿ ಸರಕಾರದ ಲಾ ಸೆಕ್ರೆಟರಿ, 1950ರಿಂದೀಚೆಗೆ ಲೇಬರ್ ಕಮಿಷನರ್.

ಪೋತ್ತನ್ ಜೋಸೆಫ್, ಬಿ.ಎ., ಎಲ್‌ಎಲ್. ಬಿ, ಸಂಪಾದಕರು, ಡೆಕ್ಕನ್ ಹೆರಾಲ್ಡ್, ಬೆಂಗಳೂರು; ಜನ್ಮ 1892 ; ನಂತರ 1918ರಲ್ಲಿ ಬಾಂಬೆ ಕ್ರಾನಿಕಲ್ ಪತ್ರಿಕಾ ಕಚೇರಿಗೆ ಪ್ರವೇಶ ; 1926ರಲ್ಲಿ ಇಂಡಿಯನ್ ಡೈಲಿ ಟೆಲಿಗ್ರಾಫ್ ಪತ್ರಿಕೆ ಸಂಪಾದಕರು ; 1931 ರಲ್ಲಿ ಇಂಡಿಯನ್ ಡೈಲಿ ಮೆಯಿಲ್ ಪತ್ರಿಕೆ ಸಂಪಾದಕರು ; 1934ರಲ್ಲಿ ಡೆಲ್ಲಿಯ ಹಿಂದೂಸ್ತಾನ್ ಟೈಂಸ್ ಪತ್ರಿಕೆ ಸಂಪಾದಕರು ; 1936ರಲ್ಲಿ ಮದ್ರಾಸಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಸಂಪಾದಕರು ; 1942ರಲ್ಲಿ ಡೆಲ್ಲಿಯ ಡಾನ್ ಪತ್ರಿಕೆ ಸಂಪಾದಕರು ; ಭಾರತ ಸರಕಾರದ ಪ್ರಿನ್ಸಿಪಲ್ ಇನ್‌ಫರ್ಮೇಷನ್ ಆಫೀಸರಾಗಿಯೂ ಇದ್ದರು ; 1950 ರಲ್ಲಿ ಇಸ್ರೇಲಿಗೆ ಭೇಟಿ ; 1951ರಲ್ಲಿ ಅಮೆರಿಕಾ ಸರಕಾರದ ಆಹ್ವಾನದ ಮೇಲೆ ಅಮೆರಿಕಾದಲ್ಲಿ ಪ್ರವಾಸಮಾಡಿದರು; ವಿಳಾಸ: 16, ಮಹಾತ್ಮ ಗಾಂಧಿ ರೋಡ್, ಬೆಂಗಳೂರು-1

ಬಂದೀಗೌಡ, ಎ. ಜಿ., ಜನ್ಮ 1908 ; ಮೈಸೂರು ಮತ್ತು ಮದ್ರಾಸಿನಲ್ಲಿ ವಿದ್ಯಾಭ್ಯಾಸ. ಲಾ ಪದವಿ ಪಡೆದ ಮೇಲೆ 1934ರಲ್ಲಿ ಅಡ್ವೊಕೇಟರಾದರು. 1937ರಲ್ಲಿ ಕಾಂಗ್ರೆಸಿಗೆ ಪ್ರವೇಶ. 1948-49ರಲ್ಲಿ ಮೈಸೂರು ರಾಜ್ಯಾಂಗ ಸಭೆ ಸದಸ್ಯರು. 1945-50 ಮೈಸೂರು ವಿಧಾನ ಸಭೆ ಸದಸ್ಯರು. 1940-50 ಮೈಸೂರು ಕಾಂಗ್ರೆಸ್ ಕಾರ್ಯಸಮಿತಿ ಸದಸ್ಯರು ; 1949ರಿಂದ ಮೈಸೂರು ಸಕ್ಕರೆ ಕಂಪನಿ ಅಧ್ಯಕ್ಷರು.

ಬಸಪ್ಪ, ಎಂ. ಆರ್. ಸಿ., ಪ್ರಸಿದ್ಧ ವ್ಯಾಪಾರಿ ಮತ್ತು ರಾಜಕೀಯ ಮುಖಂಡರು, ಜೂಬಿಲಿ ಸ್ಟೋರ್ಸ್ ಮಾಲೀಕರು. 1905 ರಲ್ಲಿ ಜನನ, ವಿದ್ಯಾಭ್ಯಾಸ ಮುಗಿಸಿ 1925 ರಲ್ಲಿ ವ್ಯಾಪಾರಕ್ಕೆ ತೊಡಗಿದರು. 1932 ರಿಂದಲೂ ಸಾರ್ವಜನಿಕ ಸೇವೆಯಲ್ಲಿದ್ದಾರೆ. 1929ರಿಂದಲೂ ಕಾಂಗ್ರೆಸ್ ಸದಸ್ಯರು. 1940ರಿಂದ ಸಹಕಾರ ಕ್ಷೇತ್ರದಲ್ಲಿದ್ದಾರೆ. 1940-46ರಲ್ಲಿ ಮೈಸೂರು ನಗರ ಸಭಾ ಸದಸ್ಯರು. ವಿಳಾಸ: ಬಸ್ ಟರ್ಮಿನಸ್, ಮೈಸೂರು.

ಬಾಪಟ್ ನಾರಾಯಣ್ ವಿ., ರಾಜಸೇವಾಸಕ್ತ ; ಜನ್ಮ 1890 ; 1913ರಲ್ಲಿ ಸಬ್ ಅಸಿಸ್ಟೆಂಟ್ ಇಂಜಿನಿಯರಾಗಿ ಮೈಸೂರು ಸರ್ವಿಸಿಗೆ ಪ್ರವೇಶ. 1942 ರಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರಾದರು. 1944ರಲ್ಲಿ ರಸ್ತೆ ಮತ್ತು ಕಟ್ಟಡಗಳ ಚೀಫ್ ಇಂಜಿನಿಯರು. 1947ರಲ್ಲಿ ನಿವೃತ್ತರಾದರು.

ಬಾಬುರೆಡ್ಡಿ ಎನ್. ವಿ., ಮೈಸೂರು ಪೋಲೀಸ್ ಇಲಾಖಾ ಮುಖ್ಯಾಧಿಕಾರಿ ;

ಜನ್ಮ 1907; 1933ರಲ್ಲಿ ಪೋಲೀಸ್ ಪ್ರೊಬೇಷನರಾಗಿ ಮೈಸೂರು ಸರ್ವಿಸಿಗೆ ಪ್ರವೇಶ; 1938ರಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್ ಆಗಿ ಬಡ್ತಿ; ಗೋಪಾಲರಾವ್ ಕಮಿಟಿಯ ಕಾರ್ಯದರ್ಶಿಯಾಗಿದ್ದರು; ವಿಳಾಸ; ಸಿನೆಟಾಫ್ ರಸ್ತೆ, ಬೆಂಗಳೂರು.

ಬಾಲಕೃಷ್ಣನ್, ಪಿ. ಆರ್., ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಉಪಾಧ್ಯಕ್ಷರು ಮತ್ತು ಮೈಸೂರು ಲೋಹ ಮತ್ತು ರಾಸಾಯನಿಕ ಕೈಗಾರಿಕೆಗಳ ಡೈರೆಕ್ಟರು; ಜನ್ಮ: ಅಕ್ಟೋಬರ್ 1893; ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ; ತಾತಾ ವಿಜ್ಞಾನ ಮಂದಿರದಲ್ಲಿ ಪ್ರೌಢ ವ್ಯಾಸಂಗ ಮತ್ತು ಜಂಷಡ್‌ಪುರದ ತಾತಾ ಕಬ್ಬಿಣ ಉಕ್ಕು ಕಾರ್ಖಾನೆಯಲ್ಲಿ ಹೆಚ್ಚಿನ ಶಿಕ್ಷಣ; ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಡಿಮಾನ್‌ಸ್ಟ್ರೇಟರ್ 1916, ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಕೆಮಿಸ್ಟರಾದರು, 1921ರಲ್ಲಿ ಭದ್ರಾವತಿ ಕಬ್ಬಿಣ ಉಕ್ಕು ಕಾರ್ಖಾನೆಗೆ ಫೋರ್‌ಮನ್ ಆಗಿ ಸೇರಿ, ಕ್ರಮೇಣ ಜನರಲ್ ಮ್ಯಾನೇಜರ್ ಆದರು. ಅನಂತರ ಉಪಾಧ್ಯಕ್ಷರಾದರು. 1930, 1946 ಮತ್ತು 1949ರಲ್ಲಿ ಯೂರೋಪ್ ಮತ್ತು ಅಮೆರಿಕಾಗಳಿಗೆ ಭೇಟಿಯಿತ್ತು ಅಲ್ಲಿನ ಕೈಗಾರಿಕಾಭಿವೃದ್ಧಿಯನ್ನು ಪರಿಶೀಲಿಸಿ ಬಂದರು. ಹಲವು ಸಂಸ್ಥೆಗಳ ಸದಸ್ಯರು. ವಿಳಾಸ: ಭದ್ರಾವತಿ, ಶಿವಮೊಗ್ಗಾ ಜಿಲ್ಲೆ.

ಬಾಲಕೃಷ್ಣಯ್ಯ, ಎನ್., ಮೈಸೂರು ಹೈಕೋರ್ಟಿನ ಜಡ್ಜರು; ಜನ್ಮ 1894; ಲಾ ಪದವೀಧರರಾದ ಮೇಲೆ ಹೈಕೋರ್ಟಿನ ಅಡ್ವೊಕೇಟರಾದರು ಮತ್ತು ಸಾರ್ವಜನಿಕ ಜೀವನ ಪ್ರವೇಶಿಸಿದರು; ಮೈಸೂರು ನ್ಯಾಯ ವಿಧಾಯಕ ಸಭೆ ಸದಸ್ಯರು ಮತ್ತು ಬೆಂಗಳೂರು ಪೌರಸಭೆ ಅಧ್ಯಕ್ಷರಾಗಿದ್ದರು; 1950-51ರಲ್ಲಿ ಬ್ರಿಟನಿಗೆ ಹೋಗಿದ್ದರು; ವಿಳಾಸ: ಕನಿಂಗ್‌ಹ್ಯಾಂ ರಸ್ತೆ, ಬೆಂಗಳೂರು.

ಭಾಷ್ಯಂ, ಕೆ. ಟಿ., ವಿಧಾನ ಪರಿಷತ್ತಿನ ಅಧ್ಯಕ್ಷರು. ಜನ್ಮ 12-4-1895, ಸೆಂಟ್ರಲ್ ಕಾಲೇಜಿನಲ್ಲಿ ಪದವೀ ಪಡೆದುದು 1917ರಲ್ಲಿ; ಮದ್ರಾಸ್ ಲಾ ಕಾಲೇಜಿನಲ್ಲಿ ಲಾ ಪದವಿ ಪಡೆದುದು 1919ರಲ್ಲಿ ಬೆಂಗಳೂರಲ್ಲಿ ವಕೀಲಿ ವೃತ್ತಿ ಆರಂಭ; ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು 1926-1939; ನ್ಯಾಯ ವಿಧಾಯಕ ಸಭಾ ಸದಸ್ಯರು 1934-38; ಬೆಂಗಳೂರು ನಗರ ಸಭೆ ಸದಸ್ಯರು 1930-39; ಕಾರ್ಮಿಕ ಸಂಘದ ಅಧ್ಯಕ್ಷರು 1929; ಮೈಸೂರು ಕಾಂಗ್ರೆಸ್ ಅಧ್ಯಕ್ಷರು 1940; ಮೈಸೂರು ವಕೀಲರ ಸಮ್ಮೇಳನದ ಅಧ್ಯಕ್ಷರು, ಮಂಡ್ಯ, 1938; ರಾಜಕೀಯ ಮತ್ತು ಕಾರ್ಮಿಕ ಚಳುವಳಿಯಲ್ಲಿ ಹತ್ತು ಸಾರಿ ಕಾರಾಗೃಹ ವಾಸ; ಮೈಸೂರಿನ ಪ್ರಜಾ ಮಂತ್ರಿ ಮಂಡಳದಲ್ಲಿ ಮಂತ್ರಿ 1947-52; ಅಂತರರಾಷ್ಟ್ರೀಯ ಲೇಬರ್ ಸಮ್ಮೇಳನಗಳಲ್ಲಿ (1948ರಲ್ಲಿ ಸಾನ್‌ಫ್ರಾನ್ಸಿಸ್ಕೊದಲ್ಲಿ ಮತ್ತು 1949ರಲ್ಲಿ ಜನೀವಾದಲ್ಲಿ) ಭಾರತೀಯ ನಿಯೋಗದ ಸದಸ್ಯರು; ತೋಟಗಾರಿಕೆ ಮತ್ತು ವ್ಯವಸಾಯದಲ್ಲಿ ಆಸಕ್ತಿ; ವಿಳಾಸ: 215, ಅರಳೇಪೇಟೆ, ಬೆಂಗಳೂರು

2, ಫೋನ್: ಕಚೇರಿಯದು 2429, ನಿವಾಸದ್ದು 2802.

ಭೀಮಪ್ಪ ನಾಯಕ್, ಎ., ಅಡ್ವೊಕೇಟ್; ಜನ್ಮ 1904; ವಿದ್ಯಾಭ್ಯಾಸಾನಂತರ 1934ರಲ್ಲಿ ಅಡ್ವೊಕೇಟರಾದರು; ಪ್ರಜಾ ಪ್ರತಿನಿಧಿ ಸಭಾ ಸದಸ್ಯರು 1937-40. ನ್ಯಾಯ ವಿಧಾಯಕ ಸಭೆ ಸದಸ್ಯರು 1941-45, ಮೈಸೂರು ರಾಜ್ಯಾಂಗ ಸಭೆ ಸದಸ್ಯರು 1948-49. ಮೈಸೂರು ವಿಧಾನ ಸಭೆ ಸದಸ್ಯರು 1950ರಿಂದ; ಮೈಸೂರು ಸರಕಾರದಿಂದ ನೇಮಿತವಾದ ಪೌರಸಭಾ ಸಮಿತಿಯ ಅಧ್ಯಕ್ಷರಾಗಿದ್ದರು; ವಿಳಾಸ: ಚಿತ್ರದುರ್ಗ.

ಭೀಮರಾವ್ ಜೆಲ್ಲೋಣಿ, ಬಿ.ಎ., ಬಿ.ಎಲ್., ಅಡ್ವೊಕೇಟ್. 1885ರಲ್ಲಿ ಹುಟ್ಟಿದ್ದು. ಬೆಂಗಳೂರು ಸೆಂಟ್ರಲ್ ಕಾಲೇಜ್ ಮತ್ತು ಮದ್ರಾಸ್ ಲಾ ಕಾಲೇಜಿನಲ್ಲಿ ವ್ಯಾಸಾಂಗ. 1914ರಿಂದಲೂ ಕಾಂಗ್ರೆಸ್ಸಿನವರು. ಬೆಳಗಾಂ ಕಾಂಗ್ರೆಸ್ ಸ್ವಾಗತ ಸಮಿತಿಯ ಉಪಾಧ್ಯಕ್ಷರಾಗಿದ್ದರು. ಮದ್ರಾಸ್ ಲೆಜಿಸ್ಲೆಟಿವ್ ಕೌನ್ಸಿಲ್ ಸದಸ್ಯರಾಗಿದ್ದರು. 1938-52ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯ ಸೆನೆಟ್ ಸದಸ್ಯರು. ಸಹಕಾರಿಗಳು. ವಿಳಾಸ: ಬಳ್ಳಾರಿ.

ಬೋರಣ್ಣಗೌಡ, ಬಿ.ಎಸ್., ಮೈಸೂರು ವಿಧಾನಸಭೆಯ ಸದಸ್ಯರು; ಜನ್ಮ 1907; ವಿದ್ಯಾಭ್ಯಾಸಾನಂತರ ಸಾರ್ವಜನಿಕ ಜೀವನ ಪ್ರವೇಶಿಸಿದರು; ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು 1938-48; ಮೈಸೂರು ರಾಜ್ಯಾಂಗಸಭೆ ಸದಸ್ಯರು 1948-49; ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಿ ಹಲವು ಸಾರಿ ತುರಂಗವಾಸ ಅನುಭವಿಸಿದರು.

ಮಂಜಪ್ಪ, ಕಡಿದಾಳ್; ಮೈಸೂರು ರೆವಿನ್ಯೂ ಮತ್ತು ಮುರಾಮತ್ ಶಾಖಾ ಮಂತ್ರಿ. ಜನ್ಮ 1911. ವಿದ್ಯಾಭ್ಯಾಸ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಮತ್ತು ಪೂನಾದ ಲಾ ಕಾಲೇಜಿನಲ್ಲಿ. 1935ರಲ್ಲಿ ಅಡ್ವೊಕೇಟಾದರು. ಕಾಂಗ್ರೆಸ್ ಚಳುವಳಿಯಲ್ಲಿ ಸೇರಿ, 1942 ಮತ್ತು 1947ರಲ್ಲಿ ಬಂದೀವಾಸ ಅನುಭವಿಸಿದರು. 1941-44ರಲ್ಲಿ ಪ್ರಜಾ ಪ್ರತಿನಿಧಿ ಸಭಾ ಸದಸ್ಯರು, 1945-49ರಲ್ಲಿ ನ್ಯಾಯ ವಿಧಾಯಕ ಸಭಾ ಸದಸ್ಯರು. 1948-49ರಲ್ಲಿ ಮೈಸೂರು ರಾಜ್ಯಾಂಗ ಸಭಾ ಸದಸ್ಯರು. 1950ರಿಂದೀಚೆಗೆ ಮೈಸೂರು ವಿಧಾನ ಸಭೆ ಸದಸ್ಯರು. 1944-48ರಲ್ಲಿ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರು. ಶಿವಮೊಗ್ಗ ರೈತ ಸಂಘದ ಅಧ್ಯಕ್ಷರಾಗಿದ್ದರು. ನಿವಾಸ: ರೇಸ್‌ವ್ಯೂ ಕಾಟೇಜ್, ಹೈಗ್ರೌಂಡ್ಸ್, ಬೆಂಗಳೂರು.

ಮಂಜುನಾಥ್ ಬಿ.ಎಲ್., ಮೈಸೂರು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರು, ಜನ್ಮ ಜೂನ್ 30, 1901; ವಿದ್ಯಾಭ್ಯಾಸ ಮುಗಿಸಿಕೊಂಡು 1928ನೇ ಜುಲೈ 2ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಪ್ರೊಫೆಸರಾಗಿ ಸೇರಿದರು; 1948-50ರಲ್ಲಿ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರು, ಅನಂತರ ವಿಶ್ವವಿದ್ಯಾಲಯದ ವೈಸ್ ಚಾನ್ಸಲರು.

ಮದನಗೋಪಾಲರಾಜ ಅರಸು, ಡಿ., ಸರ್ದಾರ್, ಮೈಸೂರು ಮಹಾರಾಜರವರ ಎ.ಡಿ.ಸಿ.(1941 ರಿಂದ) ಮತ್ತು ಮೈಸೂರು ಅರಮನೆ ಇಲಾಖೆಯ ಮಿಲಿಟರಿ ಭಕ್ಷಿ (1944 ರಿಂದ), 1931ರಲ್ಲಿ ಮೈಸೂರು ದಿವಾನರ ಪ್ರೈವೇಟ್ ಸೆಕ್ರೆಟರಿ.

ಮನ್ನಾಜಿರಾವ್ ಎಸ್.ಎಲ್., ವ್ಯಾಪಾರಿಗಳು. ಜನ್ಮ 1893; 1926-29ರಲ್ಲಿ ಮತ್ತು 1945-49ರಲ್ಲಿ ಮೈಸೂರು ನ್ಯಾಯ ವಿಧಾಯಕ ಸಭೆ ಸದಸ್ಯರು, 1931-50ರಲ್ಲಿ ಮೈಸೂರು ಬ್ಯಾಂಕ್ ಡೈರೆಕ್ಟರು. ನಿವಾಸ: ರಾಮ ನಿವಾಸ, ಡಯಾಗನಲ್ ರಸ್ತೆ, ವಿಶ್ವೇಶ್ವರಪುರ, ಬೆಂಗಳೂರು-2

ಮರಿಯಪ್ಪ, ಮಾಲಿ, ಅಡ್ವೊಕೇಟ್ ಮತ್ತು ಮೈಸೂರು ವಿಧಾನ ಸಭೆ ಸದಸ್ಯರು; ಜನ್ಮ 1912; ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಮತ್ತು ಪೂನಾ ಲಾ ಕಾಲೇಜಿನಲ್ಲಿ ವಿದ್ಯಾಭ್ಯಾಸ; 1937 ರಲ್ಲಿ ಕಾಂಗ್ರೆಸ್ಸಿಗೆ ಸೇರಿದರು. ಮೈಸೂರು ರಾಜ್ಯಾಂಗ ಸಭೆ ಸದಸ್ಯರು (1948-49), ಮೈಸೂರು ವಿಧಾನ ಸಭೆ ಸದಸ್ಯರು 1950 ರಿಂದ. ಸತ್ಯಾಗ್ರಹ ಚಳುವಳಿಯಲ್ಲಿ ಭಾಗ ವಹಿಸಿ ಮೂರಾವರ್ತಿ ಬಂದೀವಾಸ ಅನುಭವಿಸಿದ್ದಾರೆ. ಸ್ಥಳ: ಮಧುಗಿರಿ.

ಮರಿಯಪ್ಪ, ಟಿ., ಮೈಸೂರು ವಿಧಾನ ಸಭೆ ಸದಸ್ಯರು, ಮೈಸೂರು ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಜನರಲ್ ಸೆಕ್ರೆಟರಿ. ಇಂಡಿಯ ಸರ್ಕಾರ ನೇಮಿಸಿರುವ ಹಿಂದುಳಿದ ಪಂಗಡಗಳವರ ಕಮಿಷನ್ ಸದಸ್ಯರು. 1947-52ರ ತನಕ ಮೈಸೂರು ಹೋಂ ಮಂತ್ರಿಯಾಗಿದ್ದರು. ಮೈಸೂರು ರಾಜ್ಯಾಂಗ ಸಭೆ ಸದಸ್ಯರು (1948-49). ಮೈಸೂರು ಕೃಷ್ಣರಾಜೇಂದ್ರ ಮಿಲ್ಸ್ ಕೆಲಸಗಾರರ ಸಂಘದ ಅಧ್ಯಕ್ಷರಾಗಿದ್ದರು. ಸಹಕಾರ ಚಳುವಳಿಯಲ್ಲಿ ಆಸಕ್ತಿ ಹೆಚ್ಚು. ಮೈಸೂರಿನಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳ ಸ್ಥಾಪನೆಗೆ ಕಾರಣರು. ನಿವಾಸ: ಕ್ರಂಬೀಗಲ್ ರೋಡ್, ಬೆಂಗಳೂರು–2

ಮಲ್ಲಪ್ಪ, ಟಿ. ಎಸ್., ಮೈಸೂರು ಹೈಕೋರ್ಟಿನ ಜಡ್ಜರು (1948ರಿಂದ); ಜನ್ಮ 1894; ವಿದ್ಯಾಭ್ಯಾಸ ಮುಗಿಸಿಕೊಂಡು ಮೈಸೂರು ನ್ಯಾಯಾಂಗ ಇಲಾಖೆಯನ್ನು ಪ್ರವೇಶಿಸಿದರು: ಮುನ್ಸಿಫ್, ಸಬಾರ್ಡಿನೇಟ್ ಜಡ್ಜ್, ಜಿಲ್ಲಾ ಮತ್ತು ಸೆಷನ್ಸ್ ಜಡ್ಜರಾಗಿ, ಹೈಕೋರ್ಟಿನ ಜಡ್ಜರಾದರು.

ಮಲ್ಲಾರಾಧ್ಯ ಜೆ. ಬಿ., ಮೈಸೂರು ವಿದ್ಯಾ ಇಲಾಖೆಯ ಡೈರೆಕ್ಟರು. ಮೈಸೂರು ವಿದ್ಯಾಭ್ಯಾಸದ ಸುಧಾರಣಾ ಸಮಿತಿಯ ಕಾರ್ಯದರ್ಶಿ ಮತ್ತು ಮೈಸೂರು ಸೆನ್ಸಸ್ ಕಮಿಷನರ್ ಆಗಿದ್ದರು. ಜನ್ಮ ಡಿಸೆಂಬರ್ 12, 1900; ಮೈಸೂರು ಮಹಾರಾಜ ಕಾಲೇಜಿನಲ್ಲಿ ವಿದ್ಯಾಭ್ಯಾಸ. 1923ನೇ ಜೂನಿನಲ್ಲಿ ವಿದ್ಯಾ ಇಲಾಖೆಯ ಅಸಿಸ್ಟೆಂಟ್ ಇನ್ಸ್‌ಪೆಕ್ಟರಾಗಿ ಸೇರಿದರು. 1923ನೇ ಅಕ್ಟೋಬರ್‌ನಲ್ಲಿ ರೆವಿನ್ಯೂ ಪ್ರೊಬೇಷನರಾಗಿ ನೇಮಕ. 1930-31ರಲ್ಲಿ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್, 1936ರಲ್ಲಿ ಸೆಂಟ್ರಲ್ ರೆಕ್ರೂಟ್‌ಮೆಂಟ್ ಬೋರ್ಡಿನ

ಕಾ ರ್ಯ ದ ರ್ಶಿ, 1942ರಲ್ಲಿ ಸೈನ್ಯ ಇಲಾಖೆಯ ರಿಕ್ರೂಟಿಂಗ್ ಅಧಿಕಾರಿ. 1943ರಲ್ಲಿ ನ್ಯಾಷನಲ್ ವಾರ್ ಫ್ರಂಟಿನ ಕಾರ್ಯದರ್ಶಿ, 1942ರಲ್ಲಿ ಗ್ರಾಮಾಭಿವೃದ್ಧಿಯ ವಿಶೇಷಾಧಿಕಾರಿ. 1945ರಲ್ಲಿ ಸರಕಾರದ ರೆವಿನ್ಯೂ ಸೆಕ್ರೆಟರಿ.

ಮಹದೇವಯ್ಯ, ಹಿ., ಮೈಸೂರು ನಿವೃತ್ತ ಚೀಫ್ ಜಸ್ಟಿಸರು; ಜನ್ಮ 1875; 1905ರಲ್ಲಿ ಮುನ್ಸೀಫ್ ಆಗಿ ಮೈಸೂರು ಸರ್ವಿಸಿಗೆ ಪ್ರವೇಶ ; 1925ರಲ್ಲಿ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್; 1935ರಲ್ಲಿ ನಿವೃತ್ತರಾದರು; ರಾಜಧರ್ಮ ಪ್ರವೀಣ ಮತ್ತು ದಿವಾನ್ ಬಹದ್ದೂರ್ ಬಿರುದುಗಳು ದೊರೆತಿವೆ ; ನಿವಾಸ: ಚಾಮರಾಜಪೇಟೆ, ಬೆಂಗಳೂರು–2.

ಮಹಮದ್ ಇಮಾಂ, ಜೆ., ಮೈಸೂರು ವಿಧಾನ ಸಭೆಯ ವಿರೋಧ ಪಕ್ಷದ ನಾಯಕರು ; ಜನ್ಮ 1897 ; ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯರು 1930-36 ; ಮೈಸೂರು ನ್ಯಾಯ ವಿಧಾಯಕ ಸಭೆ ಸದಸ್ಯರು 1933-49 ; ಮೈಸೂರು ಮಂತ್ರಿ 1941-45 ; ಮೈಸೂರು ರಾಜ್ಯಾಂಗಸಭೆ ಸದಸ್ಯರು 1948-49 ; ವಿಳಾಸ : ಜಗಲೂರು, ಚಿತ್ರದುರ್ಗ ಜಿಲ್ಲೆ.

ಮಹಮದ್ ವಲಿಯುಲ್ಲಾ, ಅಡ್ವೊಕೇಟ್ ಮತ್ತು ಕೇಂದ್ರ ವಿಧಾನ ಪರಿಷತ್ತಿನ ಸದಸ್ಯರು. ಜನ್ಮ 1899 ; 1924ರಲ್ಲಿ ಅಡ್ವೊಕೇಟರಾದರು ; ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು 1948-49. ಮೈಸೂರು ರಾಜ್ಯಾಂಗ ಸಭೆ 1948-49 ; ಮೈಸೂರು ವಿಧಾನ ಸಭೆ ಸದಸ್ಯರು 1950-52 . ಕನ್ನಡದಲ್ಲಿ ಪುಸ್ತಕ ಬರೆದಿದ್ದಾರೆ ; ನಿವಾಸ : 18 A, ಫ್ರೇಜರ್ ರಸ್ತೆ, ಕಲ್ಯಾಸಿಪಾಳ್ಯಂ, ಬೆಂಗಳೂರು–2

ಮಹಮದ್ ಷರೀಫ್, ಜನ್ಮ 1898 ; ಲಾ ಪದವೀಧರರಾಗಿ 1923ರಲ್ಲಿ ಅಡ್ವೊಕೇಟರಾದರು ; 1925-27 ರಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯರು, 1942-49 ಮೈಸೂರು ವಿಶ್ವವಿದ್ಯಾಲಯ ಸೆನೆಟ್ ಸದಸ್ಯರು ; 1948-49 ಮೈಸೂರು ರಾಜ್ಯಾಂಗ ಸಭೆ ಸದಸ್ಯರು ; 1947-50 ಮೈಸೂರು ಸರ್ಕಾರದ ಆರೋಗ್ಯ ಮಂತ್ರಿ. 1938-48 ಮೈಸೂರು ಸಂಸ್ಥಾನದ ಮುಸ್ಲಿಂ ಲೀಗ್ ಅಧ್ಯಕ್ಷರು.

ಮಹಾಬಲೇಶ್ವರಪ್ಪ, ವೈ., ಪ್ರಮುಖ ವ್ಯಾಪಾರಿ, ಗಣಿ ಮಾಲಿಕರು, ಜಮೀನ್ದಾರರು. ಸುಮಾರು 25 ವರ್ಷದಿಂದ ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದಾರೆ. 15 ವರ್ಷ ಕಾಲ ಕರ್ನಾಟಕ ವಾಣಿಜ್ಯ ಸಂಘದ ಅಧ್ಯಕ್ಷರಾಗಿದ್ದರು. ಬಳ್ಳಾರಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದರು. ಮದ್ರಾಸ್ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಸೆನೆಟ್ ಸದಸ್ಯರಾಗಿದ್ದರು. ಮದ್ರಾಸ್ ಆರ್ಥಿಕ ಸಮಿತಿ ಸದಸ್ಯರಾಗಿದ್ದರು. ಕಮಾಡಿಟೀಸ್ ಕಮಿಟಿ ಸದಸ್ಯರಾಗಿದ್ದರು. ಮದ್ರಾಸ್ ಲೆಜಿಸ್ಲೆಟಿವ್ ಕೌನ್ಸಿಲ್ ಸದಸ್ಯರಾಗಿದ್ದರು. ವಿಳಾಸ : ಬಳ್ಳಾರಿ.

ಮಾದಯ್ಯಗೌಡ, ಟಿ., ಅಡ್ವೊಕೇಟರು ಮತ್ತು ಪಾರ್ಲಿಮೆಂಟ್ ಸದಸ್ಯರು ; ಜನ್ಮ 1896 ; ವಿದ್ಯಾಭ್ಯಾಸ ಮುಗಿಸಿಕೊಂಡು

1930ರಲ್ಲಿ ಅಡ್ವೊಕೇಟರಾದರು; 1930-44ರ ತನಕ ಮೈಸೂರು ಪ್ರಜಾಪ್ರತಿನಿಧಿ ಸಭಾ ಸದಸ್ಯರು; 1930-39 ಮೈಸೂರು ನ್ಯಾಯ ವಿಧಾಯಕ ಸಭಾ ಸದಸ್ಯರು; 1948-49ರಲ್ಲಿ ಮೈಸೂರು ರಾಜ್ಯಾಂಗ ಸಭೆ ಸದಸ್ಯರು; 1950-52ರಲ್ಲಿ ಮೈಸೂರು ವಿಧಾನ ಸಭೆ ಸದಸ್ಯರು; ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರು 1948 ರಿಂದ; 1937 ಮತ್ತು 1947ರಲ್ಲಿ ಮೈಸೂರು ಕಾಂಗ್ರೆಸ್ ಚಳುವಳಿಯಲ್ಲಿ ತುರಂಗವಾಸ; ವಿಳಾಸ: ರಾಮನಗರಂ, ಬೆಂಗಳೂರು ಜಿಲ್ಲೆ.

ಮಾಧವರಾವ್, ಎನ್., ಮೈಸೂರು ಫೈನಾನ್ಶಿಯಲ್ ಸೆಕ್ರೆಟರಿ; ಜನ್ಮ 1905; ವಿದ್ಯಾಭ್ಯಾಸಾನಂತರ 1923ರಲ್ಲಿ ಮೈಸೂರು ಸರ್ಕಾರಿ ಸರ್ವಿಸ್‌ಗೆ ಪ್ರವೇಶ; 1932ರಲ್ಲಿ ಮೈಸೂರು ರೈಲ್ವೆಯ ಅಸಿಸ್ಟೆಂಟ್ ಆಡಿಟರು; 1942ರಲ್ಲಿ ಬೆಂಗಳೂರು ಎ. ಆರ್. ಪಿ. ಆಫೀಸರ್. ಆಹಾರ ಸರಬರಾಜು ಕಂಟ್ರೋಲರಾಗಿದ್ದರು. ರೆವಿನ್ಯು ಕಮಿಷನರಾಗಿಯೂ ಇದ್ದರು.

ಮಾಧವರಾವ್, ಪ್ರಧಾನ ಶಿರೋಮಣಿ ಎನ್., ಮೈಸೂರಿನ ನಿವೃತ್ತ ದಿವಾನರು; ಜನ್ಮ 1887; ವಿದ್ಯಾಭ್ಯಾಸಾನಂತರ 1907ರಲ್ಲಿ ಮೈಸೂರು ಸಿವಿಲ್ ಸರ್ವಿಸ್‌ಗೆ ಪ್ರವೇಶ; ಸರಕಾರದ ಹಲವು ಅಧಿಕಾರ ಸ್ಥಾನಗಳನ್ನಲಂಕರಿಸಿ, 1935ರಲ್ಲಿ ಮೈಸೂರು ಮಂತ್ರಿ ಮಂಡಳದ ಸದಸ್ಯರಾದರು; 1941ರ ಜುಲೈನಿಂದ 1946ರ ಜುಲೈವರೆಗೂ ದಿವಾನರಾಗಿದ್ದರು; ಪೂರ್ವ ಸಂಸ್ಥಾನಗಳ ಯೂನಿಯನ್ನಿನ ಸಲಹೆಗಾರರಾಗಿದ್ದರು; 1947-49ರಲ್ಲಿ ಭಾರತ ರಾಜ್ಯಾಂಗ ಸಭೆ ಸದಸ್ಯರು ಮತ್ತು ಡ್ರಾಫ್ಟಿಂಗ್ ಸಮಿತಿ ಸದಸ್ಯರು; 1953ರಲ್ಲಿ ಕೆ.ಜಿ.ಎಫ್. ತನಿಖೆ ಸಮಿತಿಯ ಅಧ್ಯಕ್ಷರಾಗಿದ್ದರು. ವಿಳಾಸ: ಶಿವಾಲಯ, ಬಸವನಗುಡಿ, ಬೆಂಗಳೂರು-4.

ಮಾಧವರಾವ್, ಕೆ. ಆರ್., ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪನಿಯ ಅಧ್ಯಕ್ಷರು ಮತ್ತು ಬೆಂಗಳೂರು ಕಾರ್ಪೊರೇಷನ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು. ಜನ್ಮ 1909; 1933ರಲ್ಲಿ ಅಡ್ವೊಕೇಟರಾದರು; 1937ರಲ್ಲಿ ಕಾಂಗ್ರೆಸ್ ಸೇರಿದರು; ಮೈಸೂರು ರಾಜ್ಯಾಂಗ ಸಭೆ ಸದಸ್ಯರು 1948-49; ಮೈಸೂರು ವಿಧಾನ ಸಭೆ ಸದಸ್ಯರು 1950-51; ನಿವಾಸ: ಪೋಲೀಸ್ ಸ್ಟೇಷನ್ ರಸ್ತೆ, ಬಸವನಗುಡಿ ಬೆಂಗಳೂರು 4.

ಮಿರ್ಜಾನ್, ಆರ್. ಎನ್., ರಾಜ ಸೇವಾ ಪ್ರಸಕ್ತ (1942), ಭಾವನಗರದ ಚೀಫ್ ಜಸ್ಟಿಸ್ ದಿವಂಗತ ಎನ್. ಎಫ್. ಮಿರ್ಜಾನ್ ರವರ ಪುತ್ರರು.; ಗ್ಲಾಸ್ಗೊ ಮತ್ತು ಲಿವರ್ ಪೂಲ್‌ಗಳಲ್ಲಿ ವಿದ್ಯಾಭ್ಯಾಸ; ಲಂಡನ್ ಬ್ರಿಟಿಷ್ ರೀಇನ್‌ಫೋರ್ಸ್ ಕಾಂಕ್ರೀಟ್ ಇಂಜನಿಯರಿಂಗ್ ಕಂಪನಿಯಲ್ಲಿ ಉದ್ಯೋಗ; ಮೈಸೂರು ರೈಲ್ವೆಯಲ್ಲಿ ಎಗ್ಸಿಕ್ಯುಟಿವ್ ಎಂಜಿನಿಯರ್, ಅನಂತರ ಚೀಫ್ ಎಂಜನಿಯರ್ ಮತ್ತು ಜನರಲ್ ಮ್ಯಾನೇಜರಾಗಿ ಮುಂದೆ ಜನರಲ್ ಮ್ಯಾನೇಜರಾಗಿ ನಿವೃತ್ತಿ; ಈಗ ಮೈಸೂರು ಸರಕಾರದಲ್ಲಿ ಆಹಾರ ಇಲಾಖೆಯ (ಸಾಗಾಣಿಕೆ ಶಾಖೆಯ) ಅಡಿಷನಲ್ ಡೈರೆಕ್ಟರು. ನಿವಾಸ: 22 ಗ್ರಾಂಟ್ ರೋಡ್ ಸೆಯಿಂಟ್ ಮಾರ್ಕ್ಸ್ ರಸ್ತೆ. ಬೆಂಗಳೂರು

ಮಿರ್ಜಾ ಇಸ್ಮೈಲ್, ಅಮೀನ್ ಉಲ್ ಮುಲ್ಕ್ ಸರ್ ಎಂ., ಮೈಸೂರು ನಿವೃತ್ತ ದಿವಾನರು; ಜನ್ಮ 1883; ವಿದ್ಯಾಭ್ಯಾಸ ಮುಗಿಸಿಕೊಂಡು 1905ರಲ್ಲಿ ಮೈಸೂರು ಸರ್ಕಾರದಲ್ಲಿ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿ ಸೇರಿದರು; 1908ರಲ್ಲಿ ಮಹಾರಾಜರ ಅಸಿಸ್ಟೆಂಟ್ ಸೆಕ್ರೆಟರಿ; 1914ರಲ್ಲಿ ಮಹಾರಾಜರ ಹುಜೂರ್ ಸೆಕ್ರೆಟರಿ; 1922ರಲ್ಲಿ ಮಹಾರಾಜರ ಪ್ರೈವೇಟ್ ಸೆಕ್ರೆಟರಿ; 1926ರಿಂದ 1941ರವರೆಗೆ ಮೈಸೂರು ದಿವಾನರು; 1930-31-32ರಲ್ಲಿ ರೌಂಡ್ ಟೇಬಲ್ ಸಮ್ಮೇಳನದ ಪ್ರತಿನಿಧಿ; 1942ರಿಂದ 1946ರವರೆಗೆ ಜೈಪುರದ ಮುಖ್ಯ ಮಂತ್ರಿ; 1946ರಿಂದ 1947ರವರೆಗೆ ಹೈದರಾಬಾದ್ ಮುಖ್ಯ ಮಂತ್ರಿ; ಇಂಡೊನೇಷಿಯದಲ್ಲಿ ವಿಶ್ವ ಸಂಸ್ಥೆಯ ಪ್ರತಿನಿಧಿಯಾಗಿ 1951-52ರಲ್ಲಿದ್ದರು; ನಿವಾಸ: ಅಲಿ ಅಸ್ಕರ್ ರಸ್ತೆ, ಹೈ ಗ್ರೌಂಡ್ಸ್, ಬೆಂಗಳೂರು.

ಮಿಸ್ರಿಲಾಲ್ ಪರಾಸ್‌ಮಲ್, ಉಣ್ಣೆ ಬಟ್ಟೆ ವ್ಯಾಪಾರಿ; ಜನ್ಮ 1904; ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಬೆಂಗಳೂರು ಪೌರಸಭೆ ಸದಸ್ಯರಾಗಿದ್ದರು: ಬೆಂಗಳೂರು ಪೀಸ್‌ಗುಡ್ಸ್ ವ್ಯಾಪಾರಿಗಳ ಸಂಘದ ಅಧ್ಯಕ್ಷರು; ಪ್ರಾಣಿದಯಾ ಸಂಘದ ಅಧ್ಯಕ್ಷರು. ನಿವಾಸ: 149, ಅವಿನ್ಯೂ ರೋಡ್, ಬೆಂಗಳೂರು-2

ಮುತ್ತಣ್ಣ, ಎಂ. ಎ., ಮೈಸೂರು ಫಾರೆಸ್ಟ್ ಚೀಫ್ ಕನ್ಸರ್ವೇಟರು; ಜನ್ಮ 1904; 1929ರಲ್ಲಿ ಮೈಸೂರು ಅರಣ್ಯ ಇಲಾಖೆಗೆ ಪ್ರವೇಶ; 1945-48 ಕನ್ಸರ್ವೇಟರ್; ನಿವಾಸ: 1-F, ಸಿಡ್ನಿ ರಸ್ತೆ, ಬೆಂಗಳೂರು.

ಮೇಖ್ರಿ, ಎಂ. ಜಿ., ರಿಜರ್ವ್ ಬ್ಯಾಂಕಿನ ಮಾಜಿ ಡೆಪ್ಯುಟಿ ಗವರ್ನರ್; ಜನ್ಮ 1889; 1914ರಲ್ಲಿ ಮೈಸೂರು ಸಿವಿಲ್ ಸರ್ವಿಸಿಗೆ ಪ್ರವೇಶ; 1930-33 ಶಿವಮೊಗ್ಗಾ ಡೆಪ್ಯುಟಿ ಕಮಿಷನರು; 1935-36ರಲ್ಲಿ ಮೈಸೂರು ಸಂಸ್ಥಾನದ ಸಹಕಾರ ಸಂಘಗಳ ರಿಜಿಸ್ಟ್ರಾರ್; 1940 ಮೈಸೂರು ಸರಕಾರದ ಚೀಫ್ ಸೆಕ್ರೆಟರಿ; 1944 ಕಾಶ್ಮೀರ ಸರ್ಕಾರದ ರೆವಿನ್ಯೂ ಸಲಹೆಗಾರರು; 1945-46 ಕಾಶ್ಮೀರದ ಅಭಿವೃದ್ಧಿ ಶಾಖಾ ಮಂತ್ರಿ.

ಮೇದಪ್ಪ, ರಾವ್ ಬಹದ್ದೂರ್ ಪಿ., 1948 ರಿಂದ ಮೈಸೂರು ಹೈಕೋರ್ಟಿನ ಚೀಫ್ ಜಸ್ಟಿಸರು; ಜನ್ಮ 1895; ಬೆಂಗಳೂರು ಸೆಂಟ್ರಲ್ ಕಾಲೇಜು ಮತ್ತು ಮದ್ರಾಸ್ ಲಾ ಕಾಲೇಜಿನಲ್ಲಿ ವಿದ್ಯಾಭ್ಯಾಸ; ಕೊಡಗಿನ ಜಿಲ್ಲಾ ಬೋರ್ಡ್ ಸದಸ್ಯರಾಗಿದ್ದರು; ಸೈಮನ್ ಕಮಿಷನಿನ ಮುಂದೆ ಸಾಕ್ಷ್ಯವಿತ್ತ ಕೊಡಗಿನ ನಿಯೋಗದ ನಾಯಕರು; 1929 ರಲ್ಲಿ ಕೊಡಗಿನಲ್ಲಿ ಸಬ್ ಜಡ್ಜರಾಗಿ ನೇಮಕ; 1933 ರಿಂದ ಬೆಂಗಳೂರು ದಂಡಿನ ಜಿಲ್ಲಾ ಮತ್ತು ಸೆಷನ್ಸ್ ಜಡ್ಜರು; 1944 ರಿಂದ ಮೈಸೂರು ಹೈಕೋರ್ಟ್ ಜಡ್ಜರು; ಗೋಪಾಲರಾವ್ ಕಮಿಟಿಯ ಅಧ್ಯಕ್ಷರು 1948-50; ಮೈಸೂರು ಸಂಸ್ಥಾನದ ಕ್ರಿಕೆಟ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದರು; ನಿವಾಸ: ಕನಿಂಗ್‌ಹ್ಯಾಂ ರೋಡ್, ಬೆಂಗಳೂರು 1.

ಮೊಹಿಯುದ್ದೀನ್, ಸೈಯದ್ ಗೌಸ್, ಖಲೀಮ್ ಉಲ್ ಮುಲ್ಕ್; ಸಂಪಾದಕರು, 'ಅಲ್‌ಕಲಾಂ' ಉರ್ದು ದಿನ ಪತ್ರಿಕೆ, ಮತ್ತು ಮೈಸೂರು ವಿಧಾನ ಪರಿಷತ್ತಿನ ಸದಸ್ಯರು; ಜನ್ಮ 1900; 1941ರಲ್ಲಿ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರು; 1946ರಲ್ಲಿ ಮೈಸೂರು ಸಂಸ್ಥಾನದ ಪ್ರತಿಕೊದ್ಯೋಗಿ ಸಮ್ಮೇಳನದ ಅಧ್ಯಕ್ಷರು; ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು 1945-49; ನಿವಾಸ: ಕಲಾಸಿಪಾಳಯಂ, ಬೆಂಗಳೂರು-2

ಯಜ್ಞನಾರಾಯಣ ಅಯ್ಯರ್, ಎ. ಕೆ., ಎಂ. ಎ., ಎನ್.ಡಿ.ಡಿ. (ಇಂಗ್ಲೆಂಡ್) ಎಫ್. ಸಿ. ಎಸ್., ನಿವೃತ್ತ ಮೈಸೂರು ವ್ಯವಸಾಯ ಶಾಖಾ ಮುಖ್ಯಾಧಿಕಾರಿ; ಜನ್ಮ: 4-3-1878; ವ್ಯವಸಾಯ ಇಲಾಖಾ ಅನಲಿಸ್ಟಾಗಿ ಸೇರಿದ್ದು 1901, ಯೂರೋಪು ಅಮೆರಿಕಾಗಳಲ್ಲಿ ಹೆಚ್ಚಿನ ವ್ಯಾಸಂಗ 1909-1912; ವ್ಯವಸಾಯ ಇಲಾಖಾ ಡೆಪ್ಯುಟಿ ಡೈರೆಕ್ಟರಾದುದು 1914; ಡೈರೆಕ್ಟರ್ 1934; ಇಂಡಿಯನ್ ಸಯನ್ಸ್ ಕಾಂಗ್ರೆಸ್ (ವ್ಯವಸಾಯ ಶಾಖೆ) ಅಧ್ಯಕ್ಷರು 1936; ರಾಜಸೇವಾಸಕ್ತ ಬಿರುದು 1945; ಹಲವು ಪುಸ್ತಕಗಳ ಕರ್ತೃಗಳು ಮತ್ತು ಶಾಸ್ತ್ರೀಯ ಪತ್ರಿಕೆಗಳ ಸಂಪಾದಕರು.

ಯಶೋಧರಮ್ಮ ದಾಸಪ್ಪ, ದಿವಂಗತ ಶ್ರೀ ಕೆ. ಎಚ್. ರಾಮಯ್ಯನವರ ಪುತ್ರಿ; ಶ್ರೀ ಎಚ್. ಸಿ. ದಾಸಪ್ಪನವರನ್ನು ವಿವಾಹವಾದರು. ಇಬ್ಬರು ಗಂಡುಮಕ್ಕಳಿದ್ದಾರೆ; ಕೆಲವು ಕಾಲ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯೆ; ಮೈಸೂರು ಕಾಂಗ್ರೆಸಿ... ಅಧ್ಯಕ್ಷಿಣಿ 1950; ಕಸ್ತೂರಿಬಾ ಧರ್ಮ... ಸಂಸ್ಥೆಗೆ ಮೈಸೂರಿನ ಏಜೆಂಟರಾಗಿದ್ದಾರೆ. ವಿಳಾಸ: ಕಸ್ತೂರ್‌ಬಾ ಗ್ರಾಮ, ಅರಸೀಕೆರೆ.

ರತ್ನಂಶೆಟ್ಟಿ, ಡಿ. ಎ. ವಿ., ಬೆಂಗಳೂರು ಚಿಕ್ಕಪೇಟೆಯ ಶ್ರೀ ವಿಜಯಲಕ್ಷ್ಮಿ ಹಾಲ್‌ನ ಮಾಲೀಕರು; ಜನ್ಮ 1908; ವಿದ್ಯಾಭ್ಯಾಸ... ನಂತರ 1921ರಲ್ಲಿ ವ್ಯಾಪಾರಕ್ಕೆ ಪ್ರವೇಶ; ವೈಶ್ಯ ಕೋಆಪರೇಟಿವ್ ಬ್ಯಾಂಕಿನ ಡೈರೆಕ್ಟ... ರಾಗಿದ್ದರು; ರತ್ನ ಸಿಲ್ಕ್ ವೀವಿಂಗ್ ಫ್ಯಾಕ್ಟರಿಯ ಭಾಗಿದಾರರು; ನಿವಾಸ: 105, ಮಹಾರಾಷ್ಟ್ರ ಮಹಿಳಾ ವಿದ್ಯಾಲಯ... ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು 2.

ರಮಾನಂದರಾವ್ ಪಡುಕೋಣೆ, ಎಂ. ಎ., ಎಲ್. ಟಿ., ಬಳ್ಳಾರಿ ವೀರಶೈವ ಕಾಲೇಜಿನ ಪ್ರಿನ್ಸಿಪಾಲ್. 1950-52ರಲ್ಲಿ ಮಂಗಳೂರಿನ ಸರ್ಕಾರಿ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ್‌ರಾಗಿದ್ದರು. 1920ರಲ್ಲಿ ಮದ್ರಾಸ್ ಶಿಕ್ಷಣ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. 1942ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಪ್ರೊಫೆಸರಾಗಿದ್ದರು. ಕನ್ನಡ ಸಾಹಿತಿ; ಹಾಸ್ಯ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ವಿಳಾಸ: ಬಳ್ಳಾರಿ.

ರಾಜಗೋಪಾಲ ಐಯ್ಯಂಗಾರ್, ಟಿ. ಎಸ್., ಅಡ್ವೋಕೇಟ್ ಮತ್ತು ಮೈಸೂರು ವಿಧಾನಪರಿಷತ್ತಿನ ಸದಸ್ಯರು; ಜನ್ಮ 1907; 1931ರಲ್ಲಿ ಅಡ್ವೊಕೇಟರಾದರು; 193... ರಿಂದ ಮೈಸೂರು ಪೌರಸಭಾ ಸದಸ್ಯರು; ಮೈಸೂರು ವಿಶ್ವವಿದ್ಯಾಲಯದ ಸೆನೆಟ್...

ಮತ್ತು ಕೌನ್ಸಿಲಿನಲ್ಲಿ ಸುಮಾರು 15 ವರ್ಷ ಕಾಲ ಸದಸ್ಯರು; 34ನೇ ಮೈಸೂರು ಸಹಕಾರ ಸಮ್ಮೇಳನದ ಅಧ್ಯಕ್ಷರು 1947ರಲ್ಲಿ; 1950 ರಲ್ಲಿ ಮೈಸೂರು ಸಹಕಾರ ಪತ್ರಿಕೆ ಸಂಪಾದಕರು; ಕಾಂಗ್ರೆಸ್ ಚಳುವಳಿಯಲ್ಲಿ ಎರಡು ಸಾರಿ ತುರಂಗವಾಸ ಅನುಭವಿಸಿದರು; ನಿವಾಸ: ಕೃಷ್ಣ ಕುಟೀರ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು.

ರಾಜಗೋಪಾಲಚಾರಿ, ರಾಜ ಮಂತ್ರಪ್ರವೀಣ ಸರ್ ಎಸ್. ಪಿ., ಜನ್ಮ 1883; 1906ರಲ್ಲಿ ಮೈಸೂರು ಸಿವಿಲ್ ಸರ್ವಿಸ್‌ಗೆ ಪ್ರವೇಶ; 1927ರಲ್ಲಿ ಮೈಸೂರು ಎಕ್ಸೈಜ್ ಕಮಿಷನರ್; 1930ರಲ್ಲಿ ರೆವಿನ್ಯೂ ಕಮಿಷನರ್; 1932-38ರಲ್ಲಿ ಮೈಸೂರು ಮಂತ್ರಿಮಂಡಳಿಯ ಸದಸ್ಯರು; 1936-37ರಲ್ಲಿ ಕೆಲದಿನ ಆಕ್ಟಿಂಗ್ ದಿವಾನರಾಗಿದ್ದರು; ಗ್ವಾಲಿಯರ್ ಹೋಂ ಮಂತ್ರಿ 1939-46; ನಿವಾಸ: ಗವೀಪುರ, ಬೆಂಗಳೂರು-4.

ರಾಮ ಐಯ್ಯರ್ ಟಿ. ಜಿ., ರಾಜಸೇವಾಪ್ರಸಕ್ತ; ಜನ್ಮ 4ನೇ ಏಪ್ರಿಲ್ 1888; ಮೈಸೂರು ಸಿವಿಲ್ ಸರ್ವಿಸಿಗೆ ಪ್ರವೇಶ 1910; ಸರಕಾರದ ಅಸಿಸ್ಟೆಂಟ್ ಸೆಕ್ರೆಟರಿ, ಮೈಸೂರು ಬೆಂಗಳೂರುಗಳಲ್ಲಿ ಸಿಟಿ ಮ್ಯಾಜಿಸ್ಟ್ರೇಟರು; ಹಾಸನ, ಕೋಲಾರ, ಮೈಸೂರುಗಳಲ್ಲಿ ಡೆಪ್ಯುಟಿ ಕಮಿಷನರು, ವ್ಯವಸಾಯ ಇಲಾಖಾ ಡೈರೆಕ್ಟರು, 1943ರಲ್ಲಿ ಮಾರ್ಚಿಯಲ್ಲಿ ನಿವೃತ್ತರಾದರು. ಬಿಕಾನೀರ್ ಸಂಸ್ಥಾನದ ಅಭಿವೃದ್ಧಿ ಕಮಿಷನರ್ 1944, ಬಿಕಾನೀರ್ ಮಂತ್ರಿ 1945-46; ನಿವಾಸ: ಲಲಿತ ಗವ, ಸಾಂತೋಂ, ಮೈಲಾಪುರ, ಮದ್ರಾಸ್

ರಾಮಚಂದ್ರರಾವ್, ಎ. ಜಿ., ಮೈಸೂರಿನ ನ್ಯಾಯಾಂಗ ಮತ್ತು ವಿದ್ಯಾ ಮಂತ್ರಿ; ಜನ್ಮ 1900; 1927ರಲ್ಲಿ ಅಡ್ವೋಕೇಟರಾದರು; 1942ರಲ್ಲಿ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಲು ವಕೀಲಿ ವೃತ್ತಿ ಬಿಟ್ಟರು; 1949-50 ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿ; ಮೈಸೂರು ರಾಜ್ಯಾಂಗ ಸಭೆ ಮತ್ತು ವಿಧಾನ ಸಭೆ ಸದಸ್ಯರು; ನಿವಾಸ: ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು 2.

ರಾಮನ್, ರಾಜಸಭಾಭೂಷಣ ಸರ್ ಸಿ. ವಿ., ಎಂ. ಎ., ಪಿ. ಎಚ್. ಡಿ., ನೋಬಲ್ ಪಾರಿತೋಷಕ ಪಡೆದವರು; ಜನ್ಮ: ನವೆಂಬರ್ 7, 1888, ಶ್ರೀಮತಿ ಲೋಕಸುಂದರಿ ಅಮ್ಮಾಳ್‌ರನ್ನು ವಿವಾಹವಾಗಿ ಇಬ್ಬರು ಗಂಡುಮಕ್ಕಳು; ವಿಶಾಖಪಟ್ಟಣ, ಮದ್ರಾಸ್‌ಗಳಲ್ಲಿ ವಿದ್ಯಾಭ್ಯಾಸ; ಭಾರತ ಸರ್ಕಾರದ ಹಣಕಾಸಿನ ಇಲಾಖೆಯಲ್ಲಿ ಸೇವೆ 1907-17; 1907ರಲ್ಲಿ ಕಲ್ಕತ್ತಾದಲ್ಲಿ ಸಂಶೋಧನೆಗೆ ಆರಂಭ; ಬ್ರಿಟನಿಗೆ ಮತ್ತು ಯೂರೋಪಿಗೆ ಭೇಟಿ, 1925ರಲ್ಲಿ ಲೆನಿನ್‌ಗ್ರಾಡ್ ಮತ್ತು ಮಾಸ್ಕೊಗಳಲ್ಲಿ ರಷ್ಯನ್ ಸಯನ್ಸ್ ಅಕಾಡೆಮಿಯ ಐವತ್ತನೆ ವರ್ಷದ ಉತ್ಸವದಲ್ಲಿ ಭಾರತದ ಪ್ರತಿನಿಧಿ; ರಾಮನ್ ಎಫೆಕ್ಟ್ ಎಂಬ ವೈಜ್ಞಾನಿಕ ಸಿದ್ಧಾಂತ ಕಂಡುಹಿಡಿದುದು 1928ರಲ್ಲಿ; 1930 ರಲ್ಲಿ ಭೌತಶಾಸ್ತ್ರಕ್ಕಾಗಿ ನೋಬೆಲ್ ಪಾರಿತೋಷಕ; ಬೆಂಗಳೂರು ತಾತಾ ವಿಜ್ಞಾನ ಮಂದಿರದ ಡೈರೆಕ್ಟರ್ 1933; ಭಾರತ ಸಯನ್ಸ್

ಅಕಾಡೆಮಿಯ ಸ್ಥಾಪಕ ಅಧ್ಯಕ್ಷರು 1934 ರಿಂದ ; ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಸ್ಥಾಪನೆ ಬೆಂಗಳೂರಿನಲ್ಲಿ 1948; ಜೂರಿಚ್, ಹಂಗರಿ, ಐರ್ಲೆಂಡ್, ಚೀನಾ, ಗ್ಲಾಸ್ಗೋ, ಅಮೆರಿಕಾ, ಪ್ಯಾರಿಸ್‌ಗಳ ಹಲವು ವಿಜ್ಞಾನ ಸಂಸ್ಥೆಗಳ ಗೌರವ ಸದಸ್ಯರು ; ಫ್ರಾಂಕ್ಲಿನ್ ಮೆಡಲಿಸ್ಟ್ ; ನಿವಾಸ : ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಬೆಂಗಳೂರು 6.

ರಾಮನಾಥನ್ ಎ. ವಿ., ಬಿ.ಎ., ನಿವೃತ್ತ ಮೈಸೂರು ಮಂತ್ರಿ, ಜನ್ಮ 7-9-1888, ವಿದ್ಯೆ ಮದರಾಸ್ ಕ್ರಿಶ್ಚಿಯನ್ ಕಾಲೇಜು, 1907ರಲ್ಲಿ ಪದವೀಧರರು. ಮೈಸೂರು ಸಿವಿಲ್ ಸರ್ವಿಸ್ ಸೇರಿದ್ದು 1908ರಲ್ಲಿ, ಸರ್ಕಾರದ ಅಂಡರ್ ಸೆಕ್ರೆಟರಿ, ಡೆಪ್ಯುಟಿ ಕಮಿಷನರ್‌ರಾಗಿ, ಸರ್ಕಾರದ ಚೀಫ್ ಸೆಕ್ರೆಟರಿಯಾದರು; 1941 ರಿಂದ 1943ರ ವರೆಗೆ ಮೈಸೂರು ಮಂತ್ರಿ; 1943-45 ಭರತಪುರದ ದಿವಾನ್: ಮೈಸೂರು ಮಹಾರಾಜರಿಂದ 'ರಾಜಮಂತ್ರಪ್ರವೀಣ' ಬಿರುದು. ಮೈಸೂರು ಮಲನಾಡು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು (1946), ಕೇಂದ್ರ ಮಲನಾಡು ಯೋಜನಾ ಸಮಿತಿ ಅಧ್ಯಕ್ಷರು (1950) ನಿವಾಸ: ಆನಂದ, ವಿಶ್ವೇಶ್ವರಪುರಂ, ಬೆಂಗಳೂರು-2.

ರಾಮನಾಥಯ್ಯ ಕೆ. ಪಿ., ಎಂ. ಎ., ಮೈಸೂರು ಸರ್ಕಾರದ ಆಹಾರ ಇಲಾಖೆಯ ಡೈರೆಕ್ಟರು. ಜನ್ಮ 24-5-1903; ವಿದ್ಯಾಭ್ಯಾಸಾನಂತರ ಮಹಾರಾಜಾ ಕಾಲೇಜಿನಲ್ಲಿ ಟ್ಯೂಟರ್ ಆಗಿ ಪ್ರವೇಶ 1926ರಲ್ಲಿ ; ಇಂಗ್ಲಿಷ್ ಲಕ್ಚರರ್ 1927ರ ತನಕ; ರೆವಿನ್ಯೂ ಪ್ರೊಬೇಷನರ್ 1927 ; ಅನಂತ
ಸಬ್ ಡಿವಿಜನ್ ಆಫೀಸರ್, ಸ್ಪೆಷಲ್ ಮ್ಯಾ
ಸ್ಟ್ರೇಟ್ ಆಗಿ, 1942 ರಲ್ಲಿ ಆ ಹಾ
ಇಲಾಖೆಯ ಡೈರೆಕ್ಟರ್ ಅಸಿಸ್ಟೆಂ
ರಾದರು. 1949ರಲ್ಲಿ ಬೆಂಗಳೂರು ಅಡಿ
ನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್. 1951-5
ರಲ್ಲಿ ಮೈಸೂರು ಚೀಫ್ ಎಲೆಕ್ಟೋರಲ
ಆಫೀಸರ್.

ರಾಮಯ್ಯ, ಕೆ. ಎಸ್., ಹಿಂದುಸ್ತಾ
ಕೊ-ಆಪರೇಟಿವ್ ಇನ್ಷೂರೆನ್ಸ್ ಸೊಸ
ಟಿಯ ಬೆಂಗಳೂರು ಬ್ರಾಂಚ್ ಮ್ಯಾನೆ
ಜರು ; ಜನ್ಮ 1912 ; ವಿದ್ಯಾಭ್ಯಾಸಾ ನಂತ
1933ರಲ್ಲಿ ಹಿಂದುಸ್ತಾನ್ ಸೊಸೈಟಿ ಏಜಂ
ರಾದರು ; 1942ರಲ್ಲಿ ಇನ್ಸ್‌ಪೆಕ್ಟರು ಮತ್ತು
1946ರಲ್ಲಿ ಬ್ರಾಂಚ್ ಮ್ಯಾನೇಜರಾದರು
ಮೈಸೂರು ಇನ್ಷೂರೆನ್ಸ್ ಗಿಲ್ಡ್ ಅಧ್ಯಕ್ಷರು
ನಿವಾಸ: ಪಾರ್ಕ್ ರೋಡ್, ಸಿವಿಲ
ಏರಿಯಾ, ಬೆಂಗಳೂರು-1

ರಾಮಯ್ಯ, ಪಿ. ಆರ್., ಮಾಲೀಕರ
ತಾಯಿನಾಡು, ಚೇತನಾ ಮತ್ತು ಚಿತ್ರ
ಗುಪ್ತ ಪತ್ರಿಕೆಗಳು, ಬೆಂಗಳೂರು, ಮತ್ತು
ಮೈಸೂರು ವಿಧಾನ ಸಭೆಯ ಸದಸ್ಯರು
ಜನ್ಮ 1894 ; ಕಾಶಿ ವಿಶ್ವವಿದ್ಯಾಲಯದ
ವಿದ್ಯಾಭ್ಯಾಸಾ ನಂತರ 1922ರಲ್ಲಿ 'ಸ್ವರಾಜ್ಯ
ಪತ್ರಿಕೆ ಉಪಸಂಪಾದಕರಾಗಿ ಸೇರಿದರು
ಮೈಸೂರಿನಲ್ಲಿ ಎಂ. ವೆಂಕಟಕೃಷ್ಣಯ್ಯನವ
ಪತ್ರಿಕೆಗಳನ್ನು ನಡೆಸಿದರು ; 1927 ರ
'ತಾಯಿನಾಡು' ಸ್ಥಾಪಿಸಿದರು ; 1939
ವರೆಗೆ ತಾಯಿನಾಡು ಸಂಪಾದಕರು ; 194
ರಲ್ಲಿ 'ಡೈಲಿನ್ಯೂಸ್' ಪತ್ರಿಕೆ ಸ್ಥಾಪಿಸಿ 195

ರವರಿಗೆ ನಡೆಸಿದರು; ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರು, 1940 ಮತ್ತು 1944; ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷರು 1943; ಬೆಂಗಳೂರು ಪೌರಸಭೆ ಸದಸ್ಯರು 1943-45 ಮತ್ತು 1948; ಮೈಸೂರು ಸಂಸ್ಥಾನದ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದರು; 'ಫ್ರಾನ್ಸಿನ ಮಹಾ ಕ್ರಾಂತಿ' ಮತ್ತು 'ಆಧುನಿಕ ರಷ್ಯಾ' ಪುಸ್ತಕಗಳ ಲೇಖಕರು; ನಿವಾಸ: ಕಾಳಪ್ಪಾ ಬ್ಲಾಕ್, ಬಸವನಗುಡಿ, ಬೆಂಗಳೂರು.

ರಾಮರಾವ್, ನವರತ್ನ, ಭಾರತದ ಸಿಲ್ಕ್ ಬೋರ್ಡಿನ ಉಪಾಧ್ಯಕ್ಷರು; ಜನ್ಮ 1877; ವಿದ್ಯಾಭ್ಯಾಸಾ ನಂತರ 1904ರಲ್ಲಿ ರೆವಿನ್ಯೂ ಪ್ರೊಬೇಷನರಾಗಿ ಮೈಸೂರು ಸರ್ವಿಸಿಗೆ ಪ್ರವೇಶ; 1931-33 ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ಡೈರೆಕ್ಟರು; ಮೈಸೂರು ಸಿಲ್ಕ್ ಫಿಲೇಚರ್ಸ್ ಲಿಮಿಟೆಡ್ ಅಧ್ಯಕ್ಷರು; ಇನ್ನೂ ಹಲವು ಸಂಸ್ಥೆಗಳ ಸದಸ್ಯರು ಮತ್ತು ಡೈರೆಕ್ಟರು; ನಿವಾಸ: 176, ಸುಬ್ಬರಾಮ ಚೆಟ್ಟಿ ರಸ್ತೆ, ಬಸವನಗುಡಿ, ಬೆಂಗಳೂರು-4.

ರಾಮರಾವ್ ಎಂ. ವಿ., ಅಡ್ವೊಕೇಟ್ ಮತ್ತು ಮೈಸೂರು ವಿಧಾನಸಭೆ ಸದಸ್ಯರು; 1945-49ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು; 1948-49ರಲ್ಲಿ ಮೈಸೂರು ರಾಜ್ಯಾಂಗ ಸಭೆ ಸದಸ್ಯರು; 1950-52 ಪಾರ್ಲಿಮೆಂಟ್ ಸದಸ್ಯರು; ಕಾಂಗ್ರೆಸ್ ಮುಖಂಡರು; ನಿವಾಸ: ವಿಶ್ವೇಶ್ವರಪುರಂ, ತುಮಕೂರು.

ರಾಮಸ್ವಾಮಿ ಎಂ., ರಾವ್ ಬಹದ್ದೂರ್ ರಾಜಸೇವಾಪ್ರಸಕ್ತ; ಮೈಸೂರು ಸಿಟಿಯಲ್ಲಿರುವ ಗುಣಾಂಬಾ ಗರ್ಭಿಣಿ ಮತ್ತು ಶಿಶುಸಂರಕ್ಷಣಾ ಟ್ರಸ್ಟಿನ ಗೌರವ ಕಾರ್ಯದರ್ಶಿ; ಎಲ್. ವಿ.ಕೆ.ವಿ. ಸಂಸ್ಥೆಯ ಅಧ್ಯಕ್ಷರು; ಮೈಸೂರು ಪೌರಸಭೆಯ ಸದಸ್ಯರು ಮತ್ತು ಉಪಾಧ್ಯಕ್ಷರಾಗಿದ್ದರು; ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು; ಸ್ಕೌಟ್ ಚಳುವಳಿಯಲ್ಲಿ ತೀವ್ರಾಸಕ್ತಿಯುಳ್ಳವರು; ನಿವಾಸ: ಚಾಮರಾಜ ರಸ್ತೆ, ಮೈಸೂರು.

ರಾಮಸ್ವಾಮಿ ಅಯ್ಯಂಗಾರ್, ಗೊರೂರ್, ಪತ್ರಿಕೋದ್ಯೋಗಿ ಮತ್ತು ಸಾಹಿತಿ; ಮೈಸೂರು ವಿಧಾನ ಪರಿಷತ್ತಿನ ಸದಸ್ಯರು; ಜನ್ಮ 1904; ಶಾಂತಿನಿಕೇತನದಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು, ಸಬರ್ಮತಿ ಆಶ್ರಮದಲ್ಲಿ ಕೆಲಕಾಲ ಇದ್ದರು; ಕೆಂಗೇರಿಯ ಗುರುಕುಲದಲ್ಲಿ ಎರಡು ವರ್ಷ ಉಪಾಧ್ಯಾಯರಾಗಿದ್ದರು; ಹಲವು ಕಾದಂಬರಿಗಳು, ಸಣ್ಣಕಥೆಗಳು, ಪ್ರಬಂಧಗಳು ಇವುಗಳನ್ನು ಬರೆದಿದ್ದಾರೆ; ಇವರ ಕೆಲವು ಲೇಖನಗಳು ಹಿಂದೀಗೆ ತರ್ಜುಮೆಯಾಗಿವೆ; ಗ್ರಾಮೋದ್ಯೋಗದಲ್ಲಿ ಆಸಕ್ತಿ ಜಾಸ್ತಿ: ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ತುರಂಗವಾಸ ಅನುಭವಿಸಿದ್ದಾರೆ; ನಿವಾಸ: ಗೊರೂರು, ಹಾಸನ ಜಿಲ್ಲೆ.

ರುಕ್ಮಿಣಿಯಮ್ಮ, ಕೆ. ಡಿ., ಲೋಕಸೇವಾ ಪರಾಯಣೆ; ಜನ್ಮ 1877; ಮೈಸೂರಿನಲ್ಲಿ ಮೊದಲನೆಯ ಮಹಿಳಾ ಪದವೀಧರರು (1906), 1900ರಲ್ಲಿ ಉಪಾಧ್ಯಾಯಿನಿಯಾಗಿ ಮೈಸೂರು ಸರ್ವಿಸ್ ಪ್ರವೇಶ; 1932ರಲ್ಲಿ

ಮೈಸೂರು ಮಹಾರಾಣಿ ಕಾಲೇಜ್ ಪ್ರಿನ್ಸಿಪಾಲರಾಗಿ ನಿವೃತ್ತಿ; ಮೈಸೂರು ಪ್ರಜಾಪ್ರತಿನಿಧಿಸಭೆ ಮತ್ತು ವಿಶ್ವವಿದ್ಯಾಲಯ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದರು.

ರುದ್ರಪ್ಪ, ಹೆಚ್. ಎಸ್., ಬಿ. ಎಸ್‌ಸಿ., ಎಲ್ಎಲ್. ಬಿ., ಅಡ್ವೊಕೇಟ್ ಮತ್ತು ಮೈಸೂರು ಅಸೆಂಬ್ಲಿ ಸದಸ್ಯರು, ಶಿಕಾರಿಪುರ ಸೊರಬ ಕಮ್ಯೂನಿಟಿ ಪ್ರಾಜೆಕ್ಟ್ ಕಮಿಟಿಯ ಅಧ್ಯಕ್ಷರು. 1909ರಲ್ಲಿ ಜನನ. 1935ರಲ್ಲಿ ವಕೀಲರಾದರು. 1943-47ರಲ್ಲಿ ಶಿವಮೊಗ್ಗ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದರು. 1941-49ರಲ್ಲಿ ಮೈಸೂರು ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿದ್ದರು. 1950–51ರಲ್ಲಿ ಭಾರತ ಪಾರ್ಲಿಮೆಂಟಿನ ಸದಸ್ಯರಾಗಿದ್ದರು. ಎ.ಐ.ಸಿ.ಸಿ. ಸದಸ್ಯರು. ಮೈಸೂರು ಕಾಂಗ್ರೆಸ್ ಉಪಾಧ್ಯಕ್ಷರಾಗಿದ್ದರು. ವಿಳಾಸ: ದೊಡ್ಡಪೇಟೆ, ಶಿವಮೊಗ್ಗ.

ರುದ್ರಯ್ಯ, ಎನ್., ಧರ್ಮಪ್ರಕಾಶ. ದೊಡ್ಡ ವರ್ತಕರು ಮತ್ತು ಕೈಗಾರಿಕೋದ್ಯಮಿ. 1892ರಲ್ಲಿ ಜನನ. ನೀಲಕಂಠೇಶ್ವರ ಫ್ಲೋರ್ ಮಿಲ್ಸ್ ಮುಂತಾದ ಸಂಸ್ಥೆಗಳ ಮಾಲೀಕರು. ಗ್ರೇನ್ ಮರ್ಚೆಂಟ್ಸ್ ಬ್ಯಾಂಕಿನ ಅಧ್ಯಕ್ಷರು. ಆಸ್ಪತ್ರೆ, ಛತ್ರ ಮುಂತಾದ ಧರ್ಮಕಾರ್ಯಗಳನ್ನು ಬಹಳವಾಗಿ ಮಾಡಿದ್ದಾರೆ. ವಿಳಾಸ: ಹೊಸತರಗುಪೇಟೆ, ಬೆಂಗಳೂರು.

ರಂಗರಾಮಯ್ಯ, ಎಸ್., ಅಡ್ವೊಕೇಟ್. ಜನ್ಮ 1897 ; ವಿದ್ಯಾಭ್ಯಾಸಾ ನಂತರ 1923ರಲ್ಲಿ ಅಡ್ವೊಕೇಟರಾದರು ; 1924ರಲ್ಲಿ ಕಾಂಗ್ರೆಸ್ ಸೇರಿದರು; ಕಾಂಗ್ರೆಸ್ ಚಳುವಳಿಗಳಲ್ಲಿ ಭಾಗ, ಹಲವು ಸಾರಿ ಜೈಲುವಾಸ; ಮೈಸೂರು ಪೌರಸಭೆ ಸದಸ್ಯರು 1937-39; ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು 1937–39 ; ಮೈಸೂರು ರಾಜ್ಯಾಂಗಸಭೆ ಸದಸ್ಯರು ಮತ್ತು ಮೈಸೂರು ವಿಧಾನ ಸಭೆ ಸದಸ್ಯರು 1948-52; ವಿಳಾಸ: ಡಿ. ಸುಬ್ಬಯ್ಯ ರಸ್ತೆ, ಮೈಸೂರು.

ರಂಗಯ್ಯ, ಎಂ. ಜಿ., ಮೈಸೂರು ನಿವೃತ್ತ ಚೀಫ್ ಇಂಜನಿಯರ್; ಜನ್ಮ 1878 ; ವಿದ್ಯಾಭ್ಯಾಸಾ ನಂತರ ಮೈಸೂರು ಸರ್ಕಾರದಲ್ಲಿ ಸಬ್ ಅಸಿಸ್ಟೆಂಟ್ ಇಂಜನಿಯರಾಗಿ 1904ರಲ್ಲಿ ಸೇರಿದರು ; 1916ರಲ್ಲಿ ಎಗ್ಜಿಕ್ಯುಟಿವ್ ಇಂಜನಿಯರ್ ಮತ್ತು 1926ರಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರಾದರು. 1950ರಲ್ಲಿ ಕೃಷ್ಣರಾಜಸಾಗರ ವಿಚಾರಣಾ ಸಮಿತಿಯ ಸದಸ್ಯರಾಗಿದ್ದರು.

ರಂಗನಾಥ ಬ್ರಹ್ಮತಂತ್ರ ಸ್ವಾಮಿಗಳು, ಮೈಸೂರು ಪರಕಾಲ ಮಠದ ಸ್ವಾಮಿಗಳು. ಮೈಸೂರಿನ ರಾಜಗುರು. ಪೂರ್ವಾಶ್ರಮದಲ್ಲಿ ರಂಗಾಚಾರ್ಯರು. ಹಿಂದಿನ ಸ್ವಾಮಿಗಳಾದ ಶ್ರೀ ಕೃಷ್ಣ ಬ್ರಹ್ಮತಂತ್ರರಲ್ಲಿ ಉಪದೇಶ ಪಡೆದು, ಪಂಡಿತ ರತ್ನಂ ಕಸ್ತೂರಿ ರಂಗಾಚಾರ್ಯ ಸ್ವಾಮಿಗಳ ಶಿಷ್ಯರಾಗಿಯೂ ಮೈಸೂರು ಮಹಾರಾಜಾ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಯಾಗಿಯೂ ಜ್ಞಾನಾರ್ಜನೆ ಮಾಡಿ, 1925ರಲ್ಲಿ ಮಠಾಧಿಪತಿಗಳಾದರು. ಇವರು ಮಠದ 33ನೇ ಅಧಿಪತಿಗಳು.

ರೆಡ್ಡಿ, ಕೆ. ಸಿ., ಭಾರತ ಸರ್ಕಾರದ ಉತ್ಪತ್ತಿ ಶಾಖಾ ಮಂತ್ರಿ. ಜನ್ಮ 4ನೇ

ಮೇ, 1902 ; ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ; ಶ್ರೀಮತಿ ಸರೋಜಮ್ಮನವರನ್ನು ವಿವಾಹವಾದರು ; ಐದು ಜನ ಗಂಡು ಮತ್ತು ಒಬ್ಬ ಹೆಣ್ಣು ಮಗಳು. 1947ರಿಂದ 1952ರವರೆಗೆ ಮೈಸೂರು ಮುಖ್ಯ ಮಂತ್ರಿ ; 1935-37ರಲ್ಲಿ ಮೈಸೂರು ಪ್ರಜಾ ಪರಿಷತ್ತಿನ ಅಧ್ಯಕ್ಷರು ; ಕೋಲಾರ ಜಿಲ್ಲಾ ಬೋರ್ಡಿನ ಅಧ್ಯಕ್ಷರು 1934-40 ; ಕೆಲಕಾಲ ಜನವಾಣಿ ಪತ್ರಿಕೆಯ ಸಂಪಾದಕರು ; 1937ರಲ್ಲಿ ಪ್ರಜಾ ಪರಿಷತ್ತನ್ನು ಕಾಂಗ್ರೆಸಿಗೆ ಸೇರಿಸಿದರು ; ಮೈಸೂರು ಕಾಂಗ್ರೆಸ್ ಅಧ್ಯಕ್ಷರು 1937-38 ; ನಾಲ್ಕು ವರ್ಷ ತುರಂಗವಾಸ ; ಇಂಗ್ಲೆಂಡ್ ಮತ್ತು ಯೂರೋಪ್‌ಗಳಲ್ಲಿ ಪ್ರವಾಸ 1945-46 ; ಪುನಃ ಮೈಸೂರು ಕಾಂಗ್ರೆಸ್ ಅಧ್ಯಕ್ಷರು 1947 ; ಮೈಸೂರಿನಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆಗಾಗಿ ಚಳುವಳಿ ಆರಂಭಿಸಿದರು 1947ರಲ್ಲಿ; 1947ರ ಅಕ್ಟೋಬರಿನಿಂದ ಮೈಸೂರು ಅಸೆಂಬ್ಲಿಯ ನಾಯಕರಾಗಿ ಮಂತ್ರಿ ಮಂಡಳ ರಚಿಸಿದರು. 1952ರಲ್ಲಿ ಕೇಂದ್ರ ಉತ್ಪತ್ತಿ ಶಾಖಾ ಮಂತ್ರಿಯಾದರು. ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಯ ಸದಸ್ಯರು ; ವಿಳಾಸ: ಕ್ವೀನ್ಸ್ ವೇ, ಹೊಸ ಡೆಲ್ಲಿ.

ರೆಡ್ಡಿ, ಸಿ. ಜಿ. ಕೆ., ರಾಜ್ಯ ಪರಿಷತ್ತಿನ ಸದಸ್ಯರು. ಜನ್ಮ ಜನವರಿ 12, 1921, ಚಿತ್ತೂರು ಜಿಲ್ಲೆಯ ಕಟ್ಟಮಂಚಿಯಲ್ಲಿ ; ಮದ್ರಾಸು ಪಚ್ಚಯ್ಯಪ್ಪ ಕಾಲೇಜಿನಲ್ಲಿ ವಿದ್ಯಾಭ್ಯಾಸ ; ಭಾರತೀಯ ವ್ಯಾಪಾರಿ ಹಡಗಾದ ಡಫರಿನ್ನಲ್ಲಿ ಶಿಕ್ಷಣ 1936-38 ; ಕಲ್ಕತ್ತಾದ ಐ.ಜಿ.ಎನ್. ರೈಲ್ವೆ ಕಂಪನಿಯಲ್ಲಿ ಅಭ್ಯಾಸಿಗರಾಗಿ 1939-41 ; ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿಯ ಸದಸ್ಯತ್ವ 1940 ರಿಂದ ; ಬಿ. ಐ. ಎಸ್. ಎನ್. ಕಂಪನಿಯಲ್ಲಿ ಎಂಜನಿಯರ್ ಆಫೀಸರಾಗಿ ಪ್ರವೇಶ 1941ರಲ್ಲಿ ; ಹಡಗಿನ ಅನಾಹುತಕ್ಕೆ ಸಿಕ್ಕಿ ಕೊನೆಗೆ 1942 ರಲ್ಲಿ ಯುದ್ಧ ಕೈದಿಯಾದರು ; ಐ. ಎನ್. ಎ.ಗೆ ಸೇರಿದರು ; ಭಾರತಕ್ಕೆ ವಾಪಸಾಗಿ ಬಂದು ಬಂಧಿತರಾಗಿದ್ದರು 1942-45 ; ಪುನಃ ಬಿ. ಐ. ಎಸ್. ಎನ್. ಕಂಪನಿಗೆ ಪ್ರವೇಶ ಮತ್ತು ರಾಜೀನಾಮೆ 1946 ; ಬೊಂಬಾಯಿಯಲ್ಲಿ ಟ್ರೇಡ್ ಯೂನಿಯನ್ ಕೆಲಸಗಾರರು ಮತ್ತು ಲೇಖನ ವ್ಯವಸಾಯಗಳು 1946-47 ; ಜನರಲ್ ಮ್ಯಾನೇಜರ್, ಪ್ರಿಂಟರ್ಸ್ ಲಿಮಿಟೆಡ್, ಬೆಂಗಳೂರು, 1948-50.

ಲಕ್ಷ್ಮಮ್ಮ, ಶ್ರೀಮತಿ ಎಂ. ಆರ್., ಸಂಪಾದಕಿ, 'ಸೋದರಿ' ವಾರಪತ್ರಿಕೆ ಮತ್ತು ಮೈಸೂರು ವಿಧಾನ ಪರಿಷತ್ತಿನ ಸದಸ್ಯರು ; ಮೈಸೂರು ಶಾಸನಸಭಾ ಕಾಂಗ್ರೆಸ್‌ಪಕ್ಷದ ಕಾರ್ಯದರ್ಶಿ; ಜನ್ಮ 1913 ; ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವಿದ್ಯಾಭ್ಯಾಸ; 'ಬೆಳಕು' ಪತ್ರಿಕೆಯ ಸಂಪಾದಕರು (1945-49), 1950ರಲ್ಲಿ ಸೋದರಿ ಪತ್ರಿಕೆ ಸ್ಥಾಪನೆ; ವಿಳಾಸ : ನರಸಿಂಹರಾಜ ಕಾಲನಿ, ಬೆಂಗಳೂರು-4

ಲಕ್ಷ್ಮೀದೇವಿ ರಾಮಣ್ಣ, ಮೈಸೂರು ವಿಧಾನ ಸಭೆ ಸದಸ್ಯೆ, ಬೆಂಗಳೂರು ಜಿಲ್ಲಾ ಬೋರ್ಡು ಉಪಾಧ್ಯಕ್ಷಿಣಿ ; ಜನ್ಮ 1918 ; 1944ರಲ್ಲಿ ಬಿ. ಎಸ್‌ಸಿ. ಪದವೀಧರರಾಗಿ

ಸಾರ್ವಜನಿಕ ಜೀವನಕ್ಕೆ ಪ್ರವೇಶ; ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯೆ 1945–49; ವಿಳಾಸ: 3, 4ನೇ ಕ್ರಾಸ್, 1ನೇ ಮೇರ್ನ್ ರೋಡ್, ಚಾಮರಾಜಪೇಟೆ, ಬೆಂಗಳೂರು-2

ಲಕ್ಷ್ಮೀ ನರಸಿಂಹಶಾಸ್ತ್ರಿ, ಎಂ.ಪಿ., ಹೆಡ್ ಮಾಸ್ಟರ್, ಗಾಂಧಿನಗರ ಹೈಸ್ಕೂಲು, ಬೆಂಗಳೂರು, ಮತ್ತು ಮೈಸೂರು ವಿಶ್ವವಿದ್ಯಾಲಯ ಸೆನೆಟ್ ಮತ್ತು ಕೌನ್ಸಿಲ್ ಸದಸ್ಯರು; ಸಂಸ್ಕೃತ ವಿದ್ಯಾಭ್ಯಾಸದ ಬೋರ್ಡಿನ ಸದಸ್ಯರು. ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಸದಸ್ಯರು 1948-49 ಮತ್ತು 1952 ರಿಂದ. ಜನನ 1912.

ಲಿಂಗಣ್ಣ, ಎಸ್., ವ್ಯಾಪಾರಿ ಮತ್ತು ಮೈಸೂರು ಸಿಟಿ ಇಂಪ್ರುವ್ಮೆಂಟ್ ಟ್ರಸ್ಟ್ ಬೋರ್ಡಿನ ಅಧ್ಯಕ್ಷರು; 1950ರಲ್ಲಿ ಮೈಸೂರು ಪೌರಸಭೆ ಅಧ್ಯಕ್ಷರು; ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಹಲವು ಸಾರಿ ತುರಂಗವಾಸ.

ಲಿಂಗಾರೆಡ್ಡಿ, ಹೆಚ್., ಬಿ.ಎ., ಬಿ.ಎಲ್.; ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಗೌರ್ನ್ಮೆಂಟ್ ಪ್ಲೀಡರ್. ಸಹಕಾರಿ. ರಾಯಲಸೀಮಾ ಚಳುವಳಿಯ ಮುಖಂಡರು. ಬಳ್ಳಾರಿ ಕೋ-ಆಪರೇಟಿವ್ ಸ್ಟೋರ್ಸಿನ ಅಧ್ಯಕ್ಷ. ಬಳ್ಳಾರಿ ಅಡಮಾನ ಬ್ಯಾಂಕಿನ ಉಪಾಧ್ಯಕ್ಷ. ರಾಘವ ಸ್ಮಾರಕ ಸಮಿತಿ ಅಧ್ಯಕ್ಷ. ರಾಯಲಸೀಮ ಬ್ಯಾಂಕಿನ ಅಧ್ಯಕ್ಷ. ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ವಿಳಾಸ: ಬಳ್ಳಾರಿ.

ವಡೆಯರ್, ಕೆ. ಜಿ., ಪಾರ್ಲಿಮೆಂಟಿನ (ಲೋಕಸಭೆ) ಸದಸ್ಯರು; ಜನ್ಮ 1901; 1941-51ರಲ್ಲಿ ಶಿವಮೊಗ್ಗಾ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು; 1948-52ರಲ್ಲಿ ಶಿವಮೊಗ್ಗಾ ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರು; ನಿವಾಸ: ಶಿವಮೊಗ್ಗ ಮತ್ತು ಸಾಗರ.

ವಾಸುದೇವ ಮೂರ್ತಿ, ಬಿ., ಜಡ್ಜ್, ಮೈಸೂರು ಹೈಕೋರ್ಟು; ಜನ್ಮ: ಮಾರ್ಚಿ 21, 1895; ಶ್ರೀಮತಿ ಇಂದಿರಾಬಾಯಿಯನ್ನು 1918ರಲ್ಲಿ ವಿವಾಹವಾದರು; ಮೈಸೂರು ಬ್ಯಾಂಕು, ಜೈಪುರ ಬ್ಯಾಂಕು ಮತ್ತು ಇತರ ಕಂಪನಿಗಳಿಗೆ ನ್ಯಾಯ ಸಲಹೆಗಾರರಾಗಿದ್ದರು; ಮೈಸೂರು ಸರಕಾರದ ಅಡ್ವೊಕೇಟ್ ಜನರಲ್ ರಾಗಿದ್ದರು; ಹೈಕೋರ್ಟಿನ ಜಡ್ಜರಾಗಿ 1950ನೇ ಆಗಸ್ 10ರಲ್ಲಿ ನೇಮಕ; ಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ; ನಿವಾಸ: ಬಸವನಗುಡಿ, ಬೆಂಗಳೂರು 4.

ವಾಸುದೇವಾಚಾರ್, ಕಾನಕಾನಹಳ್ಳಿ, ಆಸ್ಥಾನ ವಿದ್ವಾನ್; ಸಂಗೀತಗಾರರು; ಮದ್ರಾಸು ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿದ್ದರು; ಸಂಗೀತ ಶಾಸ್ತ್ರರತ್ನ (1931) ಮತ್ತು ಸಂಗೀತಶಾಸ್ತ್ರ ವಿಶಾರದ (1944) ಬಿರುದುಗಳು ಮೈಸೂರು ಮಹಾರಾಜರಿಂದ ದಯಪಾಲಿಸಲ್ಪಟ್ಟವು.

ವ್ಯಾಸರಾವ್, ಆರ್., ಮೈಸೂರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಂಪೆನಿಯ ಮುಖ್ಯ ಭಾಗಿ. ಮೈಸೂರು ಸ್ಟೋನ್‌ವೇರ್ ಪೈಪ್ಸ್ ಮತ್ತು ಪಾಟರೀಸ್ ವಿಶೇಷ

ಡೈರೆಕ್ಟರು. 1881ರಲ್ಲಿ ಹುಟ್ಟಿದ್ದು, ಜಿಯಾಲಜಿಸ್ಟ್ ಆಗಿ ಮೈಸೂರು ಸರ್ಕಾರದಲ್ಲೂ ತಾತಾ ಸಂಸ್ಥೆಯಲ್ಲಿಯೂ ಕೆಲಸ ಮಾಡಿದ್ದಾರೆ. ನಿವಾಸ: ಚಾಮರಾಜಪೇಟೆ, ಬೆಂಗಳೂರು.

ವಿಜಯಸಾರಥಿ, ಎಂ. ಜಿ., ಮೈಸೂರಿನಲ್ಲಿ ಎನ್. ಎನ್. ಸಿ. ಸ್ಪೆಷಲ್ ಆಫೀಸರು. ಮೈಸೂರು ವಿಶ್ವವಿದ್ಯಾಲಯದ ಶಾರೀರಕ ಶಿಕ್ಷಣದ ಡೈರೆಕ್ಟರಾಗಿದ್ದರು; 1930ರಲ್ಲಿ ಪದವೀಧರರಾದ ಮೇಲೆ ಶಾರೀರಕ ಶಿಕ್ಷಣದ ಡಿಪ್ಲೊಮಾ ಪಡೆದರು; ಪ್ರಸಿದ್ಧ ವ್ಯಾಯಾಮ ಕ್ರೀಡಾಕಾರರು ಕ್ರಿಕೆಟ್, ಹಾಕಿ, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್ ಮುಂತಾದವುಗಳಲ್ಲಿ ಖ್ಯಾತಿ ಗಳಿಸಿದ್ದಾರೆ; ಹಲವು ವ್ಯಾಯಾಮ ಕ್ರೀಡಾಸಂಸ್ಥೆಗಳಲ್ಲಿ ಅಧ್ಯಕ್ಷರು ಅಥವಾ ಕಾರ್ಯದರ್ಶಿಯಾಗಿದ್ದರು; 1945-46 ಸೈನ್ಯಗಳ ಮನರಂಜನೆಯ ಆರ್ಗನೈಸಿಂಗ್ ಡೈರೆಕ್ಟರು; 1951ರ ಏಷಿಯನ್ ಗೇಂಸ್‌ನಲ್ಲಿ ಅಧಿಕಾರಿಗಳು.

ವಿಶ್ವೇಶ್ವರಯ್ಯ, ಸರ್ ಮೋಕ್ಷಗುಂಡಂ; ಜನ್ಮ ಸೆ. 15, 1861; ಬೆಂಗಳೂರು ಸೆಂಟ್ರಲ್ ಕಾಲೇಜ್ ಮತ್ತು ಪೂನಾ ಸಯನ್ಸ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು 1884ರಲ್ಲಿ ಬೊಂಬಾಯಿ ಸರ್ಕಾರಿ ಸರ್ವಿಸನ್ನು ಅಸಿಸ್ಟೆಂಟ್ ಇಂಜನಿಯರಾಗಿ ಸೇರಿದರು; 1889ರಲ್ಲಿ ಎಗ್ಜಿಕ್ಯುಟಿವ್ ಇಂಜನಿಯರರಾದರು; ಅನಂತರ ಬೊಂಬಾಯಿಯ ಸ್ಯಾನಿಟರಿ ಇಂಜನಿಯರಾಗಿ 1903ರಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರಾಗಿ ನಿವೃತ್ತರಾದರು; 1909ರಲ್ಲಿ ಹೈದರಾಬಾದಿನ ಕನ್ಸಲ್ಟಿಂಗ್ ಇಂಜನಿಯರ್; 1909-12 ಮೈಸೂರು ಚೀಫ್ ಇಂಜನಿಯರ್; 1912-18 ಮೈಸೂರು ದಿವಾನರು; 1928 ಬೆಂಗಳೂರು ಗಲಭೆ ವಿಚಾರಣಾ ಸಮಿತಿ ಅಧ್ಯಕ್ಷರು; 1922ರಲ್ಲಿ ಸರ್ವ ಪಕ್ಷಗಳ ರಾಜಕೀಯ ಸಮ್ಮೇಳನದ ಅಧ್ಯಕ್ಷರು; 1938-45ರಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಯನ್ಸ್ ಕೋರ್ಟಿನ ಅಧ್ಯಕ್ಷರು; ವಿದೇಶಗಳಲ್ಲಿ ಪ್ರಯಾಣ 1898, 1909, 1919, 1926, 1935 ಮತ್ತು 1946ರಲ್ಲಿ; 1941ರಿಂದ ಅಖಿಲ ಭಾರತ ತಯಾರಿಕೆಗಾರರ ಸಂಘದ ಅಧ್ಯಕ್ಷರು; 1950ರಲ್ಲಿ ಗ್ರಾಮ ಕೈಗಾರಿಕಾ ಯೋಜನೆ ಸಿದ್ಧಪಡಿಸಿದರು, ಮೈಸೂರು ಸರಕಾರ ಅದನ್ನು ಆಚರಣೆಗೆ ತರುತ್ತಿದೆ; ಭಾರತ ಆರ್ಥಿಕ ಯೋಜನೆ ಕುರಿತು ಗ್ರಂಥ ಬರೆದಿದ್ದಾರೆ; ನಿವಾಸ: ಹೈಗ್ರೌಂಡ್ಸ್, ಬೆಂಗಳೂರು.

ವೀರಣ್ಣ, ಜಿ. ಹೆಚ್., ರಂಗಭೂಮಿ ಮತ್ತು ಚಲನಚಿತ್ರ ನಟವರ್ಯರು ಮತ್ತು ಮೈಸೂರು ವಿಧಾನ ಪರಿಷತ್ತಿನ ಸದಸ್ಯರು; ಜನ್ಮ 1892; ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಭೆಗೆ ಪ್ರವೇಶ 1896ರಲ್ಲಿ; ಅದೇ ಸಭೆಯ ಮಾಲೀಕರು 1917ರಿಂದ; ವರ್ಸಟೈಲ್ ಕಾಮೆಡಿಯನ್ (1923) ನಾಟಕ ಶಿರೋಮಣಿ (1932) ನಾಟಕಸಾರ್ವಭೌಮ (1934) ಧರ್ಮವೀರ (1937) ವಿನೋದ ರತ್ನಾಕರ (1922) ನಾಟಕರತ್ನ (1942) ಮುಂತಾದ ಬಿರುದುಗಳು ಬಂದಿವೆ. ನಾಟಕಗಳಲ್ಲಿ ಪಾತ್ರ ವಹಿಸುವುದಲ್ಲದೆ ಸದಾರಮೆ, ಸುಭದ್ರಾ,

ಜೀವನ ನಾಟಕ, ಹೇಮರೆಡ್ಡಿ ಮಲ್ಲಮ್ಮ ಮತ್ತು ಗುಣಸಾಗರಿ ಎಂಬ ಕನ್ನಡ ಚಲನ ಚಿತ್ರಗಳನ್ನು ತಯಾರಿಸಿದ್ದಾರೆ.

ವೀರಣ್ಣಗೌಡ, ಎಚ್. ಕೆ., ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಮತ್ತು ಮೈಸೂರು ವಿಧಾನಸಭೆಯ ಸದಸ್ಯರು; ಜನ್ಮ 1899; 1924ರಲ್ಲಿ ಕಾಂಗ್ರೆಸ್ ಸೇರಿದರು; ಕೆಲವು ಕಾಲ ಚಿತ್ರಗುಪ್ತ ಪತ್ರಿಕೆ ನಡೆಸಿದರು. ಮೈಸೂರು ಕಾಂಗ್ರೆಸ್ಸಿನ ಕಾರ್ಯದರ್ಶಿ ಮತ್ತು ಪ್ರಕಟಣಾ ಕಾರ್ಯದರ್ಶಿಯಾಗಿದ್ದರು; 1948-49ರಲ್ಲಿ ಮೈಸೂರು ರಾಜ್ಯಾಂಗ ಸಭಾ ಸದಸ್ಯರು.

ವೀರಪ್ಪ, ಜಿ., ಮೈಸೂರು ವಿಧಾನ ಪರಿಷತ್ತಿನ ಸದಸ್ಯರು; ಜನ್ಮ 1913; 1936ರಲ್ಲಿ ಅಡ್ವೊಕೇಟರಾದರು; 1937ರಲ್ಲಿ ಕಾಂಗ್ರೆಸಿಗೆ ಪ್ರವೇಶ; ದಾವಣಗೆರೆ ಪೌರಸಭೆಯ ಅಧ್ಯಕ್ಷರು 1951-52; ಮೈಸೂರು ರಾಜ್ಯಾಂಗ ಸಭೆಯ ಉಪಾಧ್ಯಕ್ಷರು 1948-49; ಮೈಸೂರು ವಿಧಾನಸಭೆ ಸದಸ್ಯರು 1950-52; ಕಾಂಗ್ರೆಸ್ ಚಳುವಳಿಯಲ್ಲಿ ಎರಡಾವರ್ತಿ ತುರಂಗವಾಸ ಅನುಭವಿಸಿದ್ದಾರೆ. ವಿಳಾಸ: ದಾವಣಗೆರೆ.

ವೆಂಕಟಪ್ಪ, ವಿ., ಜನ್ಮ 1900; ವಿದ್ಯಾಭ್ಯಾಸಾನಂತರ 1920ರಲ್ಲಿ ಸಾರ್ವಜನಿಕ ರಂಗ ಪ್ರವೇಶ; 1927-40 ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು; 1927-40 ನ್ಯಾಯವಿಧಾಯಕಸಭೆ ಮತ್ತು ರಾಜ್ಯಾಂಗ ಸಭೆ ಸದಸ್ಯರು 1948-49; 1937ರಲ್ಲಿ ಕಾಂಗ್ರೆಸ್ ಪ್ರವೇಶ; ಹಲವು ಸಾರಿ ರಾಜಕೀಯಕ್ಕಾಗಿ ತುರಂಗವಾಸ; ಮೈಸೂರು ಪ್ರಜಾಪ್ರತಿನಿಧಿ ಸಭೆ ಅಧ್ಯಕ್ಷರು 1947-49; ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರು 1949-50.

ವೆಂಕಟರಾಮಯ್ಯ, ಆರ್., ಮೈಸೂರು ಹೈಕೋರ್ಟಿನ ಜಡ್ಜರು; ಜನ್ಮ 1897; ವಿದ್ಯಾಭ್ಯಾಸಾನಂತರ ಅಡ್ವೊಕೇಟರಾದರು; 1944ರಲ್ಲಿ ಜಡ್ಜರಾಗಿ ನೇಮಕ; ನಿವಾಸ ವಿಶ್ವೇಶ್ವರಪುರ, ಬೆಂಗಳೂರು.

ವೆಂಕಟರಾಮಯ್ಯ, ಸಿ. ಕೆ., ಮೈಸೂರು ಸಂಸ್ಕೃತಿ ಪ್ರಚಾರ ಯೋಜನೆಯ ಡೈರೆಕ್ಟರು; 1924 ರಿಂದ 52ರ ವರೆಗೆ ಮೈಸೂರು ಸರ್ಕಾರದ ಕನ್ನಡ ಟ್ರಾನ್ಸ್‌ಲೇಟರಾಗಿದ್ದರು; ಜನ್ಮ 1896; ಕನ್ನಡದಲ್ಲಿ ಪ್ರಸಿದ್ಧ ಲೇಖಕರು; ಹಲವು ನಾಟಕ, ಜೀವನಚರಿತ್ರೆ, ಕಥೆಗಳನ್ನು ಬರೆದಿದ್ದಾರೆ; ಹರಪನಹಳ್ಳಿಯಲ್ಲಿ 1949ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು; 'ರಾಜಸೇವಾಸಕ್ತ' ಪ್ರಶಸ್ತಿ ಪಡೆದಿದ್ದಾರೆ; ವಿಳಾಸ: ಅ ಠಾ ರಾ ಕ ಚೇ ರಿ, ಬೆಂಗಳೂರು.

ವೆಂಕಟಸ್ವಾಮಿ, ಕಾಲ್ಮಡಿ, ಜನ್ಮ 1897; ಎಕ್ಸೈಸ್ ಕಂಟ್ರಾಕ್ಟರಾಗಿ ಜೀವನ ಆರಂಭಿಸಿದರು; ಈಗ ಸಂಸ್ಥಾನದಲ್ಲಿ ಪ್ರಮುಖ ಎಕ್ಸೈಸ್ ಕಂಟ್ರಾಕ್ಟರು; 1932ರಲ್ಲಿ ಬರ್ಮಾ ಷೆಲ್ ಏಜನ್ಸಿ ಪಡೆದು ವ್ಯಾಪಾರವನ್ನು ತೀವ್ರವಾಗಿ ಹೆಚ್ಚಿಸಿಕೊಂಡರು; ಅರಸೀಕೆರೆ ಹಾಸನ ಮತ್ತು ಕಡೂರುಗಳಲ್ಲಿ ಒಂದೊಂದು ಕಾಲೊನಿಗಳನ್ನು ಸ್ಥಾಪಿಸಿದರು; ಅರಸೀಕೆರೆ ಲಕ್ಷ್ಮೀಪುರಂ ಸ್ಯಾನಟೋ

ಬೋರ್ಡಿಗೆ 1949-53 ಅಧ್ಯಕ್ಷರು; ಪ್ರಿಂಟರ್ಸ್ ಲಿಮಿಟೆಡ್‌ನ ಡೈರೆಕ್ಟರು; ನಿವಾಸ: ಕಾಲ್ಮಡಿ, ರಾಜಾಮಹಲ್ ಗುಟ್ಟಹಳ್ಳಿ, ಬೆಂಗಳೂರು; ಮತ್ತು ಹಿಲ್ ವ್ಯೂ, ಅರಸೀಕೆರೆ.

ವೆಂಕಟಸ್ವಾಮಿ ಮುರಾರಿ, ಹೊಸಪೇಟೆ ಪೌರಸಭಾಧ್ಯಕ್ಷರು ಮತ್ತು ಕಂಟ್ರಾಕ್ಟರು. 1900ರಲ್ಲಿ ಜನನ. ವಿದ್ಯಾಭ್ಯಾಸವಾದಮೇಲೆ ವ್ಯಾಪಾರಕ್ಕಿಳಿದರು. ಹಾಗೆಯೇ ಸಾರ್ವಜನಿಕ ಸೇವೆ. 1923-25ರಲ್ಲಿ ತಾಲ್ಲೂಕ್ ಬೋರ್ಡ್ ಸದಸ್ಯ. 1927-30ರಲ್ಲಿ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರು. ಬಳ್ಳಾರಿ ಈಡಿಗ ಹಾಸ್ಟೆಲ್ ಅಧ್ಯಕ್ಷ. 1924 ರಿಂದ ಪೌರಸಭಾ ಸದಸ್ಯ. 1927-30ರಲ್ಲಿ, 1937-47ರಲ್ಲಿ ಪೌರಸಭಾಧ್ಯಕ್ಷ. 1944 ರಲ್ಲಿ ರಾವ್ ಸಾಹೆಬ್ ಬಿರುದು ಬಂತು. ಈ ಬಿರುದನ್ನು 1947ರಲ್ಲಿ ತ್ಯಜಿಸಿದರು. ವಿಳಾಸ: ಹೊಸಪೇಟೆ, ಬಳ್ಳಾರಿ.

ವೆಂಕಟಸ್ವಾಮಿ ಶೆಟ್ಟಿ, ವಿ., ಸಂತೋಷ್ ವಿಹಾರದ ಮಾಲೀಕರು ಮತ್ತು ಬೆಂಗಳೂರು ಪೌರಸಭೆಯ ಮಾಜಿ ಉಪಾಧ್ಯಕ್ಷರು; ಜನ್ಮ 1905; ವಿದ್ಯಾಭ್ಯಾಸಾನಂತರ ವ್ಯಾಪಾರ ಆರಂಭಿಸಿದರು; 1941-43ರಲ್ಲಿ ಬೆಂಗಳೂರು ಪೌರಸಭೆ ಸದಸ್ಯರು; 1942 ರಲ್ಲಿ ಪೌರ ಸಭೆಯ ಉಪಾಧ್ಯಕ್ಷರು; 1945-47 ಬಲಿಜ ಹಾಸ್ಟಲಿನ ಅಧ್ಯಕ್ಷರು.

ವೆಂಕಟೇಶ ಅಯ್ಯಂಗಾರ್, ಮಾಸ್ತಿ, ಮೈಸೂರು ಸರ್ಕಾರದ ನಿವೃತ್ತ ಎಕ್ಸೈಜ್ ಕಮಿಷನರ್; ಜನ್ಮ 1891; ವಿದ್ಯಾಭ್ಯಾಸಾನಂತರ 1914ರಲ್ಲಿ ಮೈಸೂರು ಸಿವಿಲ್ ಸರ್ವಿಸಿಗೆ ಪ್ರವೇಶ; 1925ರಲ್ಲಿ ಸರ್ಕಾರದ ಅಂಡರ್ ಸೆಕ್ರೆಟರಿ, 1920-21ರಲ್ಲಿ ಮೈಸೂರು ಸೆನ್ಸಸ್ ಕಮಿಷನರ್: 1929ರಲ್ಲಿ ಬೆಳಗಾಂನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು; ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಕೆಲವು ವರ್ಷಗಳಿದ್ದರು; ಕನ್ನಡದಲ್ಲಿ ಪ್ರಸಿದ್ಧ ಸಣ್ಣ ಕಥೆ ಲೇಖಕರು; ಇನ್ನು ಕೆಲವು ಗ್ರಂಥಗಳನ್ನು ರಚಿಸಿದ್ದಾರೆ; 'ಜೀವನ' ಕನ್ನಡ ಮಾಸ ಪತ್ರಿಕೆ ಸಂಪಾದಕರು; ನಿವಾಸ: ಗವೀಪುರ ಎಕ್ಸ್‌ಟೆನ್ಷನ್, ಬೆಂಗಳೂರು-4.

ವೆಂಕಟೇಶಾಚಾರ್, ಬಿ., ಮೈಸೂರು ವಿಶ್ವವಿದ್ಯಾಲಯದ ಮ್ಯಾಥಮ್ಯಾಟಿಕಲ್ ಫಿಸಿಕ್ಸ್ ನಿವೃತ್ತ ಪ್ರೊಫೆಸರು; ಜನ್ಮ 1879. ವಿದ್ಯಾಭ್ಯಾಸಾನಂತರ 1900ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಲೆಕ್ಚರರಾಗಿ ನೇಮಿತರಾದರು; 1914ರಲ್ಲಿ ಅಸಿಸ್ಟೆಂಟ್ ಪ್ರೊಫೆಸರೂ ಮತ್ತು 1921ರಲ್ಲಿ ಪ್ರೊಫೆಸರೂ ಆದರು; ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸಿನ ಡೈರೆಕ್ಟರಾಗಿಯೂ ಇದ್ದರು; 1930ರಲ್ಲಿ ರಾವ್ ಬಹದ್ದೂರ್ ಪ್ರಶಸ್ತಿ ದೊರೆಯಿತು; ನಿವಾಸ: ಬಸವನಗುಡಿ, ಬೆಂಗಳೂರು-4

ವೆಂಕಾಜಿರಾವ್, ಎಲ್. ಎಸ್., ಲಕ್ಷ್ಮೀರ್ ಕಂಪೆನಿ ಮಾಲೀಕರು, ಷೇರ್ ಮತ್ತು ಸ್ಟಾಕ್ ಬ್ರೋಕರ್. 1904ರಲ್ಲಿ ಜನನ. 1946-49ರಲ್ಲಿ ಮೈಸೂರು ನ್ಯಾಯ ವಿಧಾಯಕ ಸಭೆ ಸದಸ್ಯರು. 1944-47ರಲ್ಲಿ ಕಸ್ತೂರಿಬಾಟ್ರಸ್ಟಿನ ಮೈಸೂರು ಶಾಖೆಯ

ಅಧ್ಯಕ್ಷರು. 1949-50ರಲ್ಲಿ ಗಾಂಧೀ ಸ್ಮಾರಕ ನಿಧಿಯ ಮೈಸೂರು ಕಮಿಟಿಯ ಕಾರ್ಯದರ್ಶಿ. 1944ರಲ್ಲಿ ಮೈಸೂರು ವಾಣಿಜ್ಯ ಸಂಸ್ಥೆ ಅಧ್ಯಕ್ಷರು. 1945-53ರವರೆಗೆ ಮೈಸೂರು ಬ್ಯಾಂಕ್ ಡೈರೆಕ್ಟರು. ದಾನಿಗಳು. ಧರ್ಮಪ್ರಕಾಶ ಎಂಬ ಬಿರುದನ್ನು ಮೈಸೂರು ಮಹಾರಾಜರು ಕೊಟ್ಟು ಸನ್ಮಾನಿಸಿದರು. ಮೈಸೂರು ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದರು. ವಾಸ: ಶಂಕರಪುರ, ಬೆಂಗಳೂರು ಸಿಟಿ.

ವೆಂಕೋಬರಾವ್, ಎನ್. ಎಸ್., ಸಂಪಾದಕರು, ವಿಶ್ವಕರ್ಣಾಟಕ ದಿನ ಪತ್ರಿಕೆ; ಜನ್ಮ 1910; ವಿದ್ಯಾಭ್ಯಾಸಾನಂತರ ಪತ್ರಿಕೋದ್ಯೋಗಕ್ಕೆ ಪ್ರವೇಶ; ವಿಶ್ವಕರ್ಣಾಟಕ ದಿನ ಪತ್ರಿಕೆಯ ವರದಿಕಾರರು, ಉಪಸಂಪಾದಕರು ಆಗಿದ್ದು ಸಂಪಾದಕರಾದರು; ಕೆಲವು ಕಾಲ ದೇಶಬಂಧು ದಿನಪತ್ರಿಕೆ ಸಂಪಾದಕರಾಗಿದ್ದರು; ಅಖಿಲ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷರಾಗಿದ್ದರು; ಮೈಸೂರು ಪತ್ರಿಕೆಗಳ ಮಾಲೀಕರ ಮತ್ತು ಸಂಪಾದಕರ ಸಂಘದ ಕಾರ್ಯದರ್ಶಿ; ಮೈಸೂರು ಸರಕಾರದ ಪ್ರೆಸ್ ಅಡ್ವೈಸರಿ ಕಮಿಟಿ ಸದಸ್ಯರಾಗಿದ್ದರು; 1950-51ರಲ್ಲಿ ಬ್ರಿಟನ್ ಮತ್ತು ಯೂರೋಪಿನ ಪ್ರವಾಸ; 1952ರಲ್ಲಿ ಪತ್ರಿಕೋದ್ಯೋಗಿ ಸಹಕಾರ ಸಂಘದ ಅಧ್ಯಕ್ಷರಾಗಿದ್ದರು; ಕಚೇರಿ: ಬಳೇಪೇಟೆ, ಬೆಂಗಳೂರು-2.

ವೇಣುಗೋಪಾಲಾಚಾರಿ, ಡಿ., ಬಿ. ಎ., ಬಿ. ಎಲ್., ಅಡ್ವೊಕೇಟ್. ಕಾಂಗ್ರೆಸ್ ಸೇವಕರು, ಖಾದಿ ಭಕ್ತರು. ಸ್ವರಾಜ್ಯ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ವಿಳಾಸ: ಬಳ್ಳಾರಿ.

ಶರ್ಮನ್, ತಿರುಮಲೆ ತಾತಾಚಾರ್ಯ, ಪತ್ರಿಕೋದ್ಯೋಗಿ; ಜನ್ಮ ಏಪ್ರಿಲ್ 27, 1897; ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವಿದ್ಯಾಭ್ಯಾಸ; 1919-24ರಲ್ಲಿ ಭಾರತ ಸರ್ಕಾರದ ಹುದ್ದೆಯಲ್ಲಿದ್ದರು; 1925ರಲ್ಲಿ ವಿಶ್ವಕರ್ಣಾಟಕ ವಾರಪತ್ರಿಕೆಯನ್ನಾರಂಭಿಸಿದರು. 1934ರಲ್ಲಿ ಅದನ್ನೇ ದಿನಪತ್ರಿಕೆಯನ್ನಾಗಿ ಮಾಡಿದರು; ಬೆಂಗಳೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಸದಸ್ಯರು 1944-50; ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನಾಧ್ಯಕ್ಷರು 1943; ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು 1947-48; ಕನ್ನಡ ಟೈಪ್ ರೈಟರ್ ಸಮಿತಿಯ ಅಧ್ಯಕ್ಷರು 1950-51; ಸ್ವಾತಂತ್ರ್ಯ ಚಳುವಳಿಯಲ್ಲಿ ಮೈಸೂರಿನ ಪಾತ್ರದ ಚರಿತ್ರೆ ಬರೆಯಲು 1953ರಲ್ಲಿ ಸ್ಪೆಷಲ್ ಆಫೀಸರಾಗಿ ಸಂಸ್ಥಾನ ಸರ್ಕಾರದಿಂದ ನೇಮಿತರಾದರು; ನಿವಾಸ: 97, ಡಯಾಗನಲ್ ರೋಡ್, ವಿಶ್ವೇಶ್ವರಪುರ, ಬೆಂಗಳೂರು-2.

ಶಾಮರಾಜಯ್ಯಂಗಾರ್, ಕೆ., ಲಾಯರ್ ಮತ್ತು ಇಂಡಸ್ಟ್ರಿಯಲ್ ಟ್ರಿಬ್ಯುನಲ್ಲಿನ ಸದಸ್ಯರು; ಜನ್ಮ 1898; ವಿದ್ಯಾಭ್ಯಾಸಾನಂತರ ಬೆಂಗಳೂರು ಲಂಡರ್ ಮಿರ್ಷ ಹೈಸ್ಕೂಲು ಉಪಾಧ್ಯಾಯರು 1921-27; 1927ರಲ್ಲಿ ಲಾಯರಾದರು; 1939ರಲ್ಲಿ ಕಾಂಗ್ರೆಸ್ ಪ್ರವೇಶ; ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ಸಾರಿ ಜೈಲುವಾಸ ಅನುಭವಿಸಿದರು;

ಬೆಂಗಳೂರು ಪೌರಸಭೆ ಅಧ್ಯಕ್ಷರು 1948; ಬೆಂಗಳೂರು ಸಿಟಿ ಕಾಂಗ್ರೆಸ್ ಸಮಿತಿ ಅಧ್ಯಕ್ಷರು 1945-47; ಮೈಸೂರು ಪ್ರಜಾ ಪ್ರತಿನಿಧಿ ಸಭೆ ಸದಸ್ಯರು 1945-49; ಬೆಂಗಳೂರು ಕಾರ್ಪೊರೇಷನ್ ಸದಸ್ಯರು 1950-53; ನಿವಾಸ: ಗವೀಪುರ, ಬೆಂಗಳೂರು-4.

ಶಾಸ್ತ್ರಿ, ಸಿ. ಜಿ., ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಸಿಟಿ ಮೆಡಿಕಲ್ ಮತ್ತು ಜನರಲ್ ಏಜೆನ್ಸಿ, ಶಾಸ್ತ್ರಿ ಹೋಟೆಲ್, ಬೃಂದಾವನ, ತಾಜ್ ಹೋಟೆಲ್ ಮುಂತಾದ ಸಂಸ್ಥೆಗಳ ಮಾಲೀಕರು; ಜನ್ಮ 1902; ವಿದ್ಯಾಭ್ಯಾಸಾನಂತರ 1925ರಲ್ಲಿ ವ್ಯಾಪಾರ ಆರಂಭಿಸಿದರು; ಮೈಸೂರು ಸ್ಟಾಂಡರ್ಡ್ ಬ್ಯಾಂಕ್‌ನ ಮತ್ತು ಇಂಡಿಯ ಪಬ್ಲಿಕೇಷನ್ಸ್‌ನ ಡೈರೆಕ್ಟರು; ಬೆಂಗಳೂರು ಪೌರಸಭೆಯ ಸದಸ್ಯರು 1944-45; ನಿವಾಸ: ವಿಶ್ವೇಶ್ವರಪುರಂ, ಬೆಂಗಳೂರು.

ಶಾಸ್ತ್ರಿ, ಎಸ್.ಜಿ., ಜನ್ಮ 1888; ವಿದ್ಯಾಭ್ಯಾಸ ಮುಗಿಸಿಕೊಂಡು 1918ರಲ್ಲಿ ಇಂಡಸ್ಟ್ರಿಯಲ್ ಕೆಮಿಸ್ಟಾಗಿ ಮೈಸೂರು ಸರ್ಕಾರಿ ಸರ್ವಿಸ್ ಸೇರಿದರು; 1925ರಲ್ಲಿ ಸರ್ಕಾರಿ ಸೋಪ್ ಫ್ಯಾಕ್ಟರಿಯ ಇಂಡಸ್ಟ್ರಿಯಲ್ ಕೆಮಿಸ್ಟ್; ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ಡೈರೆಕ್ಟರಾಗಿ ನಿವೃತ್ತರಾದರು; ಸಾಹಿತಿ; ನಿವಾಸ: ಸರ್ ಕೃಷ್ಣರಾವ್ ರೋಡ್, ಬಸವನಗುಡಿ, ಬೆಂಗಳೂರು-4.

ಶಿವರಾಂ, ಡಾ|| ಎಂ., ವೈದ್ಯರು ಮತ್ತು "ಕೊರವಂಜಿ" ತಿಳಿನಗೆ ಮಾಸಪತ್ರಿಕೆಯ ಸಂಪಾದಕರು. ಇಂಡಸ್ಟ್ರಿಯಲ್ ಟೆಸ್ಟಿಂಗ್ ಲ್ಯಾಬೊರೇಟರಿಯ ಮ್ಯಾನೇಜಿಂಗ್ ಡೈರೆಕ್ಟರು. 1952ರಲ್ಲಿ ಮೈಸೂರು ವಿವಾ ಸಂಧಾರಣೆ ಸಮಿತಿಯ ಸದಸ್ಯರಾಗಿದ್ದರು. ನಿವಾಸ: ಮಲ್ಲೇಶ್ವರಂ, ಬೆಂಗಳೂರು.

ಶಿವಪ್ಪ, ಎಂ. ಎಸ್., ಕಲ್ಯಾಣ ಭವನ ಮಾಲೀಕರು. 1903ರಲ್ಲಿ ಜನನ. 1921ರಲ್ಲಿ ವ್ಯಾಪಾರಕ್ಕೆ ತೊಡಗಿದರು. ನಿವಾಸ: ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಿವಮೂರ್ತಿಶಾಸ್ತ್ರಿ, ಬಿ., ಆಸ್ಥಾನ ವಿದ್ವಾನ್, ಪಂಡಿತರತ್ನಂ; ಸಂಪಾದಕರು 'ಶರಣ ಸಾಹಿತ್ಯ; ಅಖಿಲ ಕರ್ನಾಟಕ ಏಕೀಕರಣ ಸಮಿತಿಯ ಸದಸ್ಯರು; 'ಸ್ವತಂತ್ರ ಕರ್ನಾಟಕ' ವಾರಪತ್ರಿಕೆಗೆ ಕೆಲಕಾಲ ಸಂಪಾದಕರಾಗಿದ್ದರು; ನಿವಾಸ: ರಂಗಸ್ವಾಮಿ ದೇವಸ್ಥಾನದ ರಸ್ತೆ, ಬೆಂಗಳೂರು-2.

ಶಿವಶಂಕರ್, ಪಿ., ಪ್ರೊಫೆಸರ್, ಸರಕಾರಿ ಲಾ ಕಾಲೇಜ್, ಮತ್ತು ಮೈಸೂರಿನ ಚೀಫ್ ಸ್ಕೌಟ್ ಕಮಿಷನರ್; ಜನ್ಮ 1906; ವಿದ್ಯಾಭ್ಯಾಸಾನಂತರ ಅಡ್ವೊಕೇಟರಾದರು; ಕೆಲ ದಿನ ಬೆಂಗಳೂರು ಪೌರಸಭೆ ಸದಸ್ಯರಾಗಿದ್ದರು; 1948ರಲ್ಲಿ ಲಾ ಕಾಲೇಜಿನ ಪ್ರೊಫೆಸರಾದರು; ನಿವಾಸ: ಬುಲ್ ಟೆಂಪಲ್ ರೋಡ್, ಶಂಕರಪುರ, ಬೆಂಗಳೂರು.

ಶ್ರೀನಿವಾಸ್, ಎಸ್., ಸಹಕಾರಿಗಳು. ಮೈಸೂರು ಪ್ರಾಂತಿಕ ಕೋ-ಆಪರೇಟಿವ್ ಇನ್ಸ್‌ಟಿಟ್ಯೂಟಿನ ಅಧ್ಯಕ್ಷರು. ಮೈಸೂರು ಪ್ರಾಂತಿಕ ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರು. ಜನನ 1909. 1943-47ರಲ್ಲಿ

ಬೆಂಗಳೂರು ದಂಡಿನ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರು. 1948-51ರಲ್ಲಿ ಅಪೆಕ್ಸ್‌ಬ್ಯಾಂಕ್ ಅಧ್ಯಕ್ಷರು. 1948ರಿಂದ ಇಂಡಿಯನ್ ಕೋ-ಆಪರೇಟಿವ್ ಯೂನಿಯನ್ ಉಪಾಧ್ಯಕ್ಷರು. 1949-53ರಲ್ಲಿ ಕೋ-ಆಪರೇಟಿವ್ ಪ್ರಿಂಟರ್ಸ್ ಅಧ್ಯಕ್ಷರು. 1945 ರಿಂದ ಎಸ್. ಪಿ. ಸಿ. ಎ. ಕಾರ್ಯದರ್ಶಿ. 1945-49ರಲ್ಲಿ ಬೆಂಗಳೂರು ದಂಡಿನ ಗೌರವ ಮ್ಯಾಜಿಸ್ಟ್ರೇಟ್. ವಾಸ: ಸಿವಿಲ್ ಸ್ಟೇಷನ್, ಬೆಂಗಳೂರು.

ಶ್ರೀನಿವಾಸನ್ ಎಂ. ಎ., ಜನ್ಮ ಸೆಪ್ಟೆಂಬರ್ 20, 1897; ಮದ್ರಾಸ್ ಹಿಂದು ಹೈಸ್ಕೂಲಿನಲ್ಲಿ, ಬೆಂಗಳೂರು ಸೆಂಟ್ರಲ್ ಕಾಲೇಜು ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ; 1918ರಲ್ಲಿ ಮೈಸೂರು ಸಿವಿಲ್ ಸರ್ವಿಸಿಗೆ ಪ್ರವೇಶ; ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ; ಎರಡಾವರ್ತಿ ವಿದೇಶಗಳಿಗೆ ಡೆಪ್ಯುಟ್ ಆಗಿದ್ದರು; 1943ರಲ್ಲಿ ಮೈಸೂರಿನ ಸರಬರಾಜ್ ಮಂತ್ರಿ, 1945-46ರಲ್ಲಿ ವ್ಯವಸಾಯ ಮಂತ್ರಿ, 1947–48ರಲ್ಲಿ ಗ್ವಾಲಿಯರ್ ಮುಖ್ಯಮಂತ್ರಿ; ಕೋಲಾರ ಚಿನ್ನದ ಗಣಿಯ ಕಂಪನಿಗಳ ಅಧ್ಯಕ್ಷರು, ಏರ್‌ಇಂಡಿಯಾ ಇಂಟರ್‌ನ್ಯಾಷನಲ್ ಡೈರೆಕ್ಟರು ಮತ್ತು ಬಂಕಿಗ್‌ಹ್ಯಾಂ ಮತ್ತು ಕರ್ನಾಟಿಕ್ ಮಿಲ್ ಡೈರೆಕ್ಟರು. ವಿಳಾಸ: ಹೈಗ್ರೌಂಡ್ಸ್, ಬೆಂಗಳೂರು.

ಶ್ರೀನಿವಾಸನ್, ಕೆ., ಹೈದರಾಬಾದ್ ಸರ್ಕಾರದ ಚೀಫ್ ಸೆಕ್ರೆಟರಿ; ಜನ್ಮ 1902; ವಿದ್ಯಾಭ್ಯಾಸಾನಂತರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಡಿಮಾನ್‌ಸ್ಟ್ರೇಟರಾದರು 1922ರಲ್ಲಿ; 1925ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪ್ರವೇಶಿಸಿದರು; 1944ರಲ್ಲಿ ಮೈಸೂರು ಆಹಾರ ಇಲಾಖಾ ಡೈರೆಕ್ಟರು; 1946-47ರಲ್ಲಿ ಮೈಸೂರು ಸರ್ಕಾರದ ಆಹಾರ ಮತ್ತು ಸಿವಿಲ್ ಸಪ್ಲೈಸ್ ಸೆಕ್ರೆಟರಿ; 1948-50 ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ; 1951-52ರಲ್ಲಿ ಮೈಸೂರು ರೆವಿನ್ಯೂ ಕಮೀಷನರು.

ಶ್ರೀನಿವಾಸನ್, ಪಿ. ಬಿ., ಸಂಪಾದಕರು, 'ತಾಯಿನಾಡು', ಜನ್ಮ 1910; ವಿದ್ಯಾಭ್ಯಾಸಾನಂತರ ಆಂಧ್ರಪತ್ರಿಕೆಯ ಬೆಂಗಳೂರು ಬಾತ್ಮೀದಾರರು 1932; ತಾಯಿನಾಡು ಪತ್ರಿಕಾ ಸಂಪಾದಕರು 1938ರಿಂದ; ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರು 1943, 1946; ಇಂಗ್ಲೆಂಡ್ ಮತ್ತು ಯೂರೋಪಿಗೆ ಭೇಟಿ 1936, 1937 ಮತ್ತು 1950; ತಾಯಿನಾಡು ಯುದ್ಧ ಬಾತ್ಮೀದಾರರು ಬರ್ಮಾದಲ್ಲಿ 1945; ಸಂಯುಕ್ತ ಸಂಸ್ಥಾನ ಸರ್ಕಾರದ ಆಹ್ವಾನದ ಮೇಲೆ ಅಮೆರಿಕಾದಲ್ಲಿ ಪ್ರವಾಸ 1952.

ಶ್ರೀನಿವಾಸಯ್ಯಂಗಾರ್, ಎಸ್., ಬಿ.ಇ., ಮೈಸೂರು ಅಸೆಂಬ್ಲಿಯ ಸದಸ್ಯರು. 1939ರಿಂದ ಟಿ. ನರಸೀಪುರ ಪೌರಸಭೆಯ ಅಧ್ಯಕ್ಷರು. ಜಮೀನ್ದಾರ್ ಮತ್ತು ಸಹಕಾರಿ. 1950ರಲ್ಲಿ ಮೈಸೂರು ಕೋ-ಆಪರೇಟಿವ್ ಇನ್‌ಸ್ಟಿಟ್ಯೂಟ್ ಕಾರ್ಯದರ್ಶಿ. 1910ರಲ್ಲಿ ಜನನ. ವಾಸ: ಟಿ. ನರಸೀಪುರ, ಮೈಸೂರು ಜಿಲ್ಲೆ.

ಶ್ರೀನಿವಾಸಯ್ಯಂಗಾರ್, ಕೆ. ಆರ್., ದಿವಾನ್ ಬಹದ್ದೂರ್ ರಾಜಸಭಾ ಭೂಷಣ; ಜನ್ಮ 1871; ಮೈಸೂರು ಸಿವಿಲ್ ಸರ್ವಿಸಿಗೆ ಪ್ರವೇಶ 1892; ಮೈಸೂರು ಸರ್ಕಾರದ ಜನರಲ್ ಸೆಕ್ರೆಟರಿ 1912; ಮೈಸೂರು ಎಗ್ಸಿಕ್ಯುಟಿವ್ ಕೌನ್ಸಿಲ್ ಸದಸ್ಯರಾಗಿ ನಿವೃತ್ತರಾದರು: ಮೈಸೂರು ರಾಜ್ಯಾಂಗ ಸುಧಾರಣಾ ಸಮಿತಿ ಅಧ್ಯಕ್ಷರು 1938; ಮೈಸೂರು ನ್ಯಾಯವಿಧಾಯಕ ಸಭೆ ಸದಸ್ಯರಾಗಿದ್ದರು; ಮೈಸೂರು ಸ್ಪಿನ್ಸಿಲ್ಕ್ ಮಿಲ್ಸ್ ಅಧ್ಯಕ್ಷರಾಗಿದ್ದರು.

ಶ್ರೀನಿವಾಸ ಶೆಟ್ಟಿ, ಎಸ್. ವಿ., ಧರ್ಮ ಪ್ರಕಾಶ; ಜನ್ಮ 1900; ವಿದ್ಯಾಭ್ಯಾಸಾನಂತರ 1915ರಲ್ಲಿ ವ್ಯಾಪಾರ ಶುರು ಮಾಡಿದರು; ವೈಶ್ಯ ಬ್ಯಾಂಕಿನ ಚೇರ್ಮನ್; ದಾವಣಗೆರೆ ಕಾಟನ್ ಮಿಲ್ಸ್, ಮೈಸೂರು ಸ್ಟಾಂಡರ್ಡ್ ಬ್ಯಾಂಕ್, ಮುಂತಾದ ಸಂಸ್ಥೆಗಳ ಡೈರೆಕ್ಟರಾಗಿದ್ದರು; 1938-40ರಲ್ಲಿ ಪ್ರಜಾಪ್ರತಿನಿಧಿಸಭೆ ಸದಸ್ಯರು; 1928-35 ರಲ್ಲಿ ಬೆಂಗಳೂರು ಪೌರಸಭೆ ಸದಸ್ಯರು; ಬೆಂಗಳೂರು ಕಾರ್ಪೊರೇಷನ್ ಸದಸ್ಯರಾಗಿದ್ದರು; ಒಳ್ಳೆಯ ಧರ್ಮಶೀಲರು; ನಿವಾಸ: ವಿಶ್ವೇಶ್ವರಪುರ, ಬೆಂಗಳೂರು-2.

ಶ್ರೀ ಸತ್ಯನ್, ಬಿ. ಎನ್., ಪ್ರಿನ್ಸಿಪಲ್ ಇನ್ಫರ್ಮೇಷನ್ ಆಫೀಸರ್, ಮೈಸೂರು ಸರ್ಕಾರ; ಜನ್ಮ 1912; ಮೈಸೂರು ಸರ್ಕಾರದಲ್ಲಿ ಪಬ್ಲಿಸಿಟಿ ಪ್ರೊಬೇಷನರಾಗಿ ನೇಮಕ 1937; ಅಸಿಸ್ಟೆಂಟ್ ಪಬ್ಲಿಸಿಟಿ ಆಫೀಸರ್ 1939-49; ಪ್ರಿನ್ಸಿಪಲ್ ಇನ್ಫರ್ಮೇಷನ್ ಆಫೀಸರ್ 1949 ರಿಂದ.

ಶೇಷಗಿರಿರಾವ್. ಕೆ., ಬಳ್ಳಾರಿಜಿಲ್ಲಾಧಿಕಾರಿ. ಮೈಸೂರು ರಾಜಪ್ರಮುಖರ ಪ್ರೈವೇಟ್ ಸೆಕ್ರೆಟರಿಯಾಗಿದ್ದರು. ಜನ್ಮ 1906; ವಿದ್ಯಾಭ್ಯಾಸಾನಂತರ 1929 ರಲ್ಲಿ ಮೈಸೂರು ಸರ್ಕಾರದ ಸರ್ವಿಸಿಗೆ ಪ್ರವೇಶ.

ಶೇಷಪ್ಪ, ಪಿ., ಸಂಪಾದಕರು, "ಕಿಡಿ" ಕನ್ನಡ ವಾರಪತ್ರಿಕೆ, ಬೆಂಗಳೂರು; ಜನ್ಮ 1918; ವಿದ್ಯಾಭ್ಯಾಸ ಮುಗಿಸಿಕೊಂಡು 1943ರಲ್ಲಿ ಪತ್ರಿಕೋದ್ಯೋಗಕ್ಕೆ ಪ್ರವೇಶ; ವಿಶ್ವಕರ್ನಾಟಕ, ಮಾತೃಭೂಮಿ ಮತ್ತು ಒಕ್ಕಲಿಗರ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದರು; 1947ರಲ್ಲಿ ಸ್ವಾತಂತ್ರ್ಯೋದಯ ಪತ್ರಿಕಾ ಸಂಪಾದಕರಾದರು; ಸರಕಾರದಿಂದ ಆ ಪತ್ರಿಕೆ ನಿಲ್ಲಿಸಲ್ಪಟ್ಟಮೇಲೆ 1948ರಲ್ಲಿ 'ಕಿಡಿ' ಪತ್ರಿಕೆ ಆರಂಭಿಸಿದರು; ಪೋಲೀಸ್ ಮುಷ್ಕರದ ಸಂಬಂಧದಲ್ಲಿ ಬಂಧಿತರಾಗಿದ್ದು, ಹೈಕೋರ್ಟಿನಿಂದ ಬಿಡುಗಡೆ ಮಾಡಲ್ಪಟ್ಟರು. ಕೆಲಕಾಲ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಸದಸ್ಯರಾಗಿದ್ದರು. ವಿಳಾಸ: 11-a, ಜಯಚಾಮರಾಜ ರಸ್ತೆ, ಬೆಂಗಳೂರು 2.

ಶೇಷಾಚಲಂ, ಟಿ., ಶಸ್ತ್ರವೈದ್ಯ ಪ್ರವೀಣ. ಜನ್ಮ ಏಪ್ರಿಲ್ 5, 1890; 1918ರಲ್ಲಿ ಅಸಿಸ್ಟೆಂಟ್ ಸರ್ಜನರಾಗಿ ಸರಕಾರಿ ಉದ್ಯೋಗಕ್ಕೆ ಪ್ರವೇಶ; 1943 ರಿಂದ ದರ್ಬಾರ್ ಸರ್ಜನ್; ಬೆಂಗಳೂರು ಮೆಡಿಕಲ್ ಸ್ಕೂಲಿನ ಪ್ರಿನ್ಸಿಪಾಲರು 1948; ಆಸ್ಪತ್ರೆಗಳ ಡೈರೆಕ್ಟರು, ಬೆಂಗಳೂರು, 1948-51; ಅನಂತರ ಸರ್ವಿಸಿನಿಂದ ನಿವೃತ್ತರಾದರು. ನಿವಾಸ: ಬಸವನಗುಡಿ, ಬೆಂಗಳೂರು.

ಶೇಷಾಚಾರ್, ಕೆ. ಆರ್., ರಾಜಸೇವಾ ಪ್ರಸಕ್ತ, ದಿವಾನ್ ಬಹದ್ದೂರ್; ಮೈಸೂರಿನ ನಿವೃತ್ತ ಚೀಫ್ ಇಂಜನಿಯರು; ಮೈಸೂರು ವಿಧಾನಪರಿಷತ್ತಿನ ಸದಸ್ಯರು; ಜನ್ಮ 1870; 1898ರಲ್ಲಿ ಓವರ್‌ಸಿಯರಾಗಿ ಮೈಸೂರು ಸರಕಾರಿಸರ್ವಿಸಿಗೆ ಪ್ರವೇಶ; 1917ರಲ್ಲಿ ಬೆಂಗಳೂರು ಎಂಜನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರು; 1923ರಲ್ಲಿ ಚೀಫ್ ಎಂಜನಿಯರ್; 1950ರಲ್ಲಿ ಕೃಷ್ಣರಾಜಸಾಗರ ವಿಚಾರಣಾಸಮಿತಿಯ ಸದಸ್ಯರು; ನಿವಾಸ: ಬಸವನಗುಡಿ, ಬೆಂಗಳೂರು.

ಶೇಷಾದ್ರಿ, ಎಂ., ಜನ್ಮ 1895; ವಿದ್ಯಾಭ್ಯಾಸವಾದಮೇಲೆ 1916ರಲ್ಲಿ ಮೈಸೂರು ಸಿವಿಲ್ ಸರ್ವಿಸಿಗೆ ಪ್ರವೇಶ; 1942ರಲ್ಲಿ ಐ.ಜಿ.ಪಿ.; 1943ರಲ್ಲಿ ರೆವಿನ್ಯೂ ಕಮಿಷನರ್; ಮಂತ್ರಿಯಾಗಿ ನಿವೃತ್ತರಾದರು; ಹೈದರಾಬಾದಿನ ರೆವಿನ್ಯೂ ಮಂತ್ರಿಯಾಗಿದ್ದರು; ಮೈಸೂರು ಮಹಾರಾಜರಿಂದ 'ರಾಜಸೇವಾಪ್ರಸಕ್ತ' ಬಿರುದು.

ಶಂಕರಯ್ಯ, ಎಂ., ಬಿ.ಎ., ಎಲ್‌ಎಲ್.ಬಿ., ಅಡ್ವೊಕೇಟ್ ಮತ್ತು ಮೈಸೂರು ವಿಧಾನ ಪರಿಷತ್ತಿನ ಸದಸ್ಯರು. 1908ರಲ್ಲಿ ಜನನ. 1931ರಲ್ಲಿ ವಕೀಲರಾದರು. 1934-38ರಲ್ಲಿ ಮೈಸೂರು ನಗರ ಸಭೆ ಸದಸ್ಯರು. 1941-46ರಲ್ಲಿ ಮೈಸೂರು ನಗರ ಸಭೆ ವಕೀಲರು. 1949-50ರಲ್ಲಿ ಮೈಸೂರು ಜಿಲ್ಲಾ ಬೋರ್ಡಿನ ಸದಸ್ಯರು. 1950-52 ಪಾರ್ಲಿಮೆಂಟ್ ಸದಸ್ಯರು. ಮೈಸೂರು ಫುಡ್ ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟ್ ಕಮಿಟಿಯ ಸದಸ್ಯರು. ವಿಳಾಸ: ಇರ್ವಿನ್ ರಸ್ತೆ, ಮೈಸೂರು.

ಸಫಿ ದಾರಾಷ, ಬಿ.ಎ., ಐ. ಎ. ಎಸ್., ಮೈಸೂರು ಮಹಾರಾಜರ ಪ್ರೈವೇಟ್ ಸೆಕ್ರೆಟರಿ. 1906ರಲ್ಲಿ ಹುಟ್ಟಿದ್ದು. 1928ರಲ್ಲಿ ಮೈಸೂರು ಸರ್ಕಾರದಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ಕೆಲಸಕ್ಕೆ ಸೇರಿದರು. ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದರು. 1943ರಲ್ಲಿ ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿದ್ದರು. 1945ರಲ್ಲಿ ಮಂಡ್ಯ ಡೆಪ್ಯುಟಿ ಕಮಿಷನರಾಗಿದ್ದರು. 1948ರಲ್ಲಿ ಬೆಂಗಳೂರು ಮುನಿಸಿಪಲ್ ಕಮಿಷನರಾಗಿದ್ದರು. 1952ರಲ್ಲಿ ಚಿಕ್ಕಮಗಳೂರು ಡೆಪ್ಯುಟಿ ಕಮಿಷನರಾಗಿದ್ದರು. ವಿಳಾಸ: ನಜರಬಾದು, ಮೈಸೂರು.

ಸಂಪದ್ಗಿರಿರಾವ್, ಕೆ., ತ್ರಿವೇಣಿ ಪತ್ರಿಕೆಯ ಸಹ ಸಂಪಾದಕರು ಮತ್ತು ಮೈಸೂರು ವಿಧಾನ ಪರಿಷತ್ತಿನ ಸದಸ್ಯರು; ನ್ಯಾಷನಲ್ ಕಾಲೇಜಿನ ವೈಸ್-ಪ್ರಿನ್ಸಿಪಾಲರು, ಹಿಂದೆ ಪ್ರಿನ್ಸಿಪಾಲರಾಗಿದ್ದರು; ಜನ್ಮ 1897; ವಿದ್ಯಾಭ್ಯಾಸಾನಂತರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ 1920ರಲ್ಲಿ ಇಂಗ್ಲಿಷ್ ಲೆಕ್ಚರರಾದರು; 1927ರಲ್ಲಿ ಬೆಂಗಳೂರು ದೇಶೀಯ ವಿದ್ಯಾಶಾಲೆಗೆ ಪ್ರವೇಶ, ಹಲವು ಬಾರಿ ಅಲ್ಲಿ ಪ್ರಧಾನೋಪಾಧ್ಯಾಯರಾಗಿದ್ದರು; ಗಾಂಧೀಜಿಯು ಹಾಕಿ ಕೊಟ್ಟ ರಚನಾತ್ಮಕ ಕಾರ್ಯಕ್ರಮದಲ್ಲಿ ಹೆಚ್ಚು ಆಸಕ್ತಿ; ರಿ... ಸತ್ ಹಿಂದಿ ಪ್ರಚಾರ ಸಮಿತಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸಮಿತಿಗಳಲ್ಲಿದ್ದರು; ಸೆಕೆಂಡರಿ ವಿದ್ಯಾಭ್ಯಾಸ ಬೋರ್ಡ

ಮೂಲ ವಿದ್ಯಾಭ್ಯಾಸ ಸಮಿತಿ ಮತ್ತು ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ಸದಸ್ಯರು; ಶ್ರೀ ಸಿ. ರಾಜಗೋಪಾಲಾಚಾರಿಯವರ ಹಲವು ತಮಿಳು ಪುಸ್ತಕಗಳ ಅನುವಾದಕರು; ನಿವಾಸ: 47, ಅಪ್ಪುರಾವ್ ರೋಡ್, ಚಾಮರಾಜಪೇಟೆ, ಬೆಂಗಳೂರು-2.

ಸಾವಿತ್ರಿಬಾಯಿ ಆರ್. ನಾಗನಗೌಡ, ಎಂ.ಬಿ.ಬಿ.ಎಸ್., ಮೈಸೂರು ಆರೋಗ್ಯ ಮಂತ್ರಿ ಡಾ|| ಆರ್. ನಾಗನಗೌಡರ ಪತ್ನಿ. ಬೆಳಗಾಂ ಜಿಲ್ಲೆಯವರು. ಧಾರವಾಡ ಕರ್ನಾಟಕ ಕಾಲೇಜಿನಲ್ಲಿಯೂ, ಅನಂತರ ಬೊಂಬಾಯಿ ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿಯೂ ವ್ಯಾಸಂಗಮಾಡಿ 1930ರಲ್ಲಿ ಡಿಗ್ರಿ ಪಡೆದರು. ಆಮೇಲೆ 2 ವರ್ಷಕಾಲ ಲೇಡಿ ಬಟ್ಲರ್ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದರು. 1935ರಲ್ಲಿ ವಿವಾಹವಾಗಿ ಹೊಸಪೇಟೆಗೆ ಬಂದರು. ಹೊಸಪೇಟೆಯಲ್ಲಿ ಹಲವಾರು ಸಂಸ್ಥೆಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ವಿಮಾನು ಅಡಮಾನ ಬ್ಯಾಂಕಿನ ಮತ್ತು ಹೊಸಪೇಟೆ ಕೋ-ಆಪರೇಟಿವ್ ಸ್ಟೋರ್ಸಿನ ಅಧ್ಯಕ್ಷರಾಗಿದ್ದರು. ಬಳ್ಳಾರಿ ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದರು. ವಿಳಾಸ: ಸ್ಪ್ರಿಂಗ್ಸ್, ಬೆಂಗಳೂರು.

ಸಿಂಗಾರವೇಲು ಮೊದಲಿಯಾರ್, .ಟಿ., ರಾಜಧರ್ಮಪ್ರಸಕ್ತ, ಮೈಸೂರು ಹೈಕೋರ್ಟಿನ ನಿವೃತ್ತ ಜಡ್ಜರು: ಇಂಡಸ್ಟ್ರಿಯಲ್ ಟ್ರಿಬ್ಯುನಲ್ಲಿನ ಅಧ್ಯಕ್ಷರು; ಜನ್ಮ 1884; 1911ರಲ್ಲಿ ಅಡ್ವೊಕೇಟರಾದರು; 1915ರಲ್ಲಿ ಮುನ್ಸೀಫರಾಗಿ ನೇಮಿತರಾದರು; 1924-8 ಸರಕಾರದ ಅಸಿಸ್ಟೆಂಟ್ ಸೆಕ್ರೆಟರಿ; 1938ರಲ್ಲಿ ಹೈಕೋರ್ಟಿನ ರಿಜಿಸ್ಟ್ರಾರ್; 1931-32-33 ರಲ್ಲಿ ರೌಂಡ್ ಟೇಬಲ್ ಸಮ್ಮೇಳನದ ಸಂಬಂಧದಲ್ಲಿ ಲಂಡನಿಗೆ ಭೇಟಿ; 1937ರಲ್ಲಿ ಹೈಕೋರ್ಟು ಜಡ್ಜರು; 1944 ನಿವೃತ್ತರಾದರು; ಮೈಸೂರು ವಿಶ್ವವಿದ್ಯಾಲಯದ ಪ್ರೊ ಛಾನ್ಸಲರು 1944-45; ಮೈಸೂರು ಸಂಸ್ಥಾನದ ಕ್ರಿಕೆಟ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದರು; ಒಳ್ಳೆ ಗಾಲ್ಫ್ ಆಟಗಾರರು; ನಿವಾಸ: ಲಕ್ಷ್ಮೀ ವಿಳಾಸ, ಬಸವನಗುಡಿ, ಬೆಂಗಳೂರು.

ಸಿದ್ದಪ್ಪ, ಎಲ್., ಜನ್ಮ 1901; ಲಾ ಪದವೀಧರರಾದಮೇಲೆ 1929ರಲ್ಲಿ ಅಡ್ವೊಕೇಟರಾದರು; 1940 ಮತ್ತು 1945-49 ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು; 1945–47ರಲ್ಲಿ ಮೈಸೂರು ಮಂತ್ರಿ; 1948-49ರಲ್ಲಿ ಮೈಸೂರು ರಾಜ್ಯಾಂಗ ಸಭೆ ಸದಸ್ಯರು; 1950 ರಿಂದ ಮೈಸೂರು ವಿಧಾನ ಸಭೆ ಸದಸ್ಯರು; ವಿಳಾಸ: ಶಿವಮೊಗ್ಗ.

ಸಿದ್ದಯ್ಯ, ಎಚ್., ಮೈಸೂರು ವಿಧಾನ ಸಭೆಯ ಅಧ್ಯಕ್ಷರು; ಜನ್ಮ 1901; ಲಾ ಪದವೀಧರರಾಗಿ 1925ರಲ್ಲಿ ಅಡ್ವೊಕೇಟರಾದರು ಮತ್ತು ಸಾರ್ವಜನಿಕ ಜೀವನ ಪ್ರವೇಶಿಸಿದರು; 1937ರಲ್ಲಿ ಕಾಂಗ್ರೆಸಿಗೆ ಪ್ರವೇಶ; 1941-42ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರು; ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿ ಹಲವು ಬಾರಿ ಬಂದೀವಾಸ ಅನುಭವಿಸಿದರು; 1947–52ರ ವರೆಗೆ ಮೈಸೂರು ರೆವಿನ್ಯು ಮಂತ್ರಿ; ವಾಸ: ಸರ್ ಕೃಷ್ಣರಾವ್ ರೋಡ್, ಬಸವನಗುಡಿ, ಬೆಂಗಳೂರು-4.

ಸಿದ್ದಲಿಂಗಯ್ಯ, ಟಿ., ಮೈಸೂರು ವಿಧಾನ ಸಭೆ ಸದಸ್ಯರು ಮತ್ತು ಮೈಸೂರು ಸರ್ಕಾರದ ಮಾಜಿ ಮಂತ್ರಿ ; ಜನ್ಮ 1897 ; ವಿದ್ಯಾಭ್ಯಾಸ ಮುಗಿಸಿ 1924ರಲ್ಲಿ ಅಡ್ವೊಕೇಟರಾದರು ; ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳಲ್ಲಿ ಹಲವು ಸಾರಿ ಸದಸ್ಯರಾಗಿದ್ದರು; 1936ರಲ್ಲಿ ಕಾಂಗ್ರೆಸಿಗೆ ಪ್ರವೇಶ ; 1938 ಮತ್ತು 1947-50ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರು ; 1950ರ ಫೆಬ್ರವರಿಯಿಂದ ಡಿಸೆಂಬರ್‌ವರೆಗೆ ಮೈಸೂರು ವಿದ್ಯಾ ಮಂತ್ರಿ ; 1952 ಏಪ್ರಿಲಿನಿಂದ 1953ರ ಫೆಬ್ರವರಿವರೆಗೆ ಮೈಸೂರು ಕೈಗಾರಿಕಾ ಮಂತ್ರಿ ; ಕಾಂಗ್ರೆಸ್ ಚಳುವಳಿಗಾಗಿ ಅನೇಕ ಸಾರಿ ತುರಂಗವಾಸ ; 1932ರಲ್ಲಿ ಪ್ರಪಂಚ ಪ್ರವಾಸ ಮಾಡಿ ಬಂದರು ; ವಿಳಾಸ : ಲ್ಯಾಂಗ್‌ಫರ್ಡ್ ಗಾರ್ಡನ್ಸ್, ಸಿವಿಲ್ ಏರಿಯಾ, ಬೆಂಗಳೂರು.

ಸಿದ್ದವೀರಪ್ಪ, ಎಚ್., ಮೈಸೂರು ಸರಕಾರದ ಒಳಾಡಳಿತ ಮತ್ತು ಕೈಗಾರಿಕೆ ಮಂತ್ರಿ ; ವಿದ್ಯಾಭ್ಯಾಸ ಮುಗಿಸಿಕೊಂಡು ಅಡ್ವೊಕೇಟರಾದರು ; ದಾವಣಗೆರೆಯಲ್ಲಿ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸೊಸೈಟಿ ಸ್ಥಾಪಿಸಿದರು ; 1945-49ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭಾ ಸದಸ್ಯರು ; 1947-49ರಲ್ಲಿ ಭಾರತ ರಾಜ್ಯಾಂಗ ಸಭೆ ಸದಸ್ಯರು ; 1952ರಲ್ಲಿ ಮೈಸೂರು ವಿಧಾನ ಸಭೆಗೆ ಹರಿಹರದಿಂದ ಚುನಾಯಿತರಾದರು ; 1953ನೇ ಕೊನೆಯಲ್ಲಿ ರೋಂನಲ್ಲಿ ನಡೆದ ಅಂತರರಾಷ್ಟ್ರೀಯ ಆಹಾರ ಮತ್ತು ವ್ಯವಸಾಯ ಸಮ್ಮೇಳನಕ್ಕೆ ಭಾರತದ ಬದಲಿ ನಾಯಕರಾಗಿ ಹೋಗಿದ್ದರು.

ಸಿರಸಪ್ಪ ಇಜಾರಿ, ಮೈಸೂರು ಅಸೆಂಬ್ಲಿಯ ಸದಸ್ಯರು 1953ನೇ ಅಕ್ಟೋಬರಿಂದ. ಹಿಂದೆ ಮದ್ರಾಸು ಅಸೆಂಬ್ಲಿಯ ಸದಸ್ಯರಾಗಿದ್ದರು. ಮೊದಲಿಂದಲೂ ಕಾಂಗ್ರೆಸ್ಸಿನವರು. ವಾಸ : ಹರಪನಹಳ್ಳಿ, ಬಳ್ಳಾರಿ ಜಿಲ್ಲೆ.

ಸೀತಾರಾಮಯ್ಯ, ಪಿ., ಜನ್ಮ 1893; ಲಾ ಪದವೀಧರರಾದ ಮೇಲೆ 1920ರಲ್ಲಿ ಅಡ್ವೊಕೇಟರಾದರು ; ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು 1926-49 ; ಮೈಸೂರು ನಗರ ಸಭೆಯ ಅಧ್ಯಕ್ಷರು 1948 ; ಮೈಸೂರು ನಗರಾಭಿವೃದ್ಧಿ ಟ್ರಸ್ಟ್ ಬೋರ್ಡಿನ ಅಧ್ಯಕ್ಷರು 1948 ; ಸಹಕಾರ ಸಂಸ್ಥೆಗಳಲ್ಲಿ ವಿಪುಲ ಸೇವೆ ಸಲ್ಲಿಸಿದ್ದಾರೆ.

ಸೀತಾರಾಮಯ್ಯ, ವಿ., ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಪ್ರೊಫೆಸರು; 1953ರಲ್ಲಿ ಕುಮಟದಲ್ಲಿ ನಡೆದ ಕನ್ನಡಸಾಹಿತ್ಯ ಸಮ್ಮೇಳನದ ಅಧ್ಯಕ್ಷರು; ಜನ್ಮ 1899; 1928ರಲ್ಲಿ ಕನ್ನಡ ಲೆಕ್ಚರರಾಗಿ ವಿಶ್ವವಿದ್ಯಾಲಯ ಪ್ರವೇಶಿಸಿದರು; 1942ರಲ್ಲಿ ಅಸಿಸ್ಟೆಂಟ್ ಪ್ರೊಫೆಸರರಾದರು; 1948-49ರಲ್ಲಿ ಚಿಕ್ಕಮಗಳೂರು ಇಂಟರ್‌ಮಿಡಿಯಟ್ ಕಾಲೇಜು ಸೂಪರಿಂಟೆಂಡೆಂಟರು ; 'ಪ್ರಬುದ್ಧ ಕರ್ನಾಟಕ'ದ ಸಂಪಾದಕರಾಗಿದ್ದರು ; ಗೀತೆಗಳು, ದೀಪಗಳು, ಪಂಪಾಯಾತ್ರೆ, ಹಣಪ್ರಪಂಚ, ಸೋಹ್ರಾಬ್ ಮತ್ತು ರುಸ್ತುಂ ಮುಂತಾದುವುಗಳ ಕರ್ತೃ. ನಿವಾಸ: ಎರಡನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು 2.

ಸೀತಾರಾಮರೆಡ್ಡಿ, ಹೆಚ್., ಬಿ. ಎ., ಬಿ. ಎಲ್., ಮಾಜಿ ಮದ್ರಾಸ್ ರೆವೆನ್ಯು ಮಂತ್ರಿ. ರಾಜಕೀಯ ಚಳುವಳಿಯ ಮುಖಂಡರಲ್ಲೊಬ್ಬರು. ಸಹಕಾರ ಕ್ಷೇತ್ರದಲ್ಲಿ ಬಹಳ ದುಡಿದಿದ್ದಾರೆ. ಬಳ್ಳಾರಿ ಸಹಕಾರಸ್ಟೋರ್ಸಿನ ಅಧ್ಯಕ್ಷರಾಗಿದ್ದರು. ಭಾರತ ರಾಜ್ಯಾಂಗಸಭಾ ಸದಸ್ಯರಾಗಿದ್ದರು. ಆಂಧ್ರ ಮತ್ತು ಮದ್ರಾಸ್ ವಿಶ್ವವಿದ್ಯಾನಿಲಯಗಳ ಸೆನೆಟ್ ಸದಸ್ಯರಾಗಿದ್ದರು. ಕೇಂದ್ರ ಹತ್ತಿ ಸಮಿತಿ, ಕೇಂದ್ರ ವ್ಯವಸಾಯ ಸಂಶೋಧನ ಸಂಸ್ಥೆ, ಕೇಂದ್ರ ಕೈಗಾರಿಕೆ ಮತ್ತು ವೈಜ್ಞಾನಿಕ ಸಂಶೋಧನ ಸಮಿತಿ ಮುಂತಾದುವುಗಳ ಸದಸ್ಯರಾಗಿದ್ದರು. ವಿಳಾಸ: ಬಳ್ಳಾರಿ.

ಸೀತಾರಾಮಶಾಸ್ತ್ರಿ, ಎಂ., ಪತ್ರಿಕೋದ್ಯೋಗಿ; ಜನ್ಮ 1893; 1913ರಲ್ಲಿ 'ಆರ್ಯ ಮಹಿಳಾ' ಎಂಬ ಕನ್ನಡ ಮಾಸ ಪತ್ರಿಕೆ ಸಂಪಾದಕರು; 1928ರಲ್ಲಿ ಗ್ರಾಮಜೀವನ ಪತ್ರಿಕೆ ಸಂಪಾದಕರು; ಸಂಪದಭ್ಯುದಯ ಪತ್ರಿಕೆ ಉಪಸಂಪಾದಕರು 1928–29; 'ವೀರಕೇಸರಿ' ಕನ್ನಡದ ದಿನ ಪತ್ರಿಕೆಯ ಸಂಪಾದಕರು 1928-29, 1933–35 ಮತ್ತು 1947ರಿಂದ; ವಾರ್ತಾ ದಿನ ಪತ್ರಿಕೆ ಸಂಪಾದಕರು 1940–43; ರಾಜಕೀಯ ಕಾರಣಕ್ಕಾಗಿ ಹಲವು ಸಾರಿ ಶಿಕ್ಷೆಯಾಗಿದೆ; ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರು 1940-42; ವಿಳಾಸ: ಶಂಕರಮಠ ಕಟ್ಟಡ, ಶಂಕರಪುರ, ಬೆಂಗಳೂರು-4.

ಸುಬ್ಬರಾಮಶೆಟ್ಟಿ, ರಾಜಸೇವಾಸಕ್ತ, ...ನಿಧಿ, ವ್ಯಾಪಾರಿ ಮತ್ತು ಕೈಗಾರಿಕೆಗಾ...ರು; ಮೈಸೂರು ಬ್ಯಾಂಕಿನ ಅಧ್ಯಕ್ಷರು; ಜನ್ಮ 1883; ವಿದ್ಯಾಭ್ಯಾಸಾನಂತರ ವ್ಯಾಪಾರ ಮತ್ತು ಸಾರ್ವಜನಿಕ ಸೇವಾ ಕ್ಷೇತ್ರ ಪ್ರವೇಶ; ಬೆಂಗಳೂರು ನಗರಸಭೆಯಲ್ಲಿ 20ವರ್ಷಗಳ ಸೇವೆ, ಮೂರಾವರ್ತಿ ನಗರಾಧ್ಯಕ್ಷರು; ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯಾವಿಧಾಯಕ ಸಭೆ ಸದಸ್ಯರಾಗಿದ್ದರು; ಸಂಸ್ಥಾನ ಹರಿಜನಸೇವಾಸಂಘಕ್ಕೆ ಹಲವರ್ಷ ಅಧ್ಯಕ್ಷರಾಗಿದ್ದರು; ಮೈಸೂರು ಮಂತ್ರಿ 1947-50; ಮೈಸೂರು ಬ್ಯಾಂಕಿನಲ್ಲಿ 17 ವರ್ಷದಿಂದ ಡೈರೆಕ್ಟರು.

ಸುಬ್ರಹ್ಮಣ್ಯ, ತಾಳಕೆರೆ; ಜನ್ಮ 1896; ವಿದ್ಯಾಭ್ಯಾಸಾನಂತರ 1921ರಲ್ಲಿ ಅಡ್ವೊಕೇಟರಾದರು; ಅದೇ ವರ್ಷ ಕಾಂಗ್ರೆಸಿಗೆ ಪ್ರವೇಶ; ಅನೇಕ ಸಾರಿ ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಿ, ಜೈಲುವಾಸ; 1942–45ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರು; 1948-49ರಲ್ಲಿ ಮೈಸೂರು ರಾಜ್ಯಾಂಗ ಸಭೆಯ ಅಧ್ಯಕ್ಷರು; ಗೋಪಾಲರಾವ್ ಸಮಿತಿ ಸದಸ್ಯರು 1948–50; ಮೈಸೂರು ವಿಧಾನಸಭೆ ಸದಸ್ಯರು 1950-52.

ಸುಬ್ರಹ್ಮಣ್ಯಂ ಟೇಕೂರು, ಬಿ. ಎ., ಬಿ. ಎಲ್., ಕಾಂಗ್ರೆಸ್ ಮುಖಂಡರು, ಬಳ್ಳಾರಿ ಕಾಂಗ್ರೆಸ್ ಅಧ್ಯಕ್ಷರು. ಹರಿಜನ ಸೇವೆ, ಹಿಂದಿ ಪ್ರಚಾರ, ಖಾದಿ ಪ್ರಚಾರ, ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ವಿಶೇಷ ಪಾತ್ರವಹಿಸಿದ್ದಾರೆ. 'ಕರ್ನಾಟಕ ಕೇಸರಿ' ಎಂಬ ಪತ್ರಿಕೆ ನಡೆಸಿ, ಸ್ವರಾಜ್ಯ ಚಳುವಳಿಗೆ ಬೆಂಬಲವಿತ್ತರು. ದೇಶಕ್ಕಾಗಿ ಹಲವು ಸಲ ಜೈಲುವಾಸ ಅನುಭವಿಸಿದರು.

ಪಾರ್ಲಿಮೆಂಟಿಗೆ ಬಳ್ಳಾರಿಯಿಂದ 1952ರಲ್ಲಿ ಚುನಾಯಿತರಾದರು. ವಿಳಾಸ : ಬಳ್ಳಾರಿ.

ಸುಬ್ರಹ್ಮಣ್ಯರಾಜ ಅರಸು, ಎ. ವಿ., ರಾಜಸಭಾಭೂಷಣ, ಲೆ॥ ಕ॥ ಸರ್ದಾರ್ ; ಮೈಸೂರು ಮಹಾರಾಜರಿಗೆ ಆನರರಿ ಎ.ಡಿ.ಸಿ ಮತ್ತು ಮೈಸೂರು ಅರಮನೆ ಮಿಲಿಟರಿ ಭಕ್ಷಿಯಾಗಿ ನಿವೃತ್ತಿ ; ಯೂರೋಪು ಮತ್ತು ಇಂಗ್ಲೆಂಡ್‌ಗಳಲ್ಲಿ ಪ್ರವಾಸ ; ಕೈಲಾಸಪರ್ವತ ಬದರಿನಾಥ, ಕೇದಾರನಾಥ ಮತ್ತು ಭಾರತದ ಹಲವಾರು ಸ್ಥಳಗಳಿಗೆ ಮೈಸೂರು ಮಹಾರಾಜ ನಾಲ್ಮಡಿ ಕೃಷ್ಣರಾಜ ಒಡೆಯರೊಡನೆ ಭೇಟಿ. ನಿವಾಸ : ಲಕ್ಷ್ಮೀ ನಿಲಯ, ಲಕ್ಷ್ಮೀಪುರ, ಮೈಸೂರು.

ಸುಮಂಗಳಮ್ಮ ಅಲ್ಲಂ, ಮದ್ರಾಸು ಶಾಸನಸಭೆಯ ಸದಸ್ಯರಾಗಿದ್ದು ಕರ್ನಾಟಕ ಪ್ರಾಂತ ರಚನೆಗಾಗಿ ಒತ್ತಾಯಪಡಿಸಲು ರಾಜೀನಾಮೆ ಕೊಟ್ಟರು. ಮಹಿಳಾ ಸಮಾಜ, ಆಸ್ಪತ್ರೆ ಸಲಹಾ ಸಮಿತಿ ಮುಂತಾದ ಸಾರ್ವಜನಿಕ ಸಂಸ್ಥೆಗಳಲ್ಲಿ ಭಾಗ ವಹಿಸಿ ಸೇವೆ ಸಲ್ಲಿಸುತ್ತಿರುವರು. ವಿಳಾಸ : ಬಳ್ಳಾರಿ.

ಸೈಯದ್ ತಾಜ್‌ಪೀರಾ಼, ಎ. ಕೆ., ಮೊಯಿನ್ ಉಲ್ ವಿಶಾರತ್ ; ಜನ್ಮ 1875; 1904ರಲ್ಲಿ ಮೈಸೂರು ಸಿವಿಲ್ ಸರ್ವಿಸ್‌ಗೆ ಪ್ರವೇಶ ; ರೆವಿನ್ಯೂ ಕಮೀಷನರಾಗಿ ನಿವೃತ್ತರಾದರು. ಬೆಂಗಳೂರು ಅಶಕ್ತಪೋಷಕ ಸಭೆಯ ಅಧ್ಯಕ್ಷರು.

ಸೋಮನಾಥ ಐಯ್ಯರ್, ಎ. ಆರ್., ಮೈಸೂರು ಅಡ್ವೊಕೇಟ್ – ಜನರಲ್ ಆಗಿದ್ದರು. ಜನ್ಮ 1907 ; ವಿದ್ಯಾಭ್ಯಾಸ ಮುಗಿಸಿಕೊಂಡು 1930ರಲ್ಲಿ ಅಡ್ವೊಕೇಟರಾದರು ; ಹಲವು ಬ್ಯಾಂಕುಗಳ ಮತ್ತು ಇತರ ಸಂಸ್ಥೆಗಳ ವಕೀಲಿ ಸಲಹೆಗಾರರು ; ನಿವಾಸ : ಅನ್ನಪೂರ್ಣ, ಹೈಗ್ರೌಂಡ್ಸ್, ಬೆಂಗಳೂರು.

ಸೋಮಶೇಖರ ರಾವ್, ಎಂ. ಪಿ., ಅಡ್ವೊಕೇಟರು, ಬೆಂಗಳೂರು ; ಬೆಂಗಳೂರು ಸೆಂಟ್ರಲ್ ಕಾಲೇಜು, ಮೈಸೂರು ಮಹಾರಾಜ ಕಾಲೇಜು ಮತ್ತು ಬೊಂಬಾಯಿ ಲಾ ಸ್ಕೂಲುಗಳಲ್ಲಿ ವಿದ್ಯಾಭ್ಯಾಸ ; 1915 ರಲ್ಲಿ ಅಡ್ವೊಕೇಟರಾಗಿ ಪ್ರವೇಶ ; ಬೆಂಗಳೂರು ಪೌರಸಭೆ, ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳ ಸದಸ್ಯರಾಗಿದ್ದರು ; ಬೆಂಗಳೂರು ವಕೀಲ ಸಂಘದ ಅಧ್ಯಕ್ಷರಾಗಿದ್ದರು ; ನಿವಾಸ : 28, ಪುಟ್ಟಣ್ಣ ರೋಡ್, ಬಸವನಗುಡಿ, ಬೆಂಗಳೂರು-4 ; ಕಚೇರಿ : 696, ಚಿಕ್ಕಪೇಟೆ, ಬೆಂಗಳೂರು-2.

